Digitization by eGangotri and Sarayu Trust. Funding by MoE-IKS

ಹೆಂಡತಿ ನಕ್ಕಾಗ

033,3x1,1
K8

CC-0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,3x1,1 8383
K8

Spend
When wife laughs!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS
033,3x1,1 shri: Date- 1-8-19..
K8

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಂಡತಿ ನಕ್ಕಾಗ

M. V. VANDAL
NEWS AGENT
BAGALKOT

ಬೀChi

LIBRARY

ದರ್ಶನ ಪ್ರಕಾಶನ
ಅವೆನ್ಯೂ ರೋಡ್ :: ಬೆಂಗಳೂರು-೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಥಮ ಮುದ್ರಣ
ಫೆಬ್ರವರಿ, ೧೯೬೮

*

ಪಕ್ಕಗಳು
ಬೀChiಯುವರದು

*

ಚಿತ್ರಗಳು
ಕಾರ್ಟೂನಿಸ್ಟ್ ಮೂರ್ತಿ

*

ಬೆಲೆ
೨—೫೦

*

ಅಧಿಕೃತ ಮಾರಾಟಗಾರರು
ಗೀತಾ ಏಜನ್ಸೀಸ್
ಬಳೇಪೇಟೆ ಚೌಕ, ಬೆಂಗಳೂರು—೨

*

ಮುದ್ರಣ
ಜನಶಕ್ತಿ ಪ್ರಿಂಟರ್ಸ್
ಗಾಂಧಿನಗರ, ಬೆಂಗಳೂರು—೯

033,3x1,1
K8

Sri Jagadguru Vishwaradhya
Jnana Simhasan Jnanamandir
LIBRARY
Jangamwadi Math, Varanasi
Acc No. 8383

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಂಡತಿ ನಗುವ ಮುನ್ನ

ಬೆಂಗಳೂರಿನ ದರ್ಶನ ಪ್ರಕಾಶನದ ಒಡೆಯರು ಈ ಸಂಗ್ರಹವನ್ನು ಪ್ರಕಟಿಸುತ್ತಿದ್ದಾರೆ. ಇವರಿಗೆ ನನ್ನ ಧನ್ಯವಾದಗಳು ಸಲ್ಲಬೇಕು.

ಈ ಹೊತ್ತಿಗೆಯ ಬಗ್ಗೆ ಮುನ್ನುಡಿ ರೂಪದಲ್ಲಿ ಎರಡು ಮಾತನ್ನು ಉಲ್ಲೇಖಿಸುವುದು ಆತ್ಯವಶ್ಯ. ಇಲ್ಲವಾದಲ್ಲಿ ಓದುಗರಿಗೆ ವಂಚನೆ ಆದೀತು. ಇದರಲ್ಲಿ ಸಂಗ್ರಹಿಸಲಾಗಿರುವ ಲೇಖನಗಳೆಲ್ಲವೂ ಹೊಸವಲ್ಲ, ಎಲ್ಲವೂ ಹಳೆಯವೂ ಅಲ್ಲ. ಬಹು ಹಿಂದೆಂದೋ ಹಲ ಕೆಲ ಪತ್ರಿಕೆಗಳ ವಿಶೇಷ ಸಂಚಿಕೆಗಳಲ್ಲಿ ಹೊರ ಬಂದು ೧೯೬೭ರಲ್ಲಿ 'ತಿಂಮ ಬೋಧಾಮೃತ'ವೆಂಬ ಕಿರುಹೊತ್ತಿಗೆಯಲ್ಲಿ ಪ್ರಕಟಿತವಾದುವೆಲ್ಲವೂ ಇದರಲ್ಲಿ ಸೇರಿವೆ. ಕೇವಲ ಮೂರಾರುತಿಂಗಳ ಹಿಂದು ಸೃಷ್ಟಿಯಾದುವೂ ಈ ಸಂಗ್ರಹದಲ್ಲಿ ಬಂದಿವೆ. ಬಹು ಹಳೆಯವು, ತೀರ ಹೊಸವು ಸಮ್ಮಿಳನವಾಗಿ ಆಜ್ಜಿ, ಮೊಮ್ಮಗಳು ಒಟ್ಟಿಗೆ ಬಂದಂತಾಗಿದೆ ಎಂದಂದಲ್ಲಿ ಏನೂ ತಪ್ಪಿಲ್ಲ.

ಹಳತು, ಹೊಸತು ಎಂಬ ಮಾತಿಗೆ ಮಾನವನ ಜೀವನದಲ್ಲಿ ಹೆಚ್ಚು ಅರ್ಥವಿಲ್ಲ ಎಂಬುದು ನನ್ನ ನಂಬಿಕೆ. ಬಹು ಹಳತಾದುದು ಮತ್ತೊಂದು ಹೊಸತು. ವಿಚಾರ ಪ್ರಚೋದನೆಗೆ ನಿನ್ನೆ, ಇಂದು, ನಾಳೆಗಳೇ ಇಲ್ಲ. ಇದೇ ಅಲ್ಲವೆ ಬಾಳಿನ ಸ್ವಾರಸ್ಯ ?

ಹೆಂಡತಿ ನಗುತ್ತಾಳೆ. ಹೌದು, ನಗುತ್ತಾಳೆ. ಏಕೆ ? ಇದು ಅರ್ಥವಾದರೆ ಗಂಡ ಆಳಬೇಕು. ಇದನ್ನಿಲ್ಲಿಯೇ ವಿವರಿಸಿ ವಾಚಕರಿಗೆ ರಸಹಾನಿ ಮಾಡುವುದು ಬೇಡ. ತಿಂದು ನೋಡಿ ಎಂದಷ್ಟೆ ಹೇಳಿ ಮುಂದಿಟ್ಟು, ಹಿಂದು ಸರಿವುದು ಜಾಣತನವಾದೀತು. ಮುನ್ನುಡಿಯ ಮಾತು ಇಷ್ಟಕ್ಕೆ ಸಾಕೇ ಸಾಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ ಕನ್ನಡ ರಸಿಕ ಬಂಧುಗಳ ಉಪಕಾರವನ್ನು ಸ್ಮರಿಸದೆ ಇದನ್ನು ಮುಕ್ತಾಯಗೊಳಿಸಲಿ ? ಎರಡು ದಶಕ, ಮೇಲೆರಡು ವರ್ಷಗಳಿಂದ ನಾನವರ ವಿಶ್ವಾಸ, ಆದರಗಳನ್ನುಂಡು ಬೀಚಿಯಾಗಿದ್ದೇನೆ. ಉಸಿರಿರುವವರೆಗೂ—ಇನ್ನು ಬಹು ಹೆಚ್ಚು ಕಾಲವೇನಿಲ್ಲ ಅನಿಸುತ್ತದೆ—ನನ್ನ, ನನ್ನ ಓದುಗರ ಈ ಸಂಬಂಧಕ್ಕೆ ಚ್ಯುತಿ ಇಲ್ಲ. ಇದು ನನ್ನ ಪುಣ್ಯಭಾಗ್ಯ—ಇದೊಂದೇ ನನ್ನ ಪುಣ್ಯಭಾಗ್ಯ.

ನಮಸ್ಕಾರ.

೭–೨–೧೯೭೮
'ತಿಂಮನ ಮನೆ'
ನಂಜಪ್ಪ ರಸ್ತೆ, ಶಾಂತಿನಗರ
ಬೆಂಗಳೂರು–೨೭

ಹೀಗೆ
ಬೀChi

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಬೀchi" ಸಾಹಿತ್ಯ

೧ ರೇಡಿಯೋ ನಾಟಕಗಳು
೨ ಮಾತ್ರೆಗಳು
೩ ದಾಸಕೂಟ
೪ ತಿಂಮನ ತಲೆ
೫ ಹುಚ್ಚು ಹುರುಳು
೬ ಹನ್ನೊಂದನೇ ಅವತಾರ
೭ ಸತೀ ಸೂಳೆ
೮ ಸರಸ್ವತಿ ಸಂಹಾರ
೯ ಖಾದೀ ಸೀರೆ
೧೦ ಬೆಂಗಳೂರು ಬಸ್ಸು
೧೧ ಹೆಣ್ಣು ಕಾಣದ ಗಂಡು
೧೨ ಸತ್ತವನು ಎದ್ದು ಬಂದಾಗ
೧೩ ಚಿನ್ನದ ಕಸ
೧೪ ಕಾಣದ ಸುಂದರಿ
೧೫ ತಿಂಮ ರಸಾಯನ
೧೬ ಕಲ್ಲು ಹೇಳಿತು
೧೭ ಮೇಡಮ್ಮನ ಗಂಡ
೧೮ ಏರದ ಬಳೆ
೧೯ ಆಟೋ !
೨೦ ಎಲ್ಲಿರುವೆ ತಂದೆ ಬಾರೋ !
೨೧ ಎಲ್ಲರೂ ಸಂಪನ್ನರೆ
೨೨ ಟೆಂಟ್ ಸಿನೇಮಾ
೨೩ ಬಂಗಾರದ ಕತ್ತೆ
೨೪ ಬೆಳ್ಳಿಯ ತಿಂಮ ನೂರೆಂಟು ಹೇಳಿದ
೨೫ ಬ್ರಹ್ಮಚಾರಿಯ ಮಗ !
೨೬ ಮೂರು ಹೆಣ್ಣು—ಐದು ಜಡೆ
೨೭ ಮುರಿದ ಬೊಂಬೆ
೨೮ ಹುಲಿಯ ಬೆನ್ನ ಮೇಲಿಂದ
೨೯ ಸುನಂದೂಗೆ ಏನಂತೆ ?
೩೦ ಕಮಲಮ್ಮನ ಕುಂಕುಮ ಬಲ
೩೧ ಆರು ಏಳು ಸ್ತ್ರಿ ಸೌಖ್ಯ
೩೨ ಆಗಿಷ್ಟು—ಈಗಿಷ್ಟು
೩೩ ಸೀತೂ ಮದುವೆ
೩೪ ಲೇವಡಿ ಟೈಪಿಸ್ಟ್
೩೫ ಆರಿದ ಚಹಾ
೩೬ ಸಕ್ಕರೆ ಮೂಟೆ
೩೭ ಬೆಳ್ಳಿ ಪತ್ರಗಳು
೩೮ ಮಹಾ ಯುದ್ಧ
೩೯ ಲಕ್ಷ್ಮೀ ಪೂಜೆ
೪೦ ದೇವರು ಕೊಟ್ಟಿದ್ದು
೪೧ ಅಮ್ಮಾವ್ರ ಕಾಲ್ಗುಣ
೪೨ ಸಾಹುಕಾರ ಸುಬ್ಬಮ್ಮ
೪೩ ಸುಬ್ಬಿ !
೪೪ ಕತ್ತಲಲ್ಲಿ ಬಂದವಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಂಡತಿ ನಕ್ಕಾಗ

'ಕತ್ತಲಾದೊಡನೆ ಮನೆಗೆ ಬರಬೇಕೆಂಬುದು ದನಕ್ಕೂ ತಿಳಿಯುತ್ತೆ.'

'ಹೌದು. ಏನೀಗ ?'

'ನಿಮಗೆ ಮಾತ್ರ ತಿಳಿಯೋಲ್ಲ.'

'ನಾನು ದನ ಅಲ್ಲವಲ್ಲಾ ?'

'ನೀವಲ್ಲ ದನ. ನಿಮ್ಮನ್ನ ಕೈ ಹಿಡಿದ ನಾನು.'

ಹೀಗೆ ಚಿಕ್ಕದಾಗಿ ಸುರುವಾದ ಮಾತಿಗೆ ಮಾತು ಮುಕ್ತಾಯವಾಗುವುದು ಎಲ್ಲಿ ? ನದಿಯ ಉಗಮ ಎಲ್ಲಾದರೇನು ? ಹೇಗಾದರೇನು ? ಮುಕ್ತಾಯದ ಮಾರ್ಗ ಮಾತ್ರ ಯಾವಾಗಲೂ ಒಂದೇ–ನದೀನಾಂ ಸಾಗರೋ ಗತೀ:. ಗಂಡ ಹೆಂಡತಿಯ ಜಗಳದ ಅಂತ್ಯವೂ ಅಷ್ಟೇ. ನಾಲ್ಕು ಒದೆ, ಹೋ ಎಂದು ಅಳು, ಕಡೆಯಲ್ಲಿ ನಿರಶನ ವ್ರತ ಹೆಂಡತಿ ಎಂಬ ಪ್ರಾಣಿಗೆ ಮೀಸಲು. ಗಂಡ ? ಕ್ಲಬ್‌ಗೆ ವಾಪಸ್ ; ಅಲ್ಲಿ ಕ್ಯಾಂಟೀನ್ ಇದ್ದೇ ಇದೆ.

ಮೂರು ಮಕ್ಕಳ ತಂದೆ ಮುಕುಂದರಾಯ ; ಇನ್ನೂ ಬುದ್ಧಿ ಬರಬಾರದೇ ? ಈ ಮಾತನ್ನು ದಡ್ಡರಾಡಬೇಕು. ಮಕ್ಕಳಾಗುವುದಕ್ಕೂ ಬುದ್ಧಿ ಬರುವುದಕ್ಕೂ ಏನು ಸಂಬಂಧ ? ನೂರಾ ಒಂದು ಮಕ್ಕಳ ತಂದೆ ಧೃತರಾಷ್ಟ್ರರಾಯ. ಬುದ್ಧಿ ಬಂತೇ ಆತನಿಗೆ ? ಹುಚ್ಚು ಮಾತು.

'ಕರ್ಮ ಸವೆಸಲೇಬೇಕು.'

ಇದೊಂದೇ ಶಾಮಲಮ್ಮನ ಸಮಾಧಾನ. ಇದು ಮೂರ್ಖ ಸಮಾಧಾನ ಎಂದು ಕೆಲವರ ವಾದ ; ತಾವು ಜಾಣರೆಂದು ತಿಳಿದುಕೊಂಡವರ ವಾದ.

ಹೀಗಂದವರು ಬೇರೆ ಅದಾರೋ ಅಲ್ಲ ; ಶಾಮಲಮ್ಮನ ಸಾಕ್ಷಾತ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾಯಿಯೇ ಮಗಳಿಗೆ ಹೇಳಿದರು. ಒಂದು ಬಾರಿ, ಹತ್ತು ಬಾರಿ, ನೂರು ಬಾರಿ ಹೇಳಿದ್ದರು.

'ಮಕ್ಕಳನ್ನೂ ಅಲ್ಲೇಬಿಟ್ಟು ಕೈಬೀಸುತ್ತ ಬಂದುಬಿಡೇ ನೀನು ತವರಿಗೆ. ನೋಡೋಣ ನಿನ್ನ ಗಂಡ ಏನು ಮಾಡ್ತಾನೋ ಆಗ ?'

'ಛಿ !'

ಇಷ್ಟೇ ಮಗಳ ಉತ್ತರ.

ಗಂಡನಿಗೆ ಬುದ್ಧಿ ಕಲಿಸಬೇಕು, ದಾರಿಗೆ ತರಬೇಕು, ಸೂತ್ರದ ಬೊಂಬೆ ಮಾಡಿ ಅಂಗೈಯಲ್ಲಿ ಹಿಡಿದು ತಕತಕ ಕುಣಿಸಬೇಕು ಎಂಬಾಸೆ ಯಾವ ಹೆಂಡತಿಗೆ ಇಲ್ಲ ? ಇಷ್ಟನ್ನೂ ಬಯಸದ ಹೆಂಣು ಹೆಂಣೇ ? ಶಾಮಲಮ್ಮನೂ ಹೆಂಣು, ಪಾಪ. ಆದರೆ...ಆದರೆ...

'ಏನೇ ಆದರೆ, ಗೀದರೆ ?'

ಕೇಳಿ ಕಣ್ಣು ಕಿಸಿದು ದುರುಗುಟ್ಟಿ ಮಗಳ ಮುಖ ನೋಡಿದರು ಸುಂದ್ರಪ್ಪ.

ಶಾಮಲಮ್ಮನಲ್ಲಿ ವಾದಕ್ಕೆ ಸಾಮಗ್ರಿ ಇಲ್ಲ.

'ಪಾಲಿಗೆ ಬಂದದ್ದು ಪಂಚಾಮೃತ.'

ಮನಸ್ಸಿನ ಸಮಾಧಾನಕ್ಕೆ ಸರಕು ಮಾತ್ರ ಟನ್‌ಗಟ್ಟಲೆ ಇದೆ. ಬಾಳಿ ನೊಂದಿಗೆ ಹೊಂದಿಕೊಳ್ಳಲಿಕ್ಕೆ ವಕಾಲತ್ತಿನ ಚುರುಕು ಮತಿ ಬೇಕೇ ? ಹರಕು ನಾಲಿಗೆ ಬೇಕೇ ? ಸಹನೆ ಒಂದೇ ಸಾಕು. ತಾಳ್ಮೆ ಆಕೆಯ ತಪಸ್ಸು. ಅದು ಫಲ ಕೊಡುವದಾದರೆ ಕೊಡಲಿ, ಇಲ್ಲದಿದ್ದರೆ ಇಲ್ಲ. ಯಾವ ಹಟವೂ ಇಲ್ಲ ಆ ಪ್ರಾಣಿಗೆ. ಮನೆಗೆ ಬಂದು ಹತ್ತು ವರ್ಷದಲ್ಲಿ ಮೂರು ಮಕ್ಕಳಾದುವು.

'ಇದೇ ನನ್ನ ಭಾಗ್ಯ'

ಎಂದು ತನಗೆ ತಾನೇ ಹೇಳಿಕೊಂಡಳು ಶಾಮಲಮ್ಮ.

ಒಂದು ಬಾರಿ ಚಿಕ್ಕ ಮಗುವಿಗೆ ಮೂರು ದಿನಗಳಿಂದ ಮೈ ಚೆನ್ನಾಗಿಲ್ಲ. ಕೆಂಡದಂತಹ ಜ್ವರ. ಗಂಡನಿಗೆ ಹೇಳಿದಳು ಶಾಮಲಮ್ಮ ; ಮುಕುಂದರಾಯನ ಪ್ರತಿಕ್ರಿಯೆ ಏನು ? ಹುಲಿಯಂತೆ ಮೇಲೇರಿ ಬಂದ.

'ನೀನೇನು ಮನುಷ್ಯಳೋ ಅಥವಾ...'

ಮಗುವಿಗೆ ಜ್ವರ ಎಂಬುದನ್ನು ಗಂಡನಿಗೆ ತಿಳಿಸಲು ಹೆಂಡತಿಯಾದವಳಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರು ದಿನಗಳು ಬೇಕೇ ? ಆ ಕೂಡಲೆ ಹೇಳದಿದ್ದುದು ಶಾಮಲಮ್ಮನ ಮಹಾಪರಾಧ.

ಹೌದು, ಶಾಮಲಮ್ಮ ಮುಕುಂದರಾಯನಿಗೆ ಅಂದೇ ಏಕೆ ಹೇಳಲಿಲ್ಲ ? ಎರಡನೇ ದಿನವೂ ಹೇಳಲಿಲ್ಲ. ಯಾಕೆ ?

ಯಾವಾಗ ಹೇಳುವುದು ? ಗಂಡನ ಕಿವಿ ಹೆಂಡತಿಗೆ ಸಿಕ್ಕರಲ್ಲವೆ ?

ಈ ಮಾತನ್ನು ಮುಕುಂದರಾಯ ಒಪ್ಪುವುದಿಲ್ಲ. ನಿಜ. ಆದರೆ ಸತ್ಯಾಂಶವನ್ನು ಬಲ್ಲವರೇ ಬಲ್ಲರು.

ಮುಕುಂದರಾಯನ ಮತ್ತು ಶಾಮಲಮ್ಮನ ಮದುವೆ ಕತೆ ಬಹು ಸ್ವಾರಸ್ಯವಾದುದು. ಈಗ ಅದನ್ನು ಹೇಳಿದರೆ ಅಪ್ರಾಸಂಗಿಕವಾಗದು.

ಪುರೋಹಿತರಿದ್ದಾರೆ. ಪಂಚಾಂಗವೂ ಇದೆ. ಬಿಳೀ ರಿಮ್ ಕನ್ನಡಕ ಹಣೆಗೇರಿಸಿ ಮೂಗಿಗೆ ಪಂಚಾಂಗ ಹಿಡಿದು, ಗಂಟೆಗಟ್ಟಲೆ ವಾಸನೆ ನೋಡಿ ಮದುವೆ ಮೂಹೂರ್ತ ಇಟ್ಟುಕೊಟ್ಟರು. ಭಾನುವಾರ ಬೆಳಿಗ್ಗೆ ಗಂಟೆ ಹತ್ತೂ ಏಳಕ್ಕೆ ಸಲ್ಲುವ ಶುಭ ಲಗ್ನದಲ್ಲಿ ರಾಯರು ಹೆಣ್ಣಿಗೆ ತಾಳಿಕಟ್ಟಿ ಹೆಂಡತಿಯನ್ನು ಮಾಡಿಕೊಳ್ಳಬೇಕು—ಇದು ಆರ್ಯರು ನಿಶ್ಚಯಿಸಿದಂತೆ.

ಮದುವೆ ಗಂಡು ಮುಕುಂದರಾಯ ಮಾಡಿದ್ದೇನು ?

ನಿತ್ಯವೂ ಬಾಯಿ ಬಡಿದುಕೊಳ್ಳುವ ಭೂಪ ಹೋಳಿ ಹಬ್ಬ ಬಂದರೆ ಬಿಟ್ಟಾನೆಯೇ ? ಬೆಳಿಗ್ಗೆ ಎಂಟಕ್ಕೆದ್ದು ಬೆಡ್ ಕಾಫಿ ಮುಗಿಸಿ, ಪ್ರತಿ ದಿನವೂ ನೇರವಾಗಿ ಕ್ಲಬ್ಬಿಗೆ ಬಂದು ಇಸ್ಪೀಟು ಹಿಡಿಯುವುದು ರಾಯನ ಕಾರ್ಯಕ್ರಮ. ಭಾನುವಾರ ಬೆಡ್ ಕಾಫಿಯೂ ಕ್ಲಬ್‌ನಲ್ಲೇ ಆಗಬೇಕು. ಆ ದಿನದಂದು ಆತನ ಮದುವೆ ಮುಹೂರ್ತವೇ ? ಅದೂ ಬೆಳಿಗ್ಗೆ ಹತ್ತೂ ಏಳಕ್ಕೇ? ಪುರೋಹಿತರಿಗೆ ಬುದ್ಧಿ ಇದೆಯೇ ? ಕ್ಲಬ್ ಲೌಕಿಕ ಗೊತ್ತಿದೆಯೇ ?

'ನಾಳೆಯೂ ಕ್ಲಬ್‌ಗೆ ಹೋಗಿ ಕೂಡ ಬೇಡಾ, ಮುಕುಂದಾ' ಹಿಂದಿನ ರಾತ್ರಿಯೇ ತಂದೆ ಎಚ್ಚರಿಸಿದರು.

'ಛೆ, ಉಂಟೆ'

ಎಂದಿದ್ದರು ಮುಕುಂದ.

ಅಭ್ಯಾಸ ಬಲ, ಅಲ್ಲದೆ ಬೆಳಗಾದೊಡನೆ ಮದುವೆಯು ನೆನಪೇ ಹಾರಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೋಯಿತು. ಅಷ್ಟು ಹೊತ್ತಿಗೆ ಹಾಜರ್ ಮುಕುಂದರಾಯರು ಮೂರೆಲೆ ಟೇಬಲ್ ಮುಂದು.

ಬೀಗರು, ಬಿಜ್ಜರು, ಜೋಯಿಸರು, ಓಲಗ, ಮದುವಣಗಿತ್ತಿ, ಕಳಸಗಿತ್ತಿ—ಸಂಭ್ರಮವೋ ಸಂಭ್ರಮ. ಮದುವೆ ಮನೆಯೂ ಒಂದು ಪುಟ್ಟ ಸಿಟಿ ಮಾರ್ಕೆಟ್.

ಅರೆ, ಮಾರಾಟವಾಗುವ ಸರಕೇ ಮಂಗಮಾಯ-ಹಸೆಯ ಮೇಲೆ ವರ ಇಲ್ಲ.

'ಅವನೆಲ್ಲಿ ಹೋಗುತ್ತಾನೆ, ಪಾಪ. ಕ್ಲಬ್ಬಿಗೆ ಆಳು ಕಳಿಸಿ.' ಎಂದರು ಮುಕುಂದರಾಯನ ತಂದೆ.

ಹಿಂದೆಯೇ ಅದೇನೋ ಸಿಹಿ ಕಹಿ ನೆನಪು ವರನ ತಾಯಿಗೆ. ಬಾಯಲ್ಲಿ ಅಂದು ಕೊಂಡರು.

'ತಂದೆಯಂತೆ ಮಗ. ಇವರ ಸಮಾಚಾರ ನಾನು ಮರತೇನೆಯೆ ? ಶೋಭನದ ರಾತ್ರಿ ಬೆಳಗಿನ ಜಾವ ನಾಲ್ಕಕ್ಕೇ ಮನೆಗೆ ಬಂದಿದ್ದರು ಕ್ಲಬ್‌ನಿಂದ ಈ ಪುಣ್ಯಾತ್ಮರು.'

ಆಳಿನ ಮೇಲೆ ಆಳು ಕ್ಲಬ್‌ಗೆ ಓಡಿ ಆಯಿತು. ಮುಕುಂದರಾಯ ಏನೆಂದ ?

'ಬರ್ತೇನೆ ಕಣೊ, ಕೆಲಸ ಸಾಗಲಿ ಅಂತ ಹೇಳು.'

ಈ ಜೂಜು ಎಷ್ಟೂ ಒಳ್ಳೆಯದಲ್ಲ ಎಂದಂದಿದ್ದರು ಅದಾರೋ ಹಿರಿಯರು ಒಮ್ಮೆ. ಮುಕುಂದರಾಯ ಸಾಕ್ಷಾತ್ ಧರ್ಮರಾಯ—ನಕ್ಕುಬಿಟ್ಟ ಈ ಮಾತಿಗೆ.

'ಮದುವೆ ಆಗು ಎಂದು ಬುದ್ಧಿವಾದ ಹೇಳುವ ಜನಕ್ಕೆ ಜೂಜಾಡಬೇಡ ಎಂದು ಹೇಳುವ ಅಧಿಕಾರ ಇಲ್ಲ. ಜೀವನದಲ್ಲಿ ಮದುವೆಗಿಂತ ದೊಡ್ಡ ಜೂಜು ಇನ್ನೊಂದಿದೆಯೇ ಸ್ವಾಮೀ ? ' ಎಂದು ಕೇಳಿಬಿಟ್ಟಿದ್ದ.

ಕಾದು ಕಾದು ಬೇಸತ್ತು ಕಡೆಗೆ ಪುರೋಹಿತರೇ ಕ್ಲಬ್‌ಗೆ ಬಂದುಬಿಟ್ಟರು.

'ಎಲ್ಲವೂ ಅಣಿಯಾಗಿದೆ ಮಾರಾಯಾ. ಕನ್ನೆಗಿಷ್ಟು ತಾಳಿ ಕಟ್ಟಿ ಬಂದು ಮತ್ತೆ ಆಟಕ್ಕೆ ಕುಳಿತುಕೋ.'

'ಇಷ್ಟು ಮಾಡಿದ್ದೀರಿ, ಅಷ್ಟಕ್ಕೆಲ್ಲ ನಾನೇ ಬರಬೇಕೇ ? ನೀವೇ ಅದನ್ನೂ ಕಟ್ಟಿ ಆಯಿತು ಅನಿಸಿಬಿಡಿ.'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಛಿ ಛಿ.' ಎಂದು ಮೂಗು ಮುರಿದರು ಆ ಜುಟ್ಟಿನ ಸ್ವಾಮಿ. ಮಂತ್ರ ಪುರೋಹಿತನದು, ತಂತ್ರ ವರನದು ; ಒಂದೇ ಹಠ ಅವರದು.

'ಅದೆಲ್ಲ ಆಗೋಲ್ಲ ಮುಕುಂದರಾಯಾ, ಮಂಗಳಸೂತ್ರ ಮಾತ್ರ ನಿನ್ನ ಕೈಯಿಂದಲೇ ಕಟ್ಟಬೇಕು.'

'ಹಾಗೇನು ? ಆ ಹುಡುಗಿಯನ್ನೂ ಇಲ್ಲಿಗೇ ತಂದಿದ್ದರೆ...'

ಅಂತೂ ಬಂದರು ಮದುವೆ ಮಗ, ತಾಳಿಯನ್ನೂ ಕಟ್ಟಿದರು. ಯಾವಾಗ ? ಸಂಜೆ ಐದಕ್ಕೆ ಕಟ್ಟಿದರು—ಲಕ್ಷಣವಾಗಿ ರಾಹು ಕಾಲ.

ಈ ಮುಕುಂದರಾಯನಿಗೀಗ ಹೆಂಡತಿಯ ಮೇಲೆ ಸಿಟ್ಟು. ಮಗುವಿಗೆ ಮೈ ಬಿಸಿಯಾದ ಕೂಡಲೆ ಆಕೆ ಈತನಿಗೆ ಹೇಳಲಿಲ್ಲ. ಎಲ್ಲಿ ಹೇಳಬೇಕಿತ್ತು ? ಕ್ಲಬ್‌ನಲ್ಲೇ ?

ಶಾಮಲಮ್ಮನದು ಒಂದೇ ತತ್ವ—ಹಣ ಇದ್ದ ಗಂಡನನ್ನು ಕೈಹಿಡಿದರೂ ಋಣ ಇದ್ದಷ್ಟೇ ಪುಣ್ಯ.

ಸುಂದ್ರವ್ವ ಹಾಗಲ್ಲ. ಕತ್ತೆಯನ್ನೂ ಕುದುರೆ ಮಾಡಿಕೊಳ್ಳುತ್ತೇನೆಂಬ ಆಶಾವಾದಿ ಆ ಮುದುಕಿ. ಅವರ ಅನುಭವ ಅದು. ಮನೆಗೆ ಬಂದ ಮೂರು ತಿಂಗಳಲ್ಲಿಯೇ ಗಂಡನನ್ನು ಅಷ್ಟು ಚೆನ್ನಾಗಿ ಪಳಗಿಸಿಕೊಂಡಿದ್ದರು.

ಮಗಳ ಊರಿಗೆ ಹೋಗಿ ಬಂದವರೊಬ್ಬರು ಸುಂದ್ರವ್ವನನ್ನು ಖುದ್ದು ಕಂಡು ಹೇಳಿದರು.

'ನಿಮ್ಮ ಅಳಿಯದೇವರು ಮನೆಗೆ ಬಾರದೆ ಎಂಟು ದಿನ ಆಯಿತಂತೆ. ಕ್ಲಬ್‌ನಲ್ಲೂ ಇಲ್ಲವಂತೆ. ಉಡಿಯಲ್ಲಿ ಹಣ ಕಟ್ಟಿಕೊಂಡು ಇಸ್ಪೀಟು ಆಡುತ್ತ ಊರೂರು ಸುತ್ತುತ್ತಾನಂತೆ, ಗಳಗಳ ಅತ್ತಳು ಶಾಮಲೆ.'

ತುಟಿ ಕಚ್ಚಿದರು ಹಲ್ಲಿಲ್ಲದ ಸುಂದ್ರವ್ವ.

'ಅಳಿಯಂದೇನೂ ತಪ್ಪಿಲ್ಲ. ನನ್ನ ಮಗಳಿಗೇ ಬುದ್ಧಿ ಇಲ್ಲ, ಮಂಕು ಇದು.' ಆ ಕೂಡಲೇ ತಾರು ಹೋಯಿತು ಅಳಿಯನ ಹೆಸರಿಗೆ—ಸುಂದ್ರವ್ವನನ್ನು ಭೂಶಯನಕ್ಕೆ ಹಾಕಿದ್ದಾರೆ, ತಕ್ಷಣ ಬಂದವರಿಗೆ ಮಾತ್ರ ಮುಖದರ್ಶನ.

ಶಾಮಲಮ್ಮನ ಧರ್ಮಸಂಕಟ ಪರಮಾತ್ಮನಿಗೇ ಅರ್ಥವಾಗಬೇಕು.

ಗಂಡ ಊರಲ್ಲಿಲ್ಲ ; ಎಲ್ಲಿದ್ದಾನೆಂಬುದೂ ತಿಳಿಯದು, ತಾಯಿ ಸಾಯುತ್ತಿದ್ದಾಳೆ. ಮುಖ ನೋಡುವುದೂ ಬೇಡವೇ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಮ್ಮಪ್ಪ ಬಂದರೆ ಈ ತಾರು ತೋರಿಸು ಎಂದು ಹಿರಿಯ ಮಗನಿಗೆ ಹೇಳಿ, ಕೈ ಕೂಸನ್ನು ಕಂಕುಳಲೆತ್ತಿಕೊಂಡು ಮುಳುಮುಳು ಅಳುತ್ತ ಟಪಾಲು ಬಸ್ ಏರಿದಳು ಶಾಮಲಮ್ಮ. ತಲೆ ಆಡಿಸಿದ ಆ ಏಳು ವರ್ಷದ ಮನೆ ಯಜಮಾನ, ಅಳುತ್ತ ನಿಂತಿದ್ದ ಐದು ವರ್ಷದ ತಂಗಿಗೆ ಬೆಲ್ಲಕೊಟ್ಟು ಸುಮ್ಮನೆ ಮಾಡಿದ.

ಮುಕುಂದರಾಯ ಧರ್ಮರಾಯ ನಿಜ. ಆದರೆ ಮುಕುಂದರಾಯನ ಕಾಲ ಧರ್ಮರಾಯನ ಕಾಲ ಅಲ್ಲವಲ್ಲಾ ? ಪಣಕ್ಕಿಡಲು ಹಣವೇಬೇಕು ಈಗೆಲ್ಲ—ಆಗಿನಂತೆ ಹೆಂಡತಿಯನ್ನು ಇಡಲು ಬರುವಂತಿಲ್ಲ. ಪೊಲೀಸರ ಕಾಟ.

ಎಲ್ಲವನ್ನೂ ಕಳೆದು ಇನ್ನಿಷ್ಟು ಹಣಕ್ಕಾಗಿ ಮನೆಗೆ ಬಂದ ಮುಕುಂದರಾಯ. ಮನೆಯಲ್ಲಿ ಹಣ ಇಲ್ಲ. ಹೆಂಡತಿ ಇದ್ದೇ ಇರುತ್ತಾಳೆ, ಹೆಂಣಿನ ಮೈಮೇಲಿಷ್ಟು ಚಿನ್ನ ಇದ್ದೇ ಇರುತ್ತದೆ ಎಂಬುದು ಗಂಡನಿಗೆ ತಿಳಿಯದೆ ? '

ರಾತ್ರಿ ಒಂಬತ್ತಾಗಿದೆ, ದೀಪವಿಲ್ಲ. ಮಗಳು ಅದೆಲ್ಲೋ ಮೂಲೆಯಲ್ಲಿ ಅಳುತ್ತಿದೆ. ಮಗ ಗೊರಕೆ ಕೊರೆಯುತ್ತಿದ್ದಾನೆ. ಹೆಂಡತಿ ? ಮುಕುಂದ ರಾಯನ ಎದೆ ಎರಡಾಯಿತು. ಕಡ್ಡಿ ಕೊರೆದು ಲಾಂದ್ರ ಹಚ್ಚಿದ. ಬತ್ತಿ ಒಣಗಿದ ಮೀನು ಆಗಿದೆ. ಸೀಮೆ ಎಂಣೆ ಯಾವ ಸೀಸೆಯಲ್ಲಿದೆ ? ಈ ಮನೆಯ ಸಮಾಚಾರ ಮುಕುಂದರಾಯನಿಗೆ ಗೊತ್ತೆ ? ಪಾಪ ಪಾಪ. ಪಕ್ಕದ ಮನೆ ಯಿಂದ ದೀಪ ತಂದ. ಮಗನನ್ನು ಎಬ್ಬಿಸಿದ.

'ಎಲ್ಲಿ ಸಾಯಲು ಹೋದಳೋ ನಿನ್ನಮ್ಮ ಅನ್ನೋವ್ನು ? '

ನಿದ್ರೆ, ಹಸಿವು ಆ ಹುಡುಗನಿಗೆ. ಗೂಡಿನಲ್ಲಿದ್ದ ತಾರು ಕೈಗಿತ್ತು ಮತ್ತೆ ಹೋಗಿ ಮಲಗಿತು ಅದು.

'ಸಾಯುತ್ತಿರುವುದು ನನ್ನತ್ತೆ ಅಲ್ಲ—ನಾನು.' ಎಂದು ತುಟಿಯಲ್ಲೇ ಅಂದುಕೊಂಡ ರಾಯ. ಅದು ಹೇಗೆ ಕೇಳಿಸಿತೋ ಅದಕ್ಕೆ, ಅಸ್ತು ಅಸ್ತು ಎಂದು ಲೊಚಗುಟ್ಟಿತು ಗೋಡೆಯ ಮೇಲಿದ್ದ ಹಲ್ಲಿ.

ನಿಂತಲ್ಲಿಯೇ ಒಂದುಸಲ ಕಂಣೋಡಿಸಿದ ಮುಕುಂದರಾಯ. ಹೇಗಿದೆ ಮನೆ ?

ಮೂರು ದಿನ ಆಗಿದೆ ಕಸ ಗುಡಿಸಿ—ಹೌದು ಮೂರೇ ದಿನ ಮಾತ್ರ. ಎಲ್ಲೆಲ್ಲಿಯೂ ಬಟ್ಟೆಬರೆ, ಹಾಸಿಗೆ ಯಾರು ಸುತ್ತಬೇಕು ? ಬಾಗಿಲೆದ್ದುರಿನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೊರಕೆ. ಥೂ ಥೂ ಎಂದುಕೊಳ್ಳುತ್ತಾ ಒಳಗಡೆ ಬಂದ. ಮಕ್ಕಳು ಎಂದೋ ಊಟ ಮಾಡಿವೆ, ಎಂಜಲು ತಟ್ಟೆ ಒಣಗಿವೆ. ಮುಸುರೆ ಪಾತ್ರೆಗಳಲ್ಲೆಲ್ಲ ಸ್ವಚ್ಛಂದವಾಗಿ ಜಿರಲೆ ಸಂಚಾರ.

ಇದು ನನ್ನ ಮನೆಯೇ ?

ಶಾಮಲಮ್ಮ ಎಂತಹ ಹೆಂಡತಿ ? ಸುಖವೋ ಕಷ್ಟವೋ, ಮನೆಯಲ್ಲಿ ಏನಿದೆಯೋ ಇಲ್ಲವೋ ? ಮನೆ ಕೆಲಸದಲ್ಲಿ ಮಾತ್ರ ಎಷ್ಟು ಓರಣ ? ಎಂತಹ ಚಾಕಚಕ್ಯ ? ಅದೇನು ಓಪ್ಪು ? ಮನೆಯಂತೂ ಕನ್ನಡಿ.

ಅಂತಹ ಮನೆ ಹೀಗಿರಬೇಕೆ ? ಉಸಿರು ಕಟ್ಟಿದಂತಾಯಿತು. ಸಾಕ್ಷಾತ್ ನರಕ. ಇಲ್ಲಿರುವುದು ಮುಕುಂದರಾಯನಿಂದ ಆದೀತೇ ?

ಸಾಧ್ಯವಿಲ್ಲ ನಿಜ. ಆದರೆ ಹೋಗುವುದೆಲ್ಲಿಗೆ ? ಕ್ಲಬ್ ಎಲ್ಲವೂ ಹಾಳಾಗಿ ಹೋಗಿ ದೇವಾಲಯಗಳಾದುವೇ ?

ಕ್ಲಬ್ ಇವೆ ನಿಜ. ಆದರೆ ಮಕ್ಕಳ ಗತಿ ?

ಇದ್ದಕ್ಕಿದ್ದಂತೆ ಮುಕುಂದರಾಯ ಮನುಷ್ಯನಾದ. ಏಕೆ ?

ಹೌದು, ಹೆಂಣೆಂಬುದೊಂದು ಇದ್ದಿರದಿದ್ದರೆ ಮನುಷ್ಯ ಮನುಷ್ಯನಾಗಿಯೇ ಇರುತ್ತಿದ್ದ. ಹೆಂಣು ಮಾನವನನ್ನು ಮೃಗವಾಗಿ ಮಾಡಿತು.

ಶಾಮಲಮ್ಮ ಇದ್ದಿರದಿದ್ದರೆ ಮುಕುಂದರಾಯ ಮಕ್ಕಳನ್ನು ಕಂಣಲ್ಲಿಟ್ಟು ಕೊಂಡು ಪೋಷಣೆ ಮಾಡುತ್ತಿದ್ದ. ಶಾಮಲಮ್ಮ ಇಲ್ಲದೆ ಈ ಮಕ್ಕಳೆಲ್ಲಿ ? ಇದುವೇ ಮಾನವ ಜೀವನದ ವಿಷವ್ಯೂಹ.

ಯಜಮಾನರು ಏನಾಗಿಹೋದರು ? ಮನೆಯವಳು ಇಲ್ಲ, ತಾವೇ ಮನೆಯವರು ಈಗ. ಕಸ, ಮುಸುರೆ, ಮಕ್ಕಳಿಗೆ ಸ್ನಾನ, ಸಮಯಕ್ಕೆ ಊಟ. ಶುಭ್ರವಾಗಿ ಬಟ್ಟೆ ಒಗೆದು ಒಣಗಿಸಿ ಮಡಿಸಿ ಇಟ್ಟರು. ಹೋಟೆಲಿಂದ ಊಟ ತರಿಸಿದರೆ ಹಣ ಹಾಳು. ಚಿಕ್ಕ ಪಂಚೆ ಉಟ್ಟು ಒಲೆ ಮುಂದು ಕುಳಿತು ಅಡುಗೆ ಮಾಡಿದರು. ಇಪ್ಪತ್ನಾಲ್ಕು ಗಂಟೆಗಳಾಗಿಲ್ಲ, ಗಂಡನೆಂಬ ಸಿಂಹ ಪಳಗಿ ಗ್ರಾಮಸಿಂಹ ಆಗಿಹೋಯಿತು.

ಸಂಜೆ ಬಸ್ಸಿಗೇ ಶಾಮಲಮ್ಮ ಇಳಿದರು. ಆ ಪ್ರಾಣಿಯ ಎದೆ ಡಬಡಬ ನೂರ್ಮಡಿ. ದೇವರು ರೆಕ್ಕೆ ಕೊಟ್ಟಿದ್ದರೆ ಹಾಗೆಯೇ ಹಾರಿ ಬರುತ್ತಿದ್ದಳು, ಪಾಪ. ಮಕ್ಕಳ ಗತಿ ಏನಾಗಿದೆಯೋ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಸ, ಶುದ್ಧ ಮೋಸ. ಹೆತ್ತ ತಾಯಿ ಮೋಸ ಮಾಡುವುದೇ ? ಇನ್ನು ತವರುಮನೆ ಹೊಸ್ತಿಲನ್ನು ತುಳಿದಾಳೆಯೇ ಆಕೆ ?

ಒಳಬಾಗಿಲಲ್ಲಿ ಕಾಲಿಟ್ಟಳು ಶಾಮಲಮ್ಮ, ತಬ್ಬಿಬ್ಬಾದಳು. ತಾನಿಲ್ಲದ ತನ್ನ ಮನೆ ಇಷ್ಟು ಚೊಕ್ಕಟ. ಹೊಸಲು ಸಾರಿಸಿದ್ದಾರೆ, ರಂಗವಲ್ಲಿ.

ಹೆಣ್ಣಲ್ಲವೆ ಶಾಮಲಮ್ಮ ? ತಲೆಯಲ್ಲೊಂದು ಯೋಚನೆ ಪಕ್ಕನೆ ಸುಳಿಯಿತು. ಮುಖದಲ್ಲಿ ಕಾರ್ಮೋಡ.

ಗಂಡ ಶುದ್ಧ ಜೂಜುಗಾರ, ಆ ನೋವನ್ನು ನುಂಗಿದ್ದಳು. ಒಂದೆರಡು ಬಾರಿ ಕ್ಲಬ್‌ನಿಂದ ಬಂದಾಗ ಬಾಯಿ ನಾರುತ್ತಿತ್ತು.

ಗಂಡಸರು ಅಷ್ಟೇ ಸರಿ ಎಂದು ಸಹಿಸಿದ್ದಳು.

ಈ ಇದು !

ಗಂಡನ ಸರ್ವಾಪರಾಧಗಳನ್ನೂ ಹೆಣ್ಣು ಕ್ಷಮಿಸುತ್ತದೆ. ಈ ಒಂದನ್ನು ಮಾತ್ರ...

ಅಡುಗೆ ಮನೆಯಲ್ಲಿ ಕಾಲಿಡಲು ಅಂಜಿತು ಶಾಮಲಮ್ಮನ ಮನಸ್ಸು. ಅಯ್ಯೋ ದೇವರೆ ! ಆ ದೃಶ್ಯವನ್ನೂ ತೋರಿಸುತ್ತೀ ಏನಪ್ಪಾ.

ಮುಕುಂದರಾಯ ಮಕ್ಕಳಿಗೆ ಊಟ ಮಾಡಿಸಿ ಆಗಿದೆ. ಓರಣವಾಗಿ ಆಚೆ ಇಟ್ಟು ಮುಚ್ಚಿ ಶುದ್ಧ ಮಾಡಿದ್ದಾನೆ. ಚಿಕ್ಕ ಮಗಳ ಕೈ ಬಾಯಿ ತೊಳೆಯುತ್ತಿದ್ದಾನೆ.

ಏನಾಯಿತೋ ಶಾಮಲಮ್ಮನಿಗೆ, ಪಾಪ. ಗಂಡನಿಂದ ಹೀಗೆ ಸೇವೆ ತೆಗೆದುಕೊಂಡರೆ ಹೆಂಡತಿಗೆ ನರಕ ತಪ್ಪೀತೇ ? ತಡೆಯಲಾಗಲಿಲ್ಲ, ಅಳು ಕೋಡಿ ಒಡೆಯಿತು.

ಮುಕುಂದರಾಯನಿಗೆ ಸಂದರ್ಭ ಅರ್ಥವಾಗಿಹೋಯಿತು. ಮರುಕದಿಂದ ಕೇಳಿದರು.

'ಹೇಗಿದ್ದಾರೆ ನಿನ್ನ ತಾಯೀ ? '

'ನನ್ನ ತಾಯಿಗೆ ಏನು ಮಣ್ಣೂ ಆಗಿಲ್ಲ ಕಣ್ರೀ. ನಾನು ಮಹಾ ಪಾಪಿ ಆದೆ. ನನ್ನನ್ನು ಕ್ಷಮಿಸಿ.'

ಗಂಡನ ಕಾಲು ಮುಟ್ಟಿದಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತ್ತಿನಲ್ಲಿದ್ದ ಒಂದೆಳೆ ಚಿನ್ನದ ಚೈನು ಕಂಣಿಗೆ ಬಿತ್ತು. ಯಾವ ಗಂಡ ಕ್ಷಮಿಸುವುದಿಲ್ಲ ?

ಅರ್ಧ ನಿಮಿಷದಲ್ಲಿ ಬಟ್ಟೆ ಧರಿಸಿದ, ಕಾಲು ನಿಮಿಷದಲ್ಲಿ ಮಾಯವಾದ ಮುಕುಂದರಾಯ. ಮನುಷ್ಯ ಮೃಗವಾಯಿತು.

ಶಾಮಲಮ್ಮನ ತುಟಿಯ ಮೇಲೆ ಚಿಕ್ಕೊಂದು ಕಳ್ಳನಗು ಸುಳಿದೋಡಿತು. ಅದರರ್ಥ ಮುಕುಂದರಾಯನಿಗೇನು ಗೊತ್ತು, ಪಾಪ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನಗೂ ಮದುವೆಯಾಗಿದೆ

"ನಮ್ಮದು ತ್ಯಾಗಕ್ಕೆ ಹೆಸರಾದ ರಾಷ್ಟ್ರ."

"ನಾವು ಅಲ್ಲ ಎಂದೆವೆ ?"

ಹಿಂದೆಯೇ ನುಡಿದ ತಿಂಮ ಕಳ್ಳ ದನಿಯಲ್ಲಿ. ಬೇರೆ ಕೆಲಸವಿದ್ದರೆ ತಾನೆ ಈ ಪೋಲಿಗೆ ? ಕೆಲಸವಷ್ಟೇ ಏಕೆ ? ಸಂಸ್ಕೃತಿ ? ಅದು ಇದ್ದಿದ್ದರೆ ಹೀಗೇಕೆ ಆಡುತ್ತಿದ್ದ ? ಅವನಿಗೆ ಸಂಸ್ಕೃತಿ ಇರಲಿಲ್ಲವೆಂದು ಪ್ರತ್ಯೇಕವಾಗಿ ದಡ್ಡರು ಶತ ದಡ್ಡರಿಗೆ ಹೇಳಬೇಕು, ಅಷ್ಟೆ.

ಪಾಪ ! ಭಾಷಣಕಾರರು ಪರ ಊರಿನಿಂದ ಬಂದಿದ್ದಾರೆ. ನಾವೇನು ಅವರಿಗೆ ಹೊರಿಸಿ ಕೊಡುವುದಿದೆಯೆ ? ಕೇವಲ ಗಾಡಿ ಹಾಸಲು ತೆಗೆದುಕೊಂಡು ಇಷ್ಟು ದೂರ ಅದೇಕೆ ಬರಬೇಕು ಅವರು ?

"ಏನೋ, ಅಷ್ಟು ವಿಶ್ವಾಸವಾಗಿ ಕರೆಯುತ್ತಾರೆ. ಅದೇಕೆ ಇಲ್ಲ ಅನ್ನ ಬೇಕು ? ಕೊಂಚ ಶ್ರಮವಾಗುತ್ತದೆ, ನಿಜ. ಆಗಲಿ, ಜನರ ವಿಶ್ವಾಸ ದೊಡ್ಡದು. ಅಲ್ಲದೆ, ಜ್ಞಾನಪ್ರಸಾರ ಎಲ್ಲ ಜ್ಞಾನಿಗಳೂ ಮಾಡಬೇಕಾದ ಕೆಲಸ, ಹೋಗಿ ಬಂದರಾಯಿತು"

ಎಂಬ ಸದಿಚ್ಛೆ, ಉಪಕಾರ ಬುದ್ಧಿಗಳಿಂದ ಈ ಅಸಾಮಾನ್ಯ ಭಾಷಣ ಕಾರರು ಬಂದಿದ್ದಾರೆ. ಅವರನ್ನು ಗೇಲಿ ಮಾಡುವುದೆ ?

ಪೋಲಿ ಮುಂಡೇವಕ್ಕೆ ನಾವೇನು ಮಾಡುವುದಕ್ಕಾಗುತ್ತದೆ ? ಕಾಂಪೌಂಡು ಗೋಡೆಯ ಮೇಲೆ ಕೂಡುವುದು, ದೊಡ್ಡವರನ್ನು ಅಣಕಿ ಸುವುದು—ಛೀ, ನಾಚಿಕೆಗೇಡು !

"ಪ್ರಾಣವನ್ನು ತೃಣವೆಂದು ತಿಳಿದು ತ್ಯಾಗ ಮಾಡಿದ್ದಂತಹ ಜನಾಂಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮದು. ಪರಹಿತ, ದೇಶದ ಕ್ಷೇಮ, ಆತ್ಮಶ್ರೀಗಳಿಗಾಗಿ ದೇಹವಿತ್ತ, ಪಂಚಪ್ರಾಣಗಳನ್ನೂ ತ್ಯಾಗ ಮಾಡಿದವರು ನಾವು......"

ಅತ್ಯದ್ಭುತವಾಗಿ ಕಾವೇರಿತು ಭಾಷಣ. ಬಾಯಿ ಬಿಟ್ಟು ಕುಳಿತಿದೆ ಇಡೀ ಸಭೆ. ಮೈಯೆಲ್ಲವೂ ಕಿವಿಯಾಗಿ ಕೇಳುತ್ತಿದೆ. ಶ್ರೋತೃವೃಂದ ಮೈಮರೆತಿದೆ.

"ಯಾವ ಶತಮಾನದ ಚರಿತ್ರೆಯನ್ನೇ ತೆಗೆದುಕೊಳ್ಳಿ. ಎಂದೂ ತ್ಯಾಗ ಮಾಡಲು ಹಿಂಜರಿದವರಲ್ಲ ನಾವು. ರಾಜ್ಯಗಳನ್ನು ಕೊಟ್ಟವರಿದ್ದಾರೆ ನಮ್ಮಲ್ಲಿ. ಮನೆ, ಮಠಗಳನ್ನು ತ್ಯಾಗ ಮಾಡಿದ್ದಾರೆ. ಕೆಲವರು ಇದ್ದ ಕೊಂಚ ಬುದ್ಧಿಯನ್ನೂ ತ್ಯಾಗ ಮಾಡಿ ಬಿಟ್ಟಿದ್ದಾರೆ."

ಖೊಳ್ಳೆಂದು ನಕ್ಕುಬಿಟ್ಟಿತು ಇಡೀ ಸಭೆ.

"ಇನ್ನೂ ಕೆಲವರು ಅದನ್ನೂ ಮಾಡಲಿಲ್ಲ. ಇದ್ದರಲ್ಲವೆ ತ್ಯಾಗ ಮಾಡಲಿಕ್ಕೆ ?"

ತಿಂಮ ಟೀಕೆ ಮಾಡಿದ.

'ಮುಂಡೇದೆ ! ಎಂತಹ ಜಾಣ ಮಾತಿದು'

ಎಂದೆನಿಸಿತು ನನಗೆ. ಅಲ್ಲವೆ ಮತ್ತೆ ? ಬುದ್ಧಿಯನ್ನು ತ್ಯಾಗ ಮಾಡಲು ಅವರಿಗೆ ಇರಬೇಡವೆ ಅದು ? ಒಂದಂತೂ ಸತ್ಯ—ಕಾಂಪೌಂಡ್ ಗೋಡೆಯ ಮೇಲಿನ ಈ ತಿಂಮನಿಗೆ ಬುದ್ಧಿ ಇದೆ. ಆದರೆ ಅವನು ಅದನ್ನು ತ್ಯಾಗ ಮಾಡಿಲ್ಲ. ಮೆಚ್ಚಿಕೊಂಡೆ. ಆದರೆ ಇದೆಲ್ಲ ತಲೆ ಹರಟೆ ಏನು ? ಅಲ್ಲಿ ಆ ಜ್ಞಾನಿಗಳು ಭಾಷಣ ಮಾಡುತ್ತಿರುವುದೇನು ? ಇವನು ಇಲ್ಲಿ ಕುಳಿತು ಬಾಯಿಗೆ ಬಂದಂತೆಲ್ಲ ಹರಟುವುದೇನು ?

"ನಾವು ಎಂತಹವರು ? ನಮ್ಮ ದೇಶವೆಂತಹುದು ? ಬೇರೆ ಉದಾಹರಣೆ ಬೇಡವೇ ಬೇಡ. ಒಂದೇ ಒಂದನ್ನು—ಏಕಮಾತ್ರವಾದುದನ್ನು—ಹೇಳುತ್ತೇನೆ. ಮುಂದು ಇಡುತ್ತೇನೆ. ನಿಮ್ಮ ಮುಂದು ಇಡುತ್ತೇನೆ. ನಾನು ನಿಮ್ಮ ಮುಂದು ಇಡುತ್ತೇನೆ......"

ಭಾಷಣಕಾರರು ಇಡೀ ಸಭೆಯನ್ನೆತ್ತಿ ತಮ್ಮೊಂದಿಗೆ ಒಯ್ಯುತ್ತಿದ್ದಾರೆ. ಗೇರುಸೊಪ್ಪೆಯ ಧುಮುಧುಮು ಧಬೆ ಅವರ ವಾಗ್ಝರಿ !

"...ಸರ್ವಾಂತರ್ಯಾಮಿಯಾದ ಆ ದೇವನು, ಆ ಜಗಜ್ಜನಕನು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಪರಮಾತ್ಮನು ಒಂದಲ್ಲ—ಎರಡಲ್ಲ, ಮೂರಲ್ಲ—ಆರಲ್ಲ, ಒಂಭತ್ತಲ್ಲ, ಹತ್ತು ! ಹತ್ತು ಬಾರಿ, ಹತ್ತು ಸಲ ದಶಾವತಾರಗಳನ್ನು ಮಾಡಿದ. ಹತ್ತು ಅವತಾರ ಗಳನ್ನು ಎತ್ತಿದ. ಆದರೆ ಎಲ್ಲಿ ? ನಮ್ಮ ದೇಶದಲ್ಲಿಯೇ ! ಭಾರತದಲ್ಲಿಯೇ ! ಅದೇಕೆ ? ಇಂಗ್ಲೆಂಡಿನಲ್ಲಿ ಏಕೆ ಜನ್ಮವೆತ್ತಲಿಲ್ಲ ? ಅಮೆರಿಕದಲ್ಲಿ ಅದೇಕೆ......"

"ಅವನಿಗೆ ಇಂಗ್ಲೀಷ್ ಬರುತ್ತಿರಲಿಲ್ಲ"

ಮುಟ್ಠಾಳ ತಿಂಮ ಹಿಂದೆಯೇ ಹೇಳಿಬಿಟ್ಟ ! ದೇವನಿಗೆ ಇಂಗ್ಲೀಷ್ ಬರುತ್ತಿರಲಿಲ್ಲವಂತೆ, ಅದಕ್ಕೇ ಅವನು ಪಾಶ್ಚಾತ್ಯ ದೇಶಗಳಲ್ಲಿ ಅವತಾರ ಮಾಡಲಿಲ್ಲವಂತೆ. ಬರೀ ಹಿಂದಿಯೊಂದನ್ನೆ ಕಲಿತಿದ್ದನೆ ದೇವರು ಹಾಗಾದರೆ ? ವಿಷ್ಣು ಸಹಸ್ರ ನಾಮಕ್ಕೆ ಸಾವಿರದೊಂದನೆಯದನ್ನೂ ಸೇರಿಸಬೇಕಾಯಿತು—ಶ್ರೀ ಹಿಂದೀ ಪಂಡಿತಾಯೈ ನಮಃ !

"ಬಲಿ ಚಕ್ರವರ್ತಿ ಆಳಿ ಬಾಳಿದ ಪುಣ್ಯಭೂಮಿ ಇದು, ರುಕ್ಮಾಂಗದ ನಿಂತ ಪವಿತ್ರ ನೆಲವಿದು. ನಮ್ಮ ದೇಶ, ನಮ್ಮ ನಾಡು, ನಮ್ಮ ರಾಷ್ಟ್ರ—ನಮ್ಮ ದೇಶ, ನಾಡು, ರಾಷ್ಟ್ರ—ನಮ್ಮ ಭರತ ಭೂಮಿ ಅಸಾಮಾನ್ಯವಾದುದು. ಅದ್ಭುತವಾದುದು. ಚರಿತ್ರಾರ್ಹವಾದುದು, ಕೀರ್ತಿಗಳಿಸಿದ ನಾಡು. ದೇವರು ಗಳೇ ನಿಂತು ಕಟ್ಟಿದುದು ಇದು. ಇಲ್ಲಿ ತ್ಯಾಗಕ್ಕೆ ದಾರಿದ್ರ್ಯವೆ ?

"ಈ ಪುಣ್ಯ ಭೂಮಿಯಲ್ಲಿ ಹುಟ್ಟಿ ಬೆಳೆದು, ಬದುಕಿ, ಆಳಿದ ಭಾರತ ಮಾತೆಯ ಮುಕುಟದಲ್ಲಿ ಮಣಿಗಳು ಅನೇಕ. ಅವುಗಳಲ್ಲಿ ಒಂದಾದ ಮಹಾ ಪುರುಷ, ತ್ಯಾಗಜೀವಿ, ತ್ಯಾಗಮೂರ್ತಿ, ನಮ್ಮ ಇಂದಿನ ದಿನದ ಭಾಷಣದ ವಿಷಯವಾದ ಅಂದವಾದ, ಚೆಂದವಾದ, ಸುಂದರವಾದ, ಕಲಶಪ್ರಾಯವಾದ, ತೇಜೋನ್ಮುಖವಾದ ಸರ್ವತ್ಯಾಗಿ ಬುದ್ಧದೇವ."

ಕರತಾಡನವೇ ! ಕರತಾಡನ ! ಸಭೆ ಕಿವುಡಾಯಿತು, ಅರ್ಧ ನಿಮಿಷ, ಎರಡು ನಿಮಿಷ, ಎಂಟು ನಿಮಿಷ, ಹದಿನೈದು ನಿಮಿಷ ಕರತಾಡನವೆ !

ಈ ಅಲ್ಲ—ಆ ಕರತಾಡನವನ್ನು ನಿಲ್ಲಿಸಲು, ಭಾಷಣಕಾರರೇ ಬಾಯಿ ತೆರೆಯಬೇಕಾಯಿತು. ಪುನಹ ಸುರುವಾಯಿತು ವಿಚಾರವಂತವಾದ ಉಜ್ವಲ ಭಾಷಣ. ಭಗವಾನ್ ಬುದ್ಧದೇವ ಕಣ್ಮುಂದೆಯೇ ಬಂದು ನಿಂತ, ಎಲ್ಲರಿಗೂ.

"ಹೆಂಡತಿಯನ್ನು ಬಿಟ್ಟ..."

"ನಾನೂ ಬಿಟ್ಟಿದ್ದೇನೆ. ನಿನ್ನೆಯೇ ಹೆರಿಗೆಗೆ ತವರಿಗೆ ಕಳಿಸಿದ್ದೇನೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ನಬೇಕೆ ಗೋಡೆಯ ಮೇಲೆ ಕುಳಿತಿದ್ದ ಆ ತಿಂಮ ? ಹಿಡಿದು ಚೆನ್ನಾಗಿ ಕೆನ್ನೆಗೆ ಬಿಡಬೇಕು ಎರಡು, ಅಷ್ಟೆ.

"...ಮಡದಿ, ಮಗ, ರಾಜ್ಯ—ಅರಮನೆ, ಸಂಪತ್ತು—ವೈಭವ, ಸಿರಿ—ಸಿಂಹಾಸನ, ಸುಖ ಮತ್ತು ಸಂಪೂರ್ಣ ಸುಖ ಎಲ್ಲವನ್ನೂ ತ್ಯಜಿಸಿದ ಆ ದಿವ್ಯಮೂರ್ತಿ, ಆ ತೇಜಸ್ವಿ, ಆ ಪುಣ್ಯಪುರುಷ ಭಗವಾನ್ ಬುದ್ಧ. ಆತನು ಹಾಕಿಕೊಟ್ಟ ಹೆದ್ದಾರಿಯಲ್ಲಿ ಬಂದವರು ಬಾಪೂಜಿ—ರಾಷ್ಟ್ರಪಿತ. ತ್ಯಾಗ ! ತ್ಯಾಗವೇ ದೇವರು, ತ್ಯಾಗದಲ್ಲಿ ಭೋಗವಿದೆ. ತ್ಯಾಗದಲ್ಲಿ ಯೋಗವಿದೆ—ಅಲ್ಲ, ತ್ಯಾಗವೇ ಒಂದು ಮಹಾ ಯಾಗ. ತ್ಯಾಗವೇ ಜನದುಸಿರು. ಭೋಗವು ಅಸುರ, ತ್ಯಾಗವು ಅಮರ. ಭೋಗದಾಶೆ ಯಃಕಶ್ಚಿತ, ತ್ಯಾಗೇಚ್ಛೆ ಪೂಜಾರ್ಹ, ತ್ಯಾಗವೇ ಬುದ್ಧದೇವನು ಜಗತ್ತಿಗೆ ಉಪದೇಶ ಮಾಡಿದ ಪಾಠ.

ಬುದ್ಧಂ ಶರಣಂ ಗಚ್ಛಾಮಿ !
ಸಂಘಂ ಶರಣಂ ಗಚ್ಛಾಮಿ !
ಧರ್ಮಂ ಶರಣಂ ಗಚ್ಛಾಮಿ !!!

ಕೈಗಡಿಯಾರವನ್ನು ನೋಡಿಕೊಂಡರು ಭಾಷಣಕಾರರು. ಅವರ ಗಾಡಿಗೆ ಹತ್ತೇ ನಿಮಿಷವಿದೆ.

"ಹೂಂ, ಬೇಗ ಬೇಗ ಹೂಮಾಲೆ ಹಾಕಿ ಮುಗಿಸಿಬಿಡಿ. ಸ್ಟೇಷನ್‌ಗೆ ಹೋಗೋಣ"

ಎಂದವಸರ ಮಾಡಿದರು.

ಯಾರೋ ಒಬ್ಬರಾದರಾಯಿತು, ಜಂಟಿ ಕಾರ್ಯದರ್ಶಿಯೋ ತಂಟೆ ಕಾರ್ಯದರ್ಶಿಯೋ ! ಮುಗಿಯಿತು. ವಂದೇ ಮಾತರಂ ಮಾಡಿ, 'ಏಳು ಬೈ ಹನ್ನೊಂದು' ಕಾಫಿ ಗುಟುಕರಿಸಿ ಹೊರಟೆವು.

ಟಿಕೇಟು ಕೊಳ್ಳಲು ಮುಂದೊಬ್ಬ ಬೈಸಿಕಲ್ಲ ಮೇಲೆ, ಕುದುರೆ ಗಾಡಿಯಲ್ಲಿ ಭಾಷಣಕಾರರು ಮತ್ತು ನಾವು ಮೂವರು, ಉಳಿದವರೆಲ್ಲ ಕಾಲೇಶ್ವರ ಮೋಟಾರ್ ಸರ್ವೀಸ್ !

ಗಾಡಿ ಕೂ ಮಾಡಿತು, ಭಾಷಣಕಾರರು ಆ ಒಳಗಾಗಿ ಕುಳಿತಿದ್ದರು ಅದರಲ್ಲಿ.

"ಅರೆ !"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದ್ದಕ್ಕಿದ್ದಂತೆ ಬೆಚ್ಚಿಬಿದ್ದು ಅದೇನನ್ನೋ ಹುಡುಕಾಡಿದರು.

"ಸೀಟಿನ ಕೆಳಗಡೆ ಇಟ್ಟಿದ್ದೇನೆ ನಿಮ್ಮ ಕೈಚೀಲವನ್ನು."

ಕಾರ್ಯದರ್ಶಿ ಹೇಳಿದ. ಭಾಷಣಕಾರರ ಮುಖ ಬದಲಾಗಲಿಲ್ಲ.

"ಕೈಚೀಲ ಹಾಳಾಗಿ ಹೋಗಲಿ. ನನ್ನ ಹೂಮಾಲೆ! ಹಾರವೆಲ್ಲಿ, ಹಾರ ?"

ಅಲ್ಲಿದ್ದವರೆಲ್ಲ ತಬ್ಬಿಬ್ಬಾದರು—ಪೆಚ್ಚಾದುವು ಎಲ್ಲರ ಮುಖಗಳೂ.

"ಅಲ್ಲಿಯೇ ಮೇಜಿನ ಮೇಲೆ ಉಳಿಯಿತು."

ಜಂಟಿ ಕಾರ್ಯದರ್ಶಿಗಳು ಗೊಣಗಿದರು, ತಲೆ ಕೆಳಗೆ ಮಾಡಿ.

ತ್ಯಾಗಮೂರ್ತಿ ಭಾಷಣಕಾರರು ನಿಷ್ಠೂರವಾಗಿಯೇ ನುಡಿದರು.

"ಛೆ ಛೆ! ಅದನ್ನು ತರಲೇಬೇಕು ಈಗ. ಇನ್ನೂ ಒಂದು ನಿಮಿಷವಿದೆ. ಬೈಸಿಕಲ್ ಮೇಲೆ ಓಡಿ ಹೋಗಿ ತನ್ನಿ ಯಾರಾದರೂ."

"ನಾನು ತರುತ್ತೇನೆ ಬಿಡಿ ಸ್ವಾಮೀ"

ಯಾರು ಅಂದವರು ?

ಕಾಂಪೌಂಡ್ ಗೋಡೆಯ ಮೇಲೆ ಕುಳಿತು ಹುಚ್ಚು ಹುಚ್ಚು ಹರಟುತ್ತಿದ್ದ ಆ ತಿಂಮ! ಓಡಿದ.

ಹೀಗೆ ಹೋದ ಹಾಗೆ ಬಂದ. ಕೈಯಲ್ಲಿ ಹೂವಿನ ಹಾರ! ಕೊಟ್ಟ ಭಾಷಣಕಾರರಿಗೆ. ಕಾರ್ಯದರ್ಶಿ ಆಶ್ಚರ್ಯದಿಂದ ಕೇಳಿದ ಅವನನ್ನು ಮೆಲು ದನಿಯಲ್ಲಿ.

"ಇಷ್ಟು ಬೇಗ ಅದು ಹೇಗಯ್ಯಾ ತಂದಿ ?"

"ಹೊಸತನ್ನು ಕೊಂಡು ತಂದೆ, ಅಂಗಡಿಯಲ್ಲಿ. ಅದರ ಹಣೆಬರಹವೆಲ್ಲ ಎರಡೇ ರೂಪಾಯಿ."

ಗಾಡಿ ಕದಲುವ ಸೂಚನೆ ತೋರಿಸಿತು. ಹೂಮಾಲೆಯನ್ನು ಭದ್ರವಾಗಿಟ್ಟುಕೊಂಡರು ಆ ಮಹಾ ತ್ಯಾಗೇಂದ್ರರು.

ನಗೆಯಾಡಿ ಒಬ್ಬ ಕೇಳಿಯೇ ಬಿಟ್ಟ.

"ಅದೇನು ಸ್ವಾಮಿ ? ತ್ಯಾಗದ ಬಗ್ಗೆ ತಾವು ಮೂರು ಗಂಟೆಗಳ ಕಾಲ ಉಜ್ವಲ ಭಾಷಣ ಮಾಡುತ್ತೀರಿ, ಆ ದರಿದ್ರ ಹಾರವನ್ನೂ ತ್ಯಜಿಸಲೊಲ್ಲಿರಿ, ಸರಿಯೆ ಇದು ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹೊಸತನ್ನು ಕೊಂಡು ತಂದೆ, ಅಂಗಡಿಯಲ್ಲಿ...."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹೊಸತನ್ನು ಕೊಂಡು ತಂದೆ, ಅಂಗಡಿಯಲ್ಲಿ"
ತಿಂಮ ಹೇಳಿದ ಮೆಲ್ಲಗೆ, ಅವರ ಪರವಾಗಿ.
"ಮನೆಯಲ್ಲಿ ತೋರಿಸಲಿಕ್ಕೆ ಬೇಕಾಗುತ್ತದೆ. ಭಾಷಣಕ್ಕೆ ಹೋಗಿದ್ದ ರೆಂಬುದು ಅಮ್ಮ ಅವರಿಗೆ ನಂಬಿಕೆಯಾಗಬೇಕಲ್ಲ ?"
"ನಿನಗೆ ಹೇಗಯ್ಯ ಗೊತ್ತು ?"
ಬೆನ್ನ ಮೇಲೆ ಕೈಯಿಟ್ಟು ಕೇಳಿದರು ಭಾಷಣಕಾರರು,
"ನಾನೂ ಭಾಷಣಕಾರ ಸ್ವಾಮೀ, ನನಗೂ ಮದುವೆಯಾಗಿದೆ"
ಎಂದು ಹಲ್ಲು ಕಿರಿದ ತಿಂಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರಿಗೆ ಬೇಕು ಕಾಗದ?

"ಯಾರಿಗೆ ಬೇಕು ಕಾಗದ ?"

ಯಾರೇ ಬರಲಿ, ಏತಕ್ಕೇ ಬರಲಿ, ಯಾವಾಗಲೇ ಬರಲಿ, ಇದು ಎಲ್ಲರನ್ನೂ ಅವರು ಮೊದಲು ಕೇಳುತ್ತಿದ್ದ ಪ್ರಶ್ನೆ.

"ನಾನೂ...ನಾನು...ನನ್ನ ಪರಿಚಯ...ತಮಗೆ ಇಲ್ಲ ಗೌಡರೇ ? ನಾನೂ...ನನ್ನ......ನಾನೂ..."

"ಸರಿ, ಇರಲಿ ಬಿಡು. ಆಮೇಲೆ ಹೇಳುವೆಯಂತೆ, ನಿನ್ನ ಹೆಸರು, ಊರು ಎಲ್ಲವನ್ನೂ. ಈಗ ಮೊದಲು ಹೇಳು, ಯಾರಿಗೆ ಬೇಕು ಕಾಗದ ಎಂಬುದನ್ನು..."

ಹುಚ್ಚಗೌಡರು ಸಮಯವನ್ನು ಹಾಳು ಮಾಡುತ್ತಾರೆಯೇ ? ಮೇಜಿನ ಡ್ರಾಯರ್‌ನಿಂದ ಆ ಕೂಡಲೆ ತೆಗೆದರು ತಮ್ಮ 'ಲೆಟರ್ ಹೆಡ್'ಅನ್ನು. ಫೌಂಟನ್‌ಪೆನ್ನಿನ ಟೊಪ್ಪಿಗೆ ಅದರ ಬೆನ್ನೇರಿತು. ಈ ಗೌಡರೊಬ್ಬರ ಕಾಗದ ವನ್ನು ಪಡೆದರೆ ಮುಗಿದೇ ಹೋಯಿತು ತಿಂಮನ ಕೆಲಸ. ಗೌಡರು ಇಂತಹ ಕಾಗದಗಳನ್ನು ಎಷ್ಟು ಜನಕ್ಕೆ ಕೊಡಬೇಕೋ ನಿತ್ಯವೂ! ತಿಂಮನಿಗೆಲ್ಲಿದೆ 'ಟೈಮ್'ನ ಬೆಲೆ ?

ಆತ್ಮಚರಿತ್ರೆಯನ್ನು ಅನುಮಾನಿಸುತ್ತ ಆರಂಭಿಸಿದ ತಿಂಮ ಭೂಪ.

"ನನ್ನದೂ...ನಾನು..."

"ಬೇಗ ಹೇಳಯ್ಯ. ಏನು ನಾನೂ, ನನ್ನದೂ ? ಬರೀ ಇದೇ ಆಯಿತಲ್ಲ! ಯಾರಿಗೆ ಬೇಕು ಕಾಗದ, ಅದನ್ನು ಮೊದಲು ಹೇಳು."

"ಹೇಳುತ್ತೇನೆ ಸ್ವಾಮಿ, ನನ್ನ 'ಕೇಸೂ' ಏನೆಂದರೆ..."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಗಿಲು ಕಿರ್ರೆಂದಿತು. ಅದಾವನೋ ಒಬ್ಬ ಒಳದೂರಿದ. ಮಾಜಿ ಎಮ್ಮೆಲ್ಸಿಗಳು ಈ ದಿಕ್ಕಿಗೂ ನೋಡದೆ ಕೇಳಿದರು.

"ಯಾರಿಗೆ ಬೇಕು ಕಾಗದ ?"

"ಎಲೆಕ್ಟ್ರಿಕ್ ಎಂಜಿನಿಯರರಿಗೆ ಸ್ವಾಮಿ."

ಥಟ್ಟನೆ ಹೇಳಿದ ಆಗಂತುಕ.

ಪ್ರಸನ್ನವಾಯಿತು ಗೌಡರ ಮುಖ. ಮೆಚ್ಚುಗೆಯಿಂದ ನುಡಿದರು, ಅವನನ್ನು ನೋಡುತ್ತ.

"ರೈಟ್ ! ಹೀಗಿರಬೇಕು ಹುಡುಗರು. ಬಂದ ಕೆಲಸ 'ಝಟ್‌ಫಟ್' ಆಗಿಬಿಡಬೇಕು"

"ಕೊಂಚ ನಿಲ್ಲಯ್ಯಾ ನೀನು."

ತಿಂಮನನ್ನು ಕೈಬಿಟ್ಟರು ಮಾಜಿ ಎಮ್ಮೆಲ್ಸಿಗಳು. ಮುಂದಿದ್ದ 'ಲೆಟರ್‌ಹೆಡ್'ನೊಮ್ಮೆ ನೋಡಿದರು ಕಣ್ತುಂಬ. ಕಣ್ಣಿಂದಲೆ ಓದಿದರು ಕೂಡ.

"ಅಮರಾವತಿ ಹುಚ್ಚುಗೌಡರು, ಗತ ಮಾಜಿ ಎಮ್ಮೆಲ್ಸಿ, ಡಿಸ್ಟ್ರಿಕ್ಟ್ ಬೋರ್ಡ್‌ನ ಮಾಜಿ ಮೆಂಬರು, ಕೋಆಪರೇಟಿವ್ ಲೋನ್ ಅಂಡ್ ಸೇಲ್ ಸೊಸಾಯಿಟಿ ಲಿಮಿಟೆಡ್ (ಅಂಡರ್ ವಾಲಂಟರಿ ಲಿಕ್ವಿಡೇಷನ್)ದ ಹಾಲಿ ಡೆರೆಕ್ಟರು, ಜೈನ ದಿಗಂಬರ ರೆಡಿಮೇಡ್ ಡ್ರೆಸ್ ಷಾಪಿನಂಗಡಿಯ ಸಂಸ್ಥಾಪಕ ರಾದ ದೊಡ್ಡಗೌಡರ ಮೊಮ್ಮಕ್ಕಳು (ಮಗಳದ್ವಾರ), ಸ್ತ್ರೀಯರ ಹೆರಿಗೆ ಆಸ್ಪತ್ರೆ ಯಲ್ಲಿ ಒಂದು ಕೋಣೆಯನ್ನು ದಾನವಾಗಿ ಕಟ್ಟಿಕೊಟ್ಟ ದಿವಂಗತ ಹೆಡ್ಡಮ್ಮ ನವರ ದ್ವಿತೀಯ ಪುತ್ರರು, ಇತ್ಯಾದಿ ಇತ್ಯಾದಿ."

ತುಟಿಯಲ್ಲಿಯೇ ನಕ್ಕರು.

"ಈ ಲೆಟರ್ ಹೆಡ್ ನೋಡಿದ ತಕ್ಷಣವೇ ಕೈ ಮುಗಿಯಬೇಕು !"

ಹುಚ್ಚುಗೌಡರ ಆತ್ಮವಿಶ್ವಾಸದ ಮುಂದು ಆ ದೇವನ ಆತ್ಮವಿಶ್ವಾಸವನ್ನು ತಂದು ಸುಡಬೇಕು, ಅಷ್ಟೆ !

ಕಾಗದವನ್ನು ಆರಂಭಿಸಿಯೇ ಬಿಟ್ಟರು. ಗೋಡೆಗಿದ್ದ ಕ್ಯಾಲೆಂಡರನ್ನು ನೋಡಿ ದಿನಾಂಕವನ್ನು ಹಾಕಿ, ತಮ್ಮ ಬೃಹತ್ 'ಫೈಲು' ತೆಗೆದು ನೋಡಿ ಕ್ರಮಾಂಕವನ್ನೂ ಹಾಕಿದರು. ಬರೆಯುತ್ತಿದ್ದುದನ್ನು ಬಾಯಿಂದ ಅನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ತಿದ್ದರು ಗೌಡರು, ಪತ್ರಾರ್ಥಿಯಾಗಿ ಬಂದಿದ್ದ ಆಸಾಮಿಗೆ ಕೇಳುವಷ್ಟು ಗಟ್ಟಿಯಾಗಿ.

"ಎಲೆಕ್ಟ್ರಿಕ್ ಎಂಜನಿಯರೂ ಮತ್ತು ನನ್ನ ಪ್ರಿಯ ಆತ್ಮೀಯ ಸ್ನೇಹಿತರಾದ......"

ಒಂದು ಕ್ಷಣ ತಲೆ ಎತ್ತಿ, ಕೈಲಿದ್ದ ಪೆನ್ನಿನ ಟೊಪ್ಪಿಗೆಯನ್ನು ಹಲ್ಲಿಗೆ ಬಾರಿಸುತ್ತ,

"ಯಾರಯ್ಯ ಎಲೆಕ್ಟ್ರಿಕ್ ಎಂಜನಿಯರು ಈಗ? ಅವರ ಹೆಸರೇನು?"

"ಮಜುರೆ ಕಸ್ತೂರಿ ನೃಸಿಂಹ ಅಯ್ಯಂಗಾರರು ಮಹಾಸ್ವಾಮಿ."

"ರೈಟ್! ಹೀಗೆ ಚುರುಕಾಗಿರಬೇಕು."

ಬರವಣಿಗೆ ಮುಂದುವರಿಯಿತು. ಬರೆದುದರ ಪುನರುಚ್ಚಾರವೂ ಆಯಿತು.

"ಎಲೆಕ್ಟ್ರಿಕ್ ಎಂಜಿನಿಯರೂ, ಮತ್ತು ನನ್ನ ಪ್ರಿಯ ಆತ್ಮೀಯ ಸ್ನೇಹಿತರೂ ಆದ ಶ್ರೀ ಮಜುರೆ ಕಸ್ತೂರಿ ನೃಸಿಂಹರಂಗಯ್ಯಂಗಾರರಿಗೆ ಮಾಜಿ ಎಮ್ಮೆಲ್ಸಿಗಳಾದ ಶ್ರೀ ಅಮರಾವತಿ ಹುಚ್ಚುಗೌಡರು ಸಲ್ಲಿಸುವ......"

ಹೊಸ ಅನುಮಾನವೊಂದು ತಲೆದೋರಿತು ಗೌಡರಿಗೆ.

"ಬ್ರಾಹ್ಮಣರೇನಯ್ಯ ಅವರು?"

"ನನಗೇನು ಗೊತ್ತು ಸ್ವಾಮಿ? ಅಯ್ಯಂಗಾರರಂತೆ, ಮೂರು ನಾಮ ಹಾಕುತ್ತಾರೆ."

"ಯಾರಿಗೆ? ಬಂದವರಿಗೋ?"

ಚಿಕ್ಕದಾಗಿಯೇ ನಕ್ಕರು ಗೌಡರು ಮೀಸೆಯಲ್ಲಿಯೆ.

"ಸಾಬಿಗಳಂತೂ ಅಲ್ಲ, ಸಲಾಮು ಎಂದು ಬರೆಯಬೇಕಿಲ್ಲ."

"ನಮಸ್ಕಾ" ಎಂದು ಬರೆಯುವ ಒಳಗಾಗಿ ಮತ್ತೊಂದು ಅನುಮಾನವು ಬಂದಿತು ಗೌಡರ ತಲೆಯಲ್ಲಿ. ಆ ಎಲೆಕ್ಟ್ರಿಕ್ ಎಂಜಿನಿಯರ್‌ರು ವಯಸ್ಸಿನಲ್ಲಿ ತಮ್ಮಕಿಂತಲೂ ಚಿಕ್ಕವರಾಗಿದ್ದರೆ?

"ಆ ಸಾಹೇಬರ ವಯಸ್ಸೆಷ್ಟೋ?"

"ಎಂಭತ್ತು ಇರಬಹುದು ಸ್ವಾಮಿ"

"ನಿನ್ನ ತಲೆ, ಐವತ್ತೈದಕ್ಕೆ ಪಿಂಚನಿಯಾಗಿ ಬಿಡುತ್ತದೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹಾಗಾದರೆ ಹದಿನಾರು ಸ್ವಾಮಿ."

"ಏನೋ ಹೀಗೆ ಮಾತನಾಡುತ್ತಿ ? ಮೈನರ್ ಹುಡುಗನನ್ನು ಸರಕಾರದಲ್ಲಿ ಅಧಿಕಾರಿಯಾಗಿ ತೆಗೆದುಕೊಳ್ಳುತ್ತಾರೆಯೇ ? ನನ್ನಕಿಂತಲೂ ಚಿಕ್ಕವರೋ, ದೊಡ್ಡವರೋ ಅಷ್ಟು ಹೇಳು, ಸಾಕು."

ಆ ಪತ್ರಾರ್ಥಿ ಹುಚ್ಚುಗೌಡರ ಮುಖವನ್ನು ದಿಟ್ಟಿಸಿ ನೋಡಿ ದಿಙ್ಮೂಢನಾದ.

ಹುಚ್ಚುಗೌಡರ ಬಂಣ ಹಚ್ಚಿದ ಮೀಸೆ ನೋಡಿದ-ಮೀಸೆ ಬೋಳಿಸಿದ್ದ ಎಂಜಿನಿಯರ್ ಸಾಹೇಬರೇ ದೊಡ್ಡವರು. ಅಯ್ಯಂಗಾರರ "ಲೋಮಾ"ದ ಕ್ರಾಪು ಕಂಣ ಮುಂದು ಬಂದಿತು, ಗೌಡರು ದೊಡ್ಡವರು.

"ಎರಡೂ ಅಹುದು ಸ್ವಾಮಿ, ಮೀಸೆಯಿಂದ ಅವರು ದೊಡ್ಡವರು, ಕೂದಲಿನಿಂದ ತಾವು ದೊಡ್ಡವರು."

"ತಲೆಯಿಂದ ?"

ಎಂದ ತಿಂಮ ಮನದಲ್ಲಿಯೆ.

"ಹೂಂ, ಆಶೀರ್ವಾದವೆಂದೇ ಇರಲಯ್ಯ. ವಯಸ್ಸಿಗಾದರೂ ಬೆಲೆ ಇರುತ್ತದೆ."

"ಅಪ್ಪಣೆ ಸ್ವಾಮಿ"

ಭರಭರನೆ ಸಾಗಿತು ಗೌಡರ ಪತ್ರ.

"ಈ ಪತ್ರವನ್ನು ತಂದಿರುವ"

ಎಂದು ಬರೆಯುತ್ತ ಕೇಳಿದರು.

"ನಿನ್ನ ಹೆಸರೇನಯ್ಯ ?"

ಹೇಳಿತು ಆ ವ್ಯಕ್ತಿ. ಹೆಸರನ್ನು ಪತ್ರದಲ್ಲಿ ಸೇರಿಸಿ ಮುಂದು ಬರೆದರು,

'...ನನ್ನ ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷಗಳಿಂದ ಚೆನ್ನಾಗಿ ಬಲ್ಲೆ...'

ಆ ಆಸಾಮಿ ಮಧ್ಯೆ ಮಾತನಾಡಿತು.

"ನನಗಿನ್ನೂ ಹದಿನೆಂಟು ವರ್ಷ ಗೌಡರೇ !"

"ಇರಲಿ ಬಿಡಯ್ಯ. ಒಮ್ಮೆ ಬರೆದುದನ್ನು ನಾನು ಹೊಡೆದು ಹಾಕುವುದಿಲ್ಲ. ಅದಿರಲಿ ಮುಂದು ಹೇಳು ; ನಿನಗೇನಾಗಬೇಕು ಅವರಿಂದ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೇಗ ಬೇಗ ಹೇಳು, ನನಗೆ ನೂರೆಂಟು ಕೆಲಸಗಳಿವೆ. ಈ ಇವನು ಬೇರೆ ನಿಂತಿದ್ದಾನೆ ನನ್ನ ಎದೆಯ ಮೇಲೆ."

ತಿಂಮನ ಕಡೆ ಬೆರಳು ತೋರಿಸುತ್ತ ಅವಸರ ಮಾಡಿದರು.

ಬಾಯಿಪಾಠ ಮಾಡಿದವನಂತೆ ಒಂದೇ ಉಸಿರಿನಲ್ಲಿ ಹೇಳಿದ ಪತ್ರಾರ್ಥಿ, ತಿಂಡಿಯ ಹೆಸರುಗಳನ್ನು ಹೋಟೆಲ್ ಮಾಣಿ ಹೇಳುವಂತೆ,

"ನಮ್ಮ ಊರು ಹಾಳೂರು ಸ್ವಾಮಿ. ಹಾಳೂರಿನ ಪಶ್ಚಿಮಕ್ಕೆ ಮೂರುವರೆ ಮೈಲಿ ದೂರದಲ್ಲಿ ಸ್ಮಶಾನದ ಆ ಬದಿ ಒಂದು ಬೀಳು ಭೂಮಿ ಇದೆ. ಅದು ಸರಕಾರಕ್ಕೆ ಮೊದಲು ಸೇರಿದ್ದಿತೆಂದು ನಮ್ಮ ಊರಿನ ಶ್ಯಾನುಭೋಗರು ಹೇಳಿದರು ಮಹಾಸ್ವಾಮಿ. ಈಗ ಅದಾವನೋ ತನ್ನ ಹೆಸರಿನಲ್ಲಿ ಪಟ್ಟ ಮಾಡಿಸಿಕೊಂಡಿದ್ದಾನೆ, ಸಾಗುವಳಿ ಕೂಡ ಆಗಿದೆ. ನಾನೇ ನೋಡಿ ಬಂದಿದ್ದೇನೆ ನನ್ನೊಡೆಯಾ. ನಮ್ಮೂರಿನ ಬಳಿ ನದಿಗೆ 'ಪ್ರಾಜೆಕ್ಟ್' ಆಗುತ್ತದಂತೆ. ಆಗ ಈ ಜಮೀನು ಸಂಪೂರ್ಣವಾಗಿ ನೀರಲ್ಲಿ ಮುಳುಗಿ ನಿರ್ನಾಮವಾಗುತ್ತದಂತೆ, ನಮ್ಮೂರಿನ ಡಾಕ್ಟರು ಹೇಳಿದರು. ಆಗ ಸರ್ಕಾರದಿಂದ ಒಳ್ಳೆಯ ಪರಿಹಾರ ಧನ ಸಿಗುತ್ತದಂತೆ, ಸ್ವಾಮಿ! ಅದಕ್ಕಾಗಿ ಹೇಗಾದರೂ ಮಾಡಿ, ಏನಾದರೂ ಮಾಡಿ ಆ ಜಮೀನನ್ನು ನನ್ನ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿ ಕೊಡಲೇಬೇಕೆಂದು ನೀವು ಬರೆದು ಕೊಡಬೇಕು."

ಕಲ್ಲಿನಂತೆ ನಿಂತಿದ್ದ ತಿಂಮ ತಲೆ ಕೆರೆದುಕೊಳ್ಳುತ್ತ ಮೆಲ್ಲನೆ ಕೇಳಿದ.

"ಆ ಜಮೀನಿಗೂ ಎಲೆಕ್ಟ್ರಿಕ್ ಇಂಜಿನಿಯರ್‌ರಿಗೂ ಏನಯ್ಯಾ ಸಂಬಂಧ."

ತಕ್ಷಣವೇ ಮರುತ್ತರ ಬಂದಿತು.

"ಆ ಜಮೀನಿನ ಮೇಲೆಯೇ ಎಲೆಕ್ಟ್ರಿಕ್ ತಂತಿ ಹಾಯ್ದು ಹೋಗಿದೆ."

"ಸರಿ ಮತ್ತೆ, ಇನ್ನೇನು? ಅವರೇ ಮಾಡಬೇಕು ಈ ಕೆಲಸವನ್ನು ಅಂದಂತಾಯಿತು"

ಎಂದು ತಲೆಯಾಡಿಸಿದರು ಮಾಜಿ ಎಮ್ಮೆಲ್ಸಿಗಳು. ಪತ್ರವು ಸುದೀರ್ಘವಾಗಿ ಮುಂದುವರಿಯಿತು.

ಮಧ್ಯೆ ತಲೆ ಹರಟೆ ಮಾಡಿದ ತಿಂಮ.

"ತಮಗೆ ಆ ಎಂಜಿನಿಯರರ ಪರಿಚಯುವಿದೆಯೇ ಗೌಡರೇ?"

ಸಿಟ್ಟಿನಲ್ಲಿ ಉತ್ತರಿಸಿದರು ಹುಚ್ಚುಗೌಡರು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಅವರಪ್ಪನ ಪರಿಚಯವಿದೆ"

"ಅವರಪ್ಪನ ಪರಿಚಯ ನನಗೂ ಇದೆ ಬಿಡಿ. ತಂಜಾವೂರು ಅಯ್ಯಂಗಾರರ ಕಾಫಿ ಹೋಟೆಲಲ್ಲಿ ಆ ಮುದುಕ ಇಡ್ಲಿ ಹಿಟ್ಟು ರುಬ್ಬುತ್ತಿದ್ದ..."

"ಬಾಯಿ ಮುಚ್ಚಯ್ಯ ನೀನು, ಮೂರ್ಖ ! ಪರಿಚಯವಂತೆ ಪರಿಚಯ. ಅವರ ಪರಿಚಯ ನನಗಿಲ್ಲದಿದ್ದರೇನಾಯಿತು ? ನಾನು ಯಾರೆಂಬುದು ಅವರಿಗೆ ತಿಳಿಯದೇನು ? ನನ್ನ 'ಲೆಟರ್‌ಹೆಡ್' ನೋಡಿದರೆ ಗೊತ್ತಾಗುವುದಿಲ್ಲವೆ ನಾನು ಯಾರೆಂಬುದು ? ಮಾಜಿ ಎಮ್ಮೆಲ್ಸಿ ಹುಚ್ಚುಗೌಡ ಎಂದರೆ ದನ ಕಾಯುವ ಹುಡುಗನಿಗೂ ಗೊತ್ತು."

"ಅದು ಮಾತ್ರ ನಿಜ"

ಎಂದು ಮನದಲ್ಲಿಯೇ ಅಂದುಕೊಂಡು ಸುಮ್ಮನೆ ನಿಂತ ತಿಂಮ.

ಬಾಗಿಲು ಮತ್ತೆ ಕಿರ್ರೆಂದಿತು.

"ಯಾರಿಗೆ ಬೇಕು ಕಾಗದ ?"

"ನಮ್ಮೂರಿನ ಪಶುವೈದ್ಯರಿಗೆ ಸ್ವಾಮಿ !"

ಒಳಬಂದ ಮೂರನೆ ಪತ್ರಾರ್ಥಿ ಪ್ರಾರ್ಥಿಸಿಕೊಂಡ ಕರಜೋಡಿಸಿ.

ಎರಡನೆ ಪತ್ರಾರ್ಥಿ ಹಿಂದಕ್ಕೆ ಬಿದ್ದ ಕ್ಯೂನಲ್ಲಿ.

ಪಶುವೈದ್ಯ ಇಲಾಖೆಯ ಡೈರೆಕ್ಟರರ ಹೆಸರು, ಜಾತಿ, ವಯಸ್ಸು ಎಲ್ಲವನ್ನೂ ಕೇಳಿ ತಿಳಿದುಕೊಂಡು ಸಂದರ್ಭೋಚಿತವಾಗಿ ಸಲಾಮುಗಳಿಂದ ಎರಡನೆ ಪತ್ರವನ್ನು ಪ್ರಾರಂಭಿಸಿದರು ಮಾಜಿ ಎಮ್ಮೆಲ್ಸಿಗಳು.

ತಿಂಮ ಮೆಲುದನಿಯಲ್ಲಿ ಕೇಳಿದ.

"ಪಶುವೈದ್ಯರಲ್ಲಿ ಏನಾಗಬೇಕಿತ್ತಯ್ಯ ನಿನಗೆ ?"

"ನನ್ನ ಹೆಂಡತಿಗೆ ಆರೋಗ್ಯವಿಲ್ಲ."

ಅಷ್ಟರಲ್ಲಿಯೇ ಮತ್ತೊಬ್ಬ ಭಕ್ತ ಬಂದ.

"ಯಾರಿಗೆ ಬೇಕು ಕಾಗದ ?"

"ಯಾರಿಗಾದರೂ ಕೊಡಿ ಸ್ವಾಮಿ."

ಅಳು ಮುಖವಾಗಿತ್ತು ಅವನದು. ತಿಂಮ ಸಹಾನುಭೂತಿಯಿಂದ ವಿಚಾರಿಸಿದ ಅವನನ್ನು.

"ಏನಯ್ಯಾ ವಿಷಯ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಮೊನ್ನೆ ಟ್ರಸ್ಟ್ ಬೋರ್ಡಿನವರು...ಮನೆ ಕಟ್ಟಿಕೊಳ್ಳಲು...... ನನಗೊಂದು 'ಸೈಟ್' ಕೊಟ್ಟಿದ್ದರು ಸ್ವಾಮಿ..."

"ಅದು ಚಿಕ್ಕದಾಯಿತು, ಅದರ ಬದಲು ಈಗ ದೊಡ್ಡದು ಬೇಕು ತಾನೆ ?"

"ಅಲ್ಲ ಸ್ವಾಮಿ......"

"ಅದು ದೊಡ್ಡದಾಯಿತು, ಚಿಕ್ಕದು ಬೇಕು ತಾನೆ ?"

"ಇಲ್ಲ ಸ್ವಾಮೀ, ಕೇಳಿ ಕೊಂಚ."

"ಹೇಳಯ್ಯ ಬೇಗ. ನನಗೆ ಬೇರೆ ಕೆಲಸಗಳಿವೆ ನೂರಾರು."

"ಆ ಸೈಟೇ ಅಲ್ಲಿಲ್ಲ ಸ್ವಾಮೀ."

"ಸೈಟು ಇಲ್ಲ !"

"ಕಳುವಾಗಿ ಹೋಗಿದೆ ಗೌಡರೆ. ಯಾರೋ ನೋಡಿಟ್ಟವರದೇ ಈ ಕೆಲಸ."

ತಿಂಮ ಸೂಕ್ತವಾಗಿ ಸೂಚಿಸಿದ ಗೌಡರಿಗೆ.

"ಇದು ದುರಾಕ್ರಮಣ ಗೌಡರೆ! ಚೀನಾ ದೇಶದ ರಾಜರಿಗೇ ಒಂದು ಪತ್ರವನ್ನು ಕೊಟ್ಟುಬಿಡಿ ಹಾಗಾದ್ರೆ."

"ಚೀನಾ ರಾಜ !"

"ಇರಲಿ ಬರೆಯಿರಿ ಸ್ವಾಮಿ. ನಿಮಗೇಕೆ ?"

ಹುಚ್ಚುಗೌಡರು ಪತ್ರಗಳನ್ನು ಬರೆದದ್ದೇ ಬರೆದದ್ದು.

"ಅವರ ಆಪ್ತ ಕಾರ್ಯದರ್ಶಿಗಳಿಗೆ ಕೊಡಿ ಸ್ವಾಮೀ, ಸಾಕು."

ಎಂದೊಬ್ಬ ಕೇಳಿದ.

"ಛೆ! ಆ ಪುಡಿ ಮನುಷ್ಯರಿಗೆಲ್ಲ ಏಕಯ್ಯ ನನ್ನ ಪತ್ರ ? ಅವರಿಗೇ ಕೊಡುತ್ತೇನೆ, ತೆಗೆದುಕೊ."

ಬಿಹಾರದ ಗೌರ್ನರರು, ಒರಿಸ್ಸಾದ ಮುಖ್ಯ ಮಂತ್ರಿಗಳು, ಭಾರತದ ಪ್ರಧಾನಿ, ಪಾಕಿಸ್ತಾನದಲ್ಲಿಯ ಹೈ ಕಮೀಷನರರು, ಅಮೆರಿಕಾದ ಪ್ರೆಸಿಡೆಂಟರು —ಇನ್ನೂ ಯಾರಿಗೆ ಬೇಕು ಕಾಗದ ?

"ಇದೇ ಊರಿನ ಮುನಿಸಿಪಲ್ ಛೇರ್‌ಮನ್ನರಿಗೆ ಸ್ವಾಮಿ. ತಮ್ಮ ಸ್ನೇಹಿತರವರು."

ತಿಂಮ ಕಡೆಗೂ ಬಾಯಿಬಿಟ್ಟ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಚ್ಚುಗೌಡರು ನಿಜವಾಗಿಯೂ ಹುಚ್ಚರಂತೆ ಕಂಡರು ಆಗ.

"ಅವನು ಅಪರಿಚಿತನಲ್ಲವಲ್ಲ ? ಅವನಿಗೆ ಹೇಗಯ್ಯ ಕೊಡಲಿ ?"

ಮನದಲ್ಲಿಯೇ ಪೇಚಾಡಿಕೊಳ್ಳುತ್ತಿದ್ದರು ; ತಿಂಮ ಗಂಟೇಬಿದ್ದ.

"ಏನು ಸ್ವಾಮೀ, ನನ್ನ ಇದಿರಿನಲ್ಲಿಯೇ ನೂರಾರು ಜನರಿಗೆ ಕೊಟ್ಟಿದ್ದೀರಿ. ಯಾರಾರಿಗೋ ಕೊಟ್ಟಿದ್ದೀರಿ. ನಾನು ಮೂರು ದಿನಗಳಿಂದ ಅನ್ನ, ನೀರು, ವಸ್ತ್ರ ಇಲ್ಲದೆ..."

"ವಸ್ತ್ರ ? !"

"ಅಲ್ಲ ಸ್ವಾಮಿ, ಬಾಯಿ ಜಾರಿತು. ಅನ್ನ ನೀರು ಸಹ ಇಲ್ಲದೆ ಕಾದಿದ್ದೇನೆ. ತಾವು ಕೊಡಲೇಬೇಕು. ನಾನು ಮಾತ್ರ..."

ದುಂಬಾಲು ಬಿದ್ದು ಕಾಡಹತ್ತಿದ.

"ನಾನೇ ಅವರನ್ನು ಕಂಡು..."

ತಿಂಮ ಕೂಡಲೆ ವಾಸನೆ ಹಿಡಿದ, ಮಾಜಿ ಎಮ್ಮೆಲ್ಸಿಗಳು ಮೆತ್ತಗೆ ಜಾರಿ ಕೊಳ್ಳಲು ಯತ್ನಿಸುತ್ತಿದ್ದಾರೆಂಬುದನ್ನು.

"ಛೆ ಛೆ ! ಬೇಡ ಗೌಡರೆ, ಅದು ಆಗುವ ಮಾತಲ್ಲ ಹೋಗುವ ಮಾತಲ್ಲ. ನನ್ನ ಕೈಯಲ್ಲೇ ಕೊಟ್ಟು ಬಿಡಿ ಕಾಗದವನ್ನು, ನೀವು ಅವರಿಗೆ ಸಿಕ್ಕು, ಅವರು ನಿಮಗೆ ಸಿಕ್ಕು, ತಮಗೆ ನನ್ನ ವಿಷಯವು ಆಗ ನೆನಪಾಗಿ, ತಾವು ಹೇಳಿ ಅವರು ಕೇಳಿ..."

ಹುಚ್ಚುಗೌಡರ ತಲೆಯಲ್ಲಿ ಹುಳುವೊಂದು ಮಿಸುಕಾಡಿತು. ಮುಖದ ಮೇಲೆ ಚಿಕ್ಕದಾಗಿ ಮೂಡುತ್ತಿದ್ದ ಹುಸಿನಗೆಯನ್ನು ಪ್ರಯತ್ನಪೂರ್ವಕ ಹತ್ತಿಕ್ಕಿ ಕೇಳಿದರು.

"ಏನಯ್ಯ ಆಗಬೇಕು ನಿನಗೆ ಅವರಿಂದ !"

"ಮೂರು ವರ್ಷಗಳ ಇನ್‌ಕ್ರಿಮೆಂಟ್ ಬಾಕಿ ನಿಂತು ಹೋಗಿದೆ ಸ್ವಾಮಿ."

ಭರಭರನೆ ಕಾಗದವನ್ನು ಬರೆದು, ಲಕೋಟೆಯನ್ನು ಅಂಟಿಸಿ, ಕೈಗೆ ಕೊಡುತ್ತ

"ಭದ್ರ ! ಯಾರಿಗೂ ತೋರಿಸಬೇಡ."

"ಚೇರ್‌ಮೆನ್‌ರಿಗೆ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



" ಅವರೇ ಕೊಟ್ಟಿದ್ದ ಕಾಗದ ಕೈಯಲ್ಲಿ. ಮುಖದಲ್ಲಿ ಕೋಪ, ಗಂಟಲು ಗಡಚು,..."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರುದಿನ ಬೆಳಿಗ್ಗೆ ಮಾಜಿ ಎಮ್ಮೆಲ್ಸಿಗಳ ಕೋಣೆಯಲ್ಲಿ ಓಂ ಪ್ರಥಮವಾಗಿ ಕಾಲಿಟ್ಟನಲ್ಲ ತಿಂಮ !

"ಯಾರಿಗೆ ಬೇಕು ಕಾಗದ ?"

"ನಿಮಗೇ ತಂದಿದ್ದೇನೆ."

ಅವರೇ ಕೊಟ್ಟಿದ್ದ ಕಾಗದ ಕೈಯಲ್ಲಿ. ಮುಖದಲ್ಲಿ ಕೋಪ, ಗಂಟಲು ಗಡಚು.

ಆಶ್ಚರ್ಯದಿಂದ ಕೇಳಿದರು ಮಾಜಿ ಎಮ್ಮೆಲ್ಸಿಗಳು.

"ಯಾಕಯ್ಯಾ ? ಚೇರ್ಮರ್ನಿಗೆ ಕೊಡಲಿಲ್ಲವೆ ?"

ತಿಂಮ ಇದ್ದೆಲ್ಲ ಕೋಪವನ್ನೂ ಹೊರತೋರಿದ, ಒಡೆದಿದ್ದ ಲಕೋಟೆಯನ್ನು ಅವರ ಮೇಜಿಗೆ ಎಸೆದು.

"ಏನೆಂದು ಬರೆದಿದ್ದೀರಿ ಗೌಡರೇ, ಕಾಗದದಲ್ಲಿ ?"

ಸಂದರ್ಭವು ಅರ್ಥವಾಗಿ ಹೋಯಿತು, ಮಾಜಿ ಎಮ್ಮೆಲ್ಸಿಗಳಿಗೆ.

'ಕಾಗದವನ್ನು ಒಡೆದು ನೋಡಿಬಿಟ್ಟಿದ್ದಾನೆ, ಈ ಹೊಲೆಯ !'

ಎಂದಂದುಕೊಂಡರು ಮನದಲ್ಲಿಯೆ.

ತಿಂಮನ ಮಾತು ಕೈಬಾಂಬು ಸ್ಫೋಟಿಸಿದಂತೆ.

"ಮೂರು ಗ್ರಾಮೋಫೋನು ಪ್ಲೇಟು ಕಳಿಸಿ ಎಂದೇ ಬರೆಯುವುದು ?"

"ಸಂಕೇತ ಭಾಷೆಯಯ್ಯಾ ಅದು. ಗ್ರಾಮೋಫೋನು ಎಂದರೆ ಇನ್‌ಕ್ರಿಮೆಂಟ್, ರೇಡಿಯೋ ಎಂದರೆ ಪ್ರಮೋಷನ್, ಟೆಲಿಫೋನು ಅಂದರೆ ಟ್ರಾನ್ಸ್‌ಫರ್, ಅಯ್ಯೋ ಹುಚ್ಚಾ !"

ಸರ್ವೋಪಯೋಗಿ ಹುಚ್ಚು ಗೌಡರು ಜಾಣರಂತೆ ನಕ್ಕರು—ಜಾಣ ತಿಂಮ ಹುಚ್ಚನಂತೆ ಕಂಡ, ಪಾಪ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನೆ ಅಳಿಯ

"ಸ್ವಾಮೀ ! ಇಲ್ಲಿ ಒಂದು ಮನೆ ಏನಾದರೂ ಸಿಕ್ಕಬಹುದೇ ಬಾಡಿಗೆಗೆ ?"

"ಮನೆ ! ಮನೆಯವಳು ಬೇಕಾದರೆ ಒಂದಲ್ಲ, ಹತ್ತಾದರೂ ದೊರೆಯುತ್ತವೆ ನೋಡಿ ಇಲ್ಲಿ. ಮನೆ ಮಾತ್ರ..."

ಥಂಣಗಾದ ತಿಂಮ, ಆ ಸಭ್ಯ ಗೃಹಸ್ಥರ ಉತ್ತರ ಕೇಳಿ. ಮನೆ ಕೇಳಿದರೆ, ಮನೆಯವಳನ್ನೇ ಕೊಡಿಸುತ್ತೇನೆ ಎನ್ನುವವರು ಸಭ್ಯ ಗೃಹಸ್ಥರೇ ? ಸಭ್ಯರೂ ಅಲ್ಲ, ಗೃಹಸ್ಥರಂತೂ ಮೊದಲೇ ಅಲ್ಲ.

'ಅಷ್ಟು ದೊಡ್ಡ ಬೆಂಗಳೂರಲ್ಲಿ ನಿಮಗೆ ಒಂದು ಮನೆ ದೊರೆತಿಲ್ಲ ಎಂದರೆ ಯಾರಾದರೂ ನಕ್ಕಾರು. ಮುಖ್ಯವಾಗಿ ನಮ್ಮನ್ನು ಕರೆಯಿಸಿಕೊಳ್ಳುವುದು ನಿಮಗೆ ಬೇಕಿಲ್ಲ...'

ಲಂಗು, ಲಟ್ಟು ಎಂದು ಇನ್ನೂ ಏನೇನನ್ನೋ ಆ ಉದ್ದಕ್ಕೂ ಬರೆದು ಬಿಟ್ಟಿದ್ದಳು ತಿಂಮನ ಹೆಂಡತಿ. ಒಂದೇ–ಎರಡೇ, ಆ ಧ್ವನಿಯ ಪತ್ರಗಳು !

ಕಡೆಗೊಂದು ಕಾಗದ ಬಂದಿತು ತಿಂಮನಿಗೆ, ಲಾಯರ್ ನೋಟೀಸ್‌ನ ಮಾದರಿಯದು.

'ಮನೆ ದೊರೆಯಲಿ ಬಿಡಲಿ, ನಾನಂತೂ ಮಗಳನ್ನು ಕರೆದುಕೊಂಡು ಮುಂದಿನ ಶನಿವಾರ ಅಲ್ಲಿಗೆ ಬಂದೇ ಬಿಡುತ್ತೇನೆ. ತಿಹೆಬಶ.'

ತಿಹೆಬಶ !

ತಿಂಮನ ತಲೆ ಕೆಟ್ಟಿತು, ಆ ಕೊನೆಯ ನಾಲ್ಕಕ್ಷರಗಳನ್ನು ಓದಿ. ತಿಹೆಬಶ ! ಏನು ತಿಹೆಬಶ ಅಂದರೆ ? ಬೈಯುವ ಮಾತಿರಬಹುದೇ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಛೆ ಪಾಪ! ತಿಂಮನ ಹೆಂಡತಿ ಮಹಾ ಸಾಧ್ವಿ – ಸೀತಾ, ಸಾವಿತ್ರಿಯರ ಸಾಲಿನಲ್ಲಿರಬೇಕಾದವಳು ಆಕೆ. ಗಂಡನನ್ನು ಬೈಯುವುದುಂಟೆ? ಜಗಳ ವಾಡಿದ್ದರು ಗಂಡ ಹೆಂಡತಿ ಅನೇಕ ಬಾರಿ. ಆಗ ಮಾತ್ರ ತಿಂಮನಿಗೆ ಒಂದೆರಡು ಕೊಟ್ಟಿದ್ದಳು, ಅಷ್ಟೆ. ಅದು ಕೋಪದಲ್ಲಿ. ಆದರೆ ಬೈಯುವುದುಂಟೆ ಪತಿ ದೇವನನ್ನು?

ಹಾಗಾದರೆ ತಿಹೆಬಶ ಅಂದರೇನು?

ತಿಂಮ ಆ ಕೂಡಲೆ ಕಾಗದವನ್ನು ಬರೆದು ಪೋಸ್ಟ್ ಆಫೀಸಿಗೆ ತಂದ.

"ನೀನು ಬರೆದ ಪತ್ರ ಕೈ ಸೇರಿತು, ಆದರೆ ಅಭಿಪ್ರಾಯವಾಗಲಿಲ್ಲ. ತಿಹೆಬಶ ಅಂದರೇನು ಮರುಟಪಾಲಿಗೇ ಬರೆದು ತಿಳಿಸು!"

ಅಂಚೆ ಡಬ್ಬಿಯಲ್ಲಿ ಕಾಗದವನ್ನು ಹಾಕಿದ ಕೂಡಲೆ ಹೊಳೆಯಿತು, ಅವನ ಮಂದಮತಿಗೆ.

ತಿ–ಹೆ–ಬ–ಶ ಅಂದರೆ, 'ತಿ' ತಿಳಿದವರಿಗೆ 'ಹೆ' ಹೆಚ್ಚಿಗೆ 'ಬ' ಬರೆಯಲು 'ಶ' ಶಕ್ತಳಲ್ಲ!

ತಿಂಮನಿಗೆ ನಗೆಯೇ ನಗೆ ಅಂದೆಲ್ಲವೂ. ಮನೆ ಹುಡುಕುವುದನ್ನೇ ಮರೆತುಬಿಟ್ಟ, ಆ ಮಹದಾನಂದದಲ್ಲಿ.

ಮರುದಿನ ಶುರುವಾಯಿತು ತಿಂಮನ ಗೃಹಾನ್ವೇಷಣ.

"ಅಲ್ಲಿ ಒಂದು ಮನೆ ಇದೆ, ನೋಡುತ್ತೀರಾ ಸಾರ್?"

"ನಡೆ ಹೋಗೋಣ. ಅಡ್ವಾನ್ಸ್ ಕೂಡ ಕೊಟ್ಟು ಬಿಡೋಣ ಈಗಲೆ."

ತಿಂಮ ಒಂಟಿಗಾಲ ಮೇಲೆ ನಿಂತ.

ಮನೆ ನೋಡಿದ, ಚೆನ್ನಾಗಿಯೇ ಇತ್ತು. ಅಡುಗೆಮನೆ, ದೇವರ ಜಗುಲಿ, ಶಯ್ಯಾಗೃಹ ಎಲ್ಲವೂ ಇವೆ ಪ್ರತ್ಯೇಕವಾಗಿ. ಎಲ್ಲಿಯೋ ಅಡವಿಯಲ್ಲಿ ಎಂಬು ವಂತೆಯೂ ಇಲ್ಲ. ಬಸ್ ಸ್ಟಾಪು, ಮಾರ್ಕೆಟ್ಟು, ಮಗಳಿಗೆ ಸ್ಕೂಲು, ಮಡದಿಗೆ ವೆಟರ್ನರಿ ಆಸ್ಪತ್ರೆ ಎಲ್ಲವೂ ಸಮೀಪ. ಗಾಳಿ, ಬೆಳಕು? ಬೇಕಾದಷ್ಟು–ಅಲ್ಲ–ಬೇಡಾಗುವಷ್ಟು.

"ನೀರು?"

"ಏನೂ ಕೊರತೆ ಇಲ್ಲ ಸಾರ್. ತಮಗೆ ಸಾಕು ಸಾಕಾಗುವಷ್ಟು ನೀರು ಬರುತ್ತದೆ ಇಲ್ಲಿ. ಮಳೆಯಾದರಾಯಿತು, ಮನೆಯೆಲ್ಲವೂ ನೀರೇ ನೀರು."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಸೋರುತ್ತದೆಯೇ ಮಾಳಿಗೆ ? ಹಾಗಾದರೆ ಬೇಡ ಇದು."

ತಿಂಮ ಹಿಂತಿರುಗಿದ, ಬಂದ ದಾರಿಗೆ ಸುಂಕವಿಲ್ಲ ಎಂದು.

"ಹಾಗಾದರೆ ಇನ್ನೊಂದು ಮನೆ ತೋರಿಸುತ್ತೇನೆ, ಬನ್ನಿ"

ಎಂದ ಜೊತೆಗೆ ಬಂದಿದ್ದ ಏಜೆಂಟ. ಹೊರಟರು ಇಬ್ಬರೂ ಆ ಉದ್ದಕ್ಕೂ ಕಾಲೆಳೆಯುತ್ತ. ಅಪಜಯನಗರದ ನೂರೆಂಟನೆ ಬ್ಲಾಕಿನಿಂದ ಹೊಲಸೂರಿನ ಈ ತುದಿಗೆ ಬಂದಾಯಿತು. ಮನೆಯ ಮುಂದು ನೇತಾಡುತ್ತಿದ್ದ ಬೋರ್ಡಿನ ಅಡಿಯಲ್ಲಿಯೇ ಬಂದು ನಿಂತರು.

"ಚೆನ್ನಾಗಿದ್ದಂತಿದೆ ಕಣಯ್ಯಾ ಈ ಮನೆ."

ಚಿಕ್ಕದಾಗಿ ಗೊಣಗಿಕೊಂಡ ತಿಂಮ.

"ಚೆನ್ನಾಗಿ ಏನು ಬಂತು ಸ್ವಾಮೀ ? ಅರಮನೆಯಾಗಿದೆ ಇದು."

"ಅರಮನೆ ! ಅರ್ಧಮನೆಯೇ !"

ಒಳಹೊಕ್ಕು ನೋಡಿಬಂದರು. ಬಹು ಮೆಚ್ಚುಗೆಯಾಯಿತು ತಿಂಮನಿಗೆ.

"ಮಳೆ ಬಂದರೆ ಸೋರುವುದಿಲ್ಲ ತಾನೆ ?"

ಸಂದೇಹ ಪರಿಹಾರಕ್ಕಾಗಿ ಕೇಳಿದ ತಿಂಮ.

"ಚೆನ್ನಾಗಿ ಕೇಳಿದಿರಿ. ಮೂರು ಅಂತಸ್ಥಿನ ಮನೆ ಇದು, ಕೆಳಗಿನ ಮನೆಯಲ್ಲಿರುವ ನಿಮಗೆ ಆ ಭಯವೇಕೆ ?"

"ಅದು ಸರೆ, ಬಾಡಿಗೆ ?"

ಹೇಳಿದ ಮನೆಯ ಮಾಲಿಕ.

"ತೊಂಭತ್ತೂ !"

ಕೊಂಚ ಜಾಸ್ತಿಯಾಯಿತು — ಮನೆಗೆ ಅಲ್ಲ, ತಿಂಮನಿಗೆ.

"ಮೊದಲು ಮನೆಯಲ್ಲಿ ಹೊಕ್ಕುಬಿಟ್ಟು, ಆ ಮೇಲೆ ತಕರಾರು ಹೂಡಿದರಾಯಿತು. ರೆಂಟ್ ಕಂಟ್ರೋಲರ್ ಸಾಹೇಬರಿಗೆ ಅರ್ಜಿ ಗುಜರಾಯಿಸಿಬಿಡಿ."

ಸೂಕ್ಷ್ಮವಾಗಿ ಸಲಹೆ ಕೊಟ್ಟ, ಜೊತೆಯಲ್ಲಿದ್ದ ಜಾಣ.

"ಬಾಡಿಗೆ ಮಾತ್ರ ಅಡ್ವಾನ್ಸ್ ಕೊಡಬೇಕು ಸ್ವಾಮೀ !"

ಮನೆಯುವನು ಕರಾರು ಹೇಳಿದ.

"ಆಗಲಿ ತೆಗೆದುಕೊಳ್ಳಿ, ರಸೀದು ಬರೆಯಿರಿ."

ತಿಂಮ ಜೇಬಿನಿಂದ ಹಣವನ್ನು ತೆಗೆದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ರಸೀದು ಅಷ್ಟಕ್ಕೆ ಕೊಡುವುದಿಲ್ಲ. ರಸೀದು ಮಾತ್ರ ಮೂವತ್ತಕ್ಕೇ."

ಅಸ್ತು ಎಂದ ತಿಂಮ; ಮತ್ತೇನು ಮಾಡಲು ಸಾಧ್ಯ? 'ಮನೆ ಇಲ್ಲದವನಿಗೆ ಮಾನವಿಲ್ಲ ಈ ಊರಲ್ಲಿ' ಎಂದು ಬೈದುಕೊಂಡ. ಒಂಭತ್ತು ಹತ್ತರ ನೋಟನ್ನು ಎಣಿಸಿದ.

"ಒಂದು ತಿಂಗಳ ಬಾಡಿಗೆಯೇ ಅಡ್ವಾನ್ಸ್?"

ಮುಖ ನೋಡಿದ ಮಾಲಿಕ.

"ಮತ್ತೆಷ್ಟು ಸ್ವಾಮೀ ಕೊಡಬೇಕು? ಒಂದು ವರ್ಷದ ಬಾಡಿಗೆಯನ್ನೇ?"

ಹಲ್ಲು ಕಿಸಿದ.

"ಮೂವತ್ತು ವರ್ಷದ ಬಾಡಿಗೆ ಅಡ್ವಾನ್ಸಾಗಿ ಕೊಟ್ಟುಬಿಡಬೇಕು ಸ್ವಾಮೀ ಈಗ."

ತಿಂಗಳಿಗೆ ತೊಂಭತ್ತು, ವರ್ಷಕ್ಕೆ ಒಂದು ಸಾವಿರ ಎಂಭತ್ತು. ಮೂವತ್ತು ವರ್ಷಕ್ಕೆ? ಮೂವತ್ತೆರಡು ಸಾವಿರ, ಮೇಲೆ ನಾಲ್ಕು ನೂರು.

ಕೋಪದ ಆವೇಶದಲ್ಲಿ ಹೇಳಿಯೇಬಿಟ್ಟ ತಿಂಮ.

"ಹೋಗಯ್ಯ ಹುಚ್ಚು! ಮೂವತ್ತು ಸಾವಿರ ನನ್ನಲ್ಲಿ ಇದ್ದಿದ್ದರೆ ಇಲ್ಲಿಗೇಕೆ ಸಾಯಲು ಬರುತ್ತಿದ್ದೆ?"

"ಮತ್ತೇನು ಸ್ವಾಮೀ ಮಾಡುತ್ತಿದ್ದಿರಿ?"

ಎಂದು ಕೇಳಿದ ಜೊತೆಯಲ್ಲಿ ಬಂದಿದ್ದ ಏಜೆಂಟ.

"ವ್ಯಾಪಾರ."

"ಏನು ವ್ಯಾಪಾರ? ನಿಮಗೆ ವ್ಯಾಪಾರ ಮಾಡಲು ಬರುತ್ತೆಯೇ?"

"ಅದೇಕಯ್ಯ ಬರುವುದಿಲ್ಲ? ದೇಶಸೇವೆ ವ್ಯಾಪಾರ ಮಾಡುತ್ತೇನೆ. ಚುನಾವಣೆಗೆ ನಿಂತು ಸಾವಿರಗಟ್ಟಲೆ ಸುರುವಿ ಗೆಲ್ಲುತ್ತೇನೆ. ಐದು ವರ್ಷಗಳಲ್ಲಿ ಲಕ್ಷಗಟ್ಟಲೆ ಗಳಿಸುತ್ತೇನೆ"

ಸಿಕ್ಕಂತೇ ಇದೆ ತಿಂಮನಿಗೆ ಮನೆ.

ಮನೆ ದೊರೆಯುವವರೆಗೂ ಮನೆಯಾಕೆ ಕಾಯುತ್ತಾಳೆಯೇ? ಮಗಳ ಸಮೇತ ಬಂದು ಇಳಿದೇಬಿಟ್ಟಳು ಬೆಂಗಳೂರಿನಲ್ಲಿ. ತಿಂಮ ಮುಗಿಲು ನೋಡಿದ, ಪಾಪ!

ಆಮೇಲೇನಾಯಿತು? ಏನೂ ಆಗಲಿಲ್ಲ, ಆದರೆ ಆಗಲೇ ಬೇಕಾದಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಜೆಯಾಯಿತು, ರಾತ್ರಿಯೂ ಬಂದಿತು. ತಿಂಮನ ಸಂಸಾರ ಬೆಂಗಳೂರಿನ ನಡುಬೀದಿಯಲ್ಲಿ. ಪರಮಾತ್ಮನೆಂಬುವ ಆ ಪ್ರಾಣಿಗೆ ಸಹನೆ ಇದ್ದರೆ ತಾನೆ ? ರಪರಪ ಮಳೆ !

ರಸ್ತೆಯಲ್ಲಿದ್ದವರೆಲ್ಲರೂ ದಿಕ್ಕೆಟ್ಟು ಓಡಿದರು. ತಿಂಮನೂ ಓಡಿದ ಸಂಸಾರ ಸಮೇತ. ಎಲ್ಲಿಯೋ ಬಂದು ನಿಂತರು ಮಳೆಯಿಂದ ಪಾರಾಗಿ.

ಅರೆ ! ಖಾಲಿ ಮನೆ !! ಎಷ್ಟು ಚೆನ್ನಾಗಿದೆ, ಖಾಲಿಯೂ ಇದೆ !!!

ಮನೆಯ ಮಾಲೀಕನನ್ನು ಪತ್ತೆ ಹಚ್ಚಿದ ತಿಂಮ.

"ಅಗತ್ಯವಾಗಿ ತೆಗೆದುಕೊಳ್ಳಿಸ್ವಾಮೀ ! ಕಟ್ಟಿದಂದಿನಿಂದ ಆ ಮನೆ ಖಾಲಿಯೇ ಇದೆ. ಯಾರಾದರೂ ದೀಪಹಚ್ಚಿಕೊಂಡು ಅದರಲ್ಲಿದ್ದರೆ ಸಾಕು."

"ಬಾಡಿಗೆ ?"

"ನಾನೇ ನಿಮಗೆ ತಿಂಗಳಿಗೆ ಹತ್ತು ರೂಪಾಯಿ ಕೊಡುತ್ತೇನೆ."

ಹೀಗೂ ಉಂಟೆ ? ಅದೂ ಬೆಂಗಳೂರಲ್ಲಿ ! ತಿಂಮ ಮೂಗಿಗೆ ಬೆರಳಿಟ್ಟ.

"ಇನ್ನೊಂದು ಷರತ್ತು ಇದೆ ಸ್ವಾಮೀ !"

ಮನೆಯ ಮಾಲೀಕ ತಲೆ ಕೆರೆದುಕೊಳ್ಳುತ್ತ ಆರಂಭ ಮಾಡಿದ.

"ಹತ್ತು ವರ್ಷಗಳಾದರೂ ಆ ಮನೆಯಲ್ಲಿರುತ್ತೇನೆಂದು ನೀವು ಬರೆದು ಕೊಡಬೇಕು."

ಲೆಕ್ಕ ಹಾಕಿದ ತಿಂಮ ಮನದಲ್ಲಿಯೆ. ಕೇಳಿಯೇಬಿಟ್ಟ ಕಡೆಗೆ.

"ತಿಂಗಳಿಗೆ ಹತ್ತು ರೂಪಾಯಿಯಂತೆ ಆದರೆ, ನೀವೇ ನನಗೆ ಒಂದು ವರ್ಷಕ್ಕೆ ಸಾವಿರದ ಎರಡು ನೂರು ಕೊಡಬೇಕಾಗುತ್ತದೆ"

"ಅಗತ್ಯವಾಗಿ ಕೊಡುತ್ತೇನೆ. ಹತ್ತು ವರ್ಷದ ಹಣವನ್ನು ಅಡ್ವಾನ್ಸ್ ಆಗಿ ಈಗಲೆ ಕೊಡುತ್ತೇನೆ ಬೇಕಾದರೆ."

ಮನೆ ಮಾಲೀಕನು ಹುಚ್ಚನಂತೂ ಅಲ್ಲವಲ್ಲ, ಸಧ್ಯ !

ಅಲ್ಲ, ತಿಂಮನೇ ಹುಚ್ಚ.

"ದೆವ್ವದ ಮನೆ ಸ್ವಾಮೀ, ಅದು. ಇಲ್ಲದಿದ್ದಲ್ಲಿ ಈ ಬೆಂಗಳೂರಲ್ಲಿ ಅಂತಹ ಮನೆ ಖಾಲಿ ಇರುತ್ತಿತ್ತೆ ? ಹೋಗೀ ಹೋಗಿ. ಹಣದ ಆಶೆಗಾಗಿ ಪ್ರಾಣವನ್ನೇಕೆ ಕಳೆದುಕೊಳ್ಳುತ್ತೀರಿ. ಬೇರೆ ಎಲ್ಲಿಯಾದರೂ ನೋಡಿ."

ತಿರಸ್ಕಾರದ ನಗೆ ನಕ್ಕು ನಡೆದೇಬಿಟ್ಟ ಮನೆಯ ಮಾಲೀಕ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಂಮನ ತಲೆ ಸಾಗಾಲೋಟ ಓಡಿತು. ತಿಂಮನೂ ಓಡಿದ ಆ ಮಾಲಿಕನ ಹಿಂದೆ.

"ಕೊಡಿ ಸ್ವಾಮೀ, ಆ ಮನೆಯ ಬೀಗದ ಕೈ ಮತ್ತು ಒಂದು ಸಾವಿರದ ಎರಡುನೂರು ರೂಪಾಯಿ ಕೊಡಿ. ನಿಮ್ಮ ಹತ್ತು ವರ್ಷದ ಕರಾರಿಗೆ ಸಹಿ ಹಾಕುತ್ತೇನೆ."

ದೆವ್ವದ ಮನೆಯೋ ದೇವರ ಮನೆಯೊ. ತಿಂಮನಿಗಂತೂ ಒಂದು ಮನೆ ದೊರೆಯಿತು ಬೆಂಗಳೂರಲ್ಲಿ. ಬಾಡಿಗೆ ? ಮೈನೆಸ್ ಹತ್ತು ರೂಪಾಯಿ. ಹತ್ತು ವರ್ಷದ ಅಡ್ವಾನ್ಸ್ ಬಾಡಿಗೆ ಕೈಗೆ ಬಂತು.

ಹೆಂಡತಿಗೆ ಹೇಳಿದ ತಿಂಮ.

"ಅರ್ಜೆಂಟಾಗಿ ಒಂದು ವರವನ್ನು ಹುಡುಕು. ಮಗಳ ಮದುವೆ ಮಾಡಿ ಬಿಡೋಣ."

"ಹಣ ?"

ಕೈಲಿದ್ದ ಸಾವಿರದೆರಡುನೂರು ತೋರಿಸಿದ.

"ಈಗಾಗಲೇ ಏನು ಅವಸರ ಅವಳ ಲಗ್ನಕ್ಕೆ ? ಅವಳಿಗಿನ್ನೂ..."

"ಛೆ ಛೆ ! ಒಬ್ಬ ಅಳಿಯನಂತೂ ಈಗ ಬೇಕೇ ಬೇಕು. ದೀಪಾವಳಿಗೆ ಬಂದು ಹೋಗುವಂತಹ ಅಳಿಯ ಮಾತ್ರ ಬೇಡ ನಮಗೆ."

"ಏನು ಹಾಗಂದರೆ ?"

"ತಿಳಿಯಲಿಲ್ಲವೇ ? ನಮ್ಮ ಮನೆಯಲ್ಲಿ ಖಾಯಂ ಆಗಿ ಇದ್ದು ಬಿಡಬೇಕು ಅವನು. ಮನೆ ಅಳಿಯ ಬೇಕೇ."

"ಏಕೇ ಅಂದೆ ! ?"

"ಈ ಮನೆಯಲ್ಲಿ ದೆವ್ವ ಇದೆಯಂತೆ ಕಣೇ !"

"ಅಯ್ಯೊ ! ದೆವ್ವವೇ !"

ಬೆಚ್ಚಿಬಿದ್ದಳು ತಿಂಮನ ಹೆಂಡತಿ.

"ಅದಕ್ಕೇ ಕಣೇ, ಅಳಿಯ ಬೇಕು ಎಂದುದು. ಎರಡೆರಡು ದೆವ್ವಗಳು ಒಂದು ಮನೆಯಲ್ಲಿ ಇರುವುದಿಲ್ಲ. ಮನೆಯಲ್ಲಿ ಅಳಿಯ ಸೇರಿಬಿಟ್ಟರೆ, ದೆವ್ವ ತಾನಾಗಿಯೇ......"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

“ಮಳೆಯಾದರಾಯಿತು. ಮನೆಯೆಲ್ಲ ನೀರೇ....”

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

“ಅಹುದೇ ? ಆದಕ್ಕಾಗಿಯೇ ಏನು ನಮ್ಮಪ್ಪ ನಿಮ್ಮನ್ನು ತಂದು ಮನೆಯಲ್ಲಿಟ್ಟುಕೊಂಡಿದ್ದರು ? ”

ತಿಂಮನಿಗೇನು ಮುಲಾಜೆಯೆ ? ಹಲ್ಲು ಬಿಟ್ಟಿದ್ದ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಶ್ವತ ಸಾಹಿತ್ಯ

"ಕಾಲವೇ ಕೆಟ್ಟು ಹೋಯಿತಯ್ಯ......ಏನು ಮಾಡೋಕೆ ಆಗುತ್ತೆ ಹೇಳು..."

ಶುದ್ಧ ಸಾಹಿತಿಗಳು ಪೇಚಾಡಿಕೊಂಡರು, 'ಸ್ಪೆಷಲ್ ರೂಮ್'ನಲ್ಲಿ ಕುಳಿತುಕೊಂಡು ಮಸಾಲೆ ದೋಸೆ ಬಾಯಿಗೆ ಹಾಕುತ್ತ. ಇದಿರಿನಲ್ಲಿ ಕುಳಿತು ಕುರುಂ ಕುರುಂ ತಿನ್ನುತ್ತಿದ್ದ ತಿಂಮ ಮತ್ತೆ ಅದೇ ವಿಷಯವನ್ನೆತ್ತಿ ಚರ್ವಿತ ಚರ್ವಣ ಮಾಡಿದ.

"ಕಾಲ ಏನು ಮಾಡುತ್ತೆ ಬಿಡಿ, ಸ್ವಾಮಿ? ಅಂದಿಗೂ ಇದ್ದ ಕಾಲವೇ ಇಂದಿಗೂ ಇದೆ. ಸೂರ್ಯನೇನು ಪಶ್ಚಿಮಕ್ಕೆ ಹುಟ್ಟುತ್ತಾನೆಯೆ ಈಗ? ಜನ ಕೆಟ್ಟು ಹೋಗಿದೆ ಅನ್ನಿ, ಬೇಕಾದರೆ."

"ಜನ ಅನ್ನುವುದರಲ್ಲಿಯೂ ಅರ್ಥವಿಲ್ಲ. ಮರೀ! ಜನ ಅಂದರೇನು? ದನ ಶಬ್ದದ ಉತ್ಪತ್ತಿ ಅಲ್ಲವೇ? ಕೊಟ್ಟುದನ್ನು ತಿನ್ನುವುದು, ತಿಂದುದನ್ನು ಮತ್ತೆ ಕೇಳುವುದು ಅದರ ಸ್ವಭಾವ. ಅಷ್ಟೆಲ್ಲ ಏಕಯ್ಯ? ನಮ್ಮ ಉದಾಹರಣೆಯನ್ನೇ ತೆಗೆದುಕೋ ಈಗ. ಒಂದು ಕಾಲದಲ್ಲಿ—ನಾನಿನ್ನೂ ಹುಡುಗ ಆಗ, ಎಲ್ ಎಸ್ ಓದುತ್ತಿದ್ದೆ ಅನ್ನು — ನಿಕ್ಕರ್ ಜೇಬಿನಲ್ಲಿ ಒಂದಾಣೆ ಇಟ್ಟುಕೊಂಡು ಇದೇ ಹೋಟೆಲಿಗೆ ಬರುತ್ತಿದ್ದೆವು. ಆಗೆಲ್ಲ ನಮಗೆ ಈ ಕಾಲದ ಹುಡುಗರಂತೆ ಕಾಫಿ, ಗೀಫಿ ಹುಚ್ಚುಹೆಚ್ಚು ಇರಲಿಲ್ಲ ಅನ್ನು. ತಿನ್ನಬೇಕು ಚೆನ್ನಾಗಿ. ಒಂದಾಣೆ ಕೊಟ್ಟು ಬಿಟ್ಟರೆ ಇಷ್ಟಗಲ—ಎಷ್ಟು ಅನ್ನುತ್ತೀಯಾ? ಇಷ್ಟು..."

"ಒಂದಡಿ 'ಡಯಾಮೀಟರ್' ಅನ್ನಿ."

ಸಹಾಯಕ್ಕೆ ಬಂದು ಸಲಹೆ ಕೊಟ್ಟ ತಿಂಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹೂಂ ರೈಟ್. ಸುಲಭವಾಗಿ ಒಂದು, ಒಂದೂವರೆ ಅಡಿ ಅಂದರೂ ತಪ್ಪಿಲ್ಲ. ಶುದ್ಧ ಅಪ್ಪಟ, ಮಂಡ್ಯದ ಬೆಣ್ಣೆಯಲ್ಲಿ ಬೇಯಿಸಿದ ದೋಸೆ!"

"ಒಂದೇ ಆಣೆಗೆ ಸಾರ್?"

"ಒಂದೇ ಆಣೆ ಅಂದರೆ ಒಂದೇ ಒಂದು ಆಣೆಗೆ, ಒಂದು ಒಂದೂವರೆ ಅಡಿ 'ಡಯಾಮೀಟರ್'ನ ಅಪ್ಪಟ ಬೆಣ್ಣೆ ದೋಸೆ ಕಣಯ್ಯಾ. ನಿಜ ಹೇಳಿದರೂ ಕೇಳುತ್ತೀಯಾ, ಸುಳ್ಳು ಹೇಳಿದರೂ ಕೇಳುತ್ತೀಯಾ..."

"ಕೇಳುತ್ತಲೇ ಇದ್ದೀನಲ್ಲ ಸ್ವಾಮೀ, ಈಗ?"

ತಿಂಮ ಮಾತಿನ ಮಧ್ಯೆ ತೂರಿಸಿದ ವ್ಯಂಗ್ಯವನ್ನು ಗಮನಿಸಲಿಲ್ಲ ಯಜಮಾನರು. ಹಾಗೆಯೇ ಮುಂದುವರಿಸಿದರು.

"ಈಗೇನಿದೆ ಹೇಳು. ಒಂದು ಆಣೆಯಲ್ಲ, ಒಂದು ರೂಪಾಯಿ ಕೊಟ್ಟರೂ ಅಂತಹ ಶುದ್ಧ ಸರಕು ಸಿಕ್ಕುವುದಿಲ್ಲ, ಏನಂತಿ?"

"ಅನ್ನುವುದೇನು ಬಂತು ಸ್ವಾಮೀ?"

"ಅದನ್ನೇ ಹೇಳಿದೆ. ಇಲ್ಲಿ ಕೇಳು, ಹೇಗೆ ಕ್ರಮೇಣ ಪತನವಾಯಿತು ನಮ್ಮ ಜನಗಳ ಅಭಿರುಚಿಯಲ್ಲಿ ಎಂಬುದನ್ನು. ಮೂವತ್ತಾರು...ಮೂವತ್ತೇಳು ಅಥವಾ ಮೂವತ್ತೆಂಟು ಅನ್ನು...ಈ ಪ್ರೊಪ್ರೈಟರ್ ಮುಂಡೇಗಂಡ ಆಗ ನೀರು ಕೊಡುತ್ತಿದ್ದ ನಮ್ಮ ಟೇಬಲ್‌ಗಳಿಗೆಲ್ಲ. ಈಗ ಬಂಗಲೆ ಕಟ್ಟಿಸಿದ್ದಾನೆ, ಕಾರೂ ಇಟ್ಟಿದ್ದಾನೆ. ಆಗ ಆರೆಂದರೆ ಆರೇ ಆರು ರೂಪಾಯಿ ಸಂಬಳ!"

"ಅಹುದೇನು ಸಾರ್?"

ತಿಂಮನ ಮುಖ ಆಶ್ಚರ್ಯ ಚಿಹ್ನೆ ಆಯಿತು.

"ಮತ್ತೇನು ತಿಳಿದಿ? ಇವನೇನು ಹುಟ್ಟುತ್ತಲೇ ಸಾಹುಕಾರನ ಮಗ ನೇನು? ಬೇರೆ ಒಬ್ಬ ಇದ್ದ ಪ್ರೊಪ್ರೈಟರು, ಕೃಷ್ಣಯ್ಯಂಗಾರಿ ಅವನ ಹೆಸರು. ಅವನ ಅಪ್ಪ ಒಬ್ಬ ಖದೀಮ ಚೆಲುವಯ್ಯಂಗಾರಿ ಎಂದಿದ್ದ. ಕಡೆಗೂ ಕೊಲೆ ಮಾಡಿ ಬಿಟ್ಟರು ಅನ್ನು ಅವನನ್ನು."

"ಕೊಲೆಯಾಗಿ ಹೋದನೇ! ಅದೇನು ಸಾರ್?"

"ಒಬ್ಬ ಮುಂಡೆಯ ಸಲುವಾಗಿ, ಅವಳು ಹೇಗಿದ್ದಳು ಗೊತ್ತೆ? ರಾಮ ರಾಮ!"

"ಫಿನು ಸಾರ್ ಕರೆದದ್ದು?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಡಿ ಬಂದು ಮುಂದು ನಿಂತ ಮಾಣಿ.

"ನಿನ್ನನ್ನು ಯಾರಯ್ಯಾ ಕರೆದರು ?"

ದುರುಗುಟ್ಟಿ ನೋಡುತ್ತ ಕೇಳಿದ ತಿಂಮ. ಮಾಣಿ ಹೀಗೆ ಮಧ್ಯದಲ್ಲಿ ಬಂದುದು ಅವನಿಗೆಷ್ಟೂ ಸರಿಬರಲಿಲ್ಲ.

"ಕೂಗಿದರಲ್ಲ ಸ್ವಾಮೀ ಯಜಮಾನರು ?"

ನಗೆಮೂಡಿತು ಶುದ್ಧ ಸಾಹಿತಿಗಳ ಮುಖದಲ್ಲಿ. ತಿಂಮನೂ ನಕ್ಕ.

"ನಿನ್ನ ಹೆಸರು ರಾಮ ಏನಯ್ಯ ? ಸರೆ, ನೀನು ಬಂದುದೇ ಒಳ್ಳೆಯ ದಾಯಿತು ಬಿಡು. ಇನ್ನೊಂದು ಬೆಂಣೆಯ ದೋಸೆಯನ್ನೇ ತಾ ನನಗೆ."

"ಬೆಂಣೆ ದೋಸೆ ಇಲ್ಲವಲ್ಲ ಸ್ವಾಮೀ ?"

"ಅಹುದು ಮರೆತಿದ್ದೆ. ಮಧ್ಯೆ ಯಾವ ಮಾತೋ ಬಂದು ವಿಷಯಾಂತರ ಆಗಿಹೋಯಿತು. ಇಲ್ಲಿ ಕೇಳಯ್ಯಾ, ತಿಂಮಾ! ಏನು ಹೇಳುತ್ತಿದ್ದೆ ನಾನು ?

"ಯಾವಳೋ ಮುಂಡೆಯ ವಿಷಯ ಹೇಳುತ್ತಿದ್ದಿರಿ."

ಮುಖವನ್ನು ಕಿವುಚಿದರು ಮಡಿ ಸಾಹಿತಿಗಳು. ಹೋಟೆಲ್ ಮಾಣಿಗೂ ಗೊತ್ತಾಗಬೇಕೆ ? ನಮ್ಮಂತಹ ವಯೋವೃದ್ಧರು ಆ, ಈ ಮುಂಡೆಯರುಗಳ ವಿಚಾರವಾಗಿ ಮಾತನಾಡಿಕೊಳ್ಳುತ್ತಿದ್ದಾರೆಂಬುದು. ಗೀತೆಯೋ, ಗಾಂಧಿಯೋ ಎಂದಂದುಕೊಳ್ಳಬೇಕು ಅವನು.

ತಿಂಮನನ್ನು ಕೊಡವಿಬಿಟ್ಟರು.

"ಹೋಗೋ ಅಪ್ರಯೋಜಕಾ ! ಅದೇನನ್ನೋ ಹೇಳುತ್ತಿದ್ದೆ—"

ಬಲಗೈ ಎಂಜಲಾಗಿದ್ದುದರಿಂದ ಎಡಗೈಯಿಂದ ತಲೆ ಕೆರೆದುಕೊಳ್ಳುತ್ತ ಒಳಗಿದ್ದುದನ್ನು ಹೊರಗೆ ಕರೆದರು.

"ಹಾಂ ! " ಎಂದು ತಿಂಮ ನೆನಪಿಸಿಕೊಟ್ಟ.

"ಮೂವತ್ತಾರು, ಮೂವತ್ತೇಳು, ಮೂವತ್ತೆಂಟು ಅನ್ನು ಎಂದಿರಿ ಸ್ವಾಮಿ."

ಯಜಮಾನರ ಒಂದೇ ಹುಬ್ಬು ಕಣ್ಣಿನ ಸಮೇತ ಮೇಲೆ ಹೋಗಿ ಸೊಟ್ಟಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಏನು ಮೂವತ್ತಾರು, ಮೂವತ್ತೇಳು, ಮೂವತ್ತೆಂಟೋ ? ದೋಸೆಗಳೇ ? "

"ಬೇಗ ಹೇಳಿ ಮಹಾರಾಯರೇ ! ನನಗೆ ಬೇರೆ ಟೇಬಲ್‌ಗಳಿಗೆ ಸಪ್ಲೈ ಮಾಡುವುದುಂಟಲ್ಲವಾ ? "

ಮಾಣಿಯ ಅವಸರ ಮಾಣಿಗೆ.

"ನಿಲ್ಲಯ್ಯ ಕೊಂಚ. ಕವಿಗಳು ಏನೋ ಹೇಳುತ್ತಿದ್ದಾರೆ. ಈ ಮುಂಡೇದು ನಡುವೆ ಬಂದು ರಸಭಂಗ ಮಾಡುತ್ತದೆ."

ತಿಂಮ 'ರೋಪು' ಹಾಕಿದ. ಮಾಣಿ ದುಡುದುಡು ಹೊರ ನಡೆದ, ಅದೇನನ್ನೋ ಒಟಗುಟ್ಟಿಕೊಳ್ಳುತ್ತ.

ಯಜಮಾನರ 'ಟ್ಯೂಬ್ ಲೈಟ್'ನಂತಹ ಬುದ್ಧಿ ಇದ್ದಕ್ಕಿದ್ದಂತೆಯೇ ಜಾಜ್ವಲ್ಯಮಾನವಾಯಿತು, ಕೊಂಚ ತಡವಾಗಿಯಾದರೂ !

"ಹಾಂ ! ಇದನ್ನು ಹೇಳುತ್ತಿದ್ದೆ. ನಮ್ಮ ಜನಗಳ ಅಭಿರುಚಿ ಕಾಲ ಕ್ರಮೇಣ ಕೆಳಮಟ್ಟಕ್ಕಿಳಿಯಿತು ಎಂಬುದನ್ನು ಹೇಳುತ್ತಿದ್ದೆ. ಮೂವತ್ತೆಂಟನೆಯ ಇಸವಿಯಲ್ಲಿ ಮಾಯವಾಯಿತಯ್ಯ, ಆ ಬೆಣ್ಣೆ ದೋಸೆ. ಈ ಹಾಳು ಕಡಲೆಕಾಯಿ ಎಣ್ಣೆ, ಅಂಗಡಿ ತುಪ್ಪ ಬೆರಸಿ ದೋಸೆ ಹಾಕಲು ಪ್ರಾರಂಭ ಮಾಡಿದರು ಆಗ. ಅಹುದು ಮೂವತ್ತೆಂಟೆ. ನನಗೆ ಅದು ಚೆನ್ನಾಗಿ ಜ್ಞಾಪಕ ಏದೆ. ಏಕೆ ಗೊತ್ತೇ ? ಅದೇ ವರುಷವೇ ನನ್ನ ಬೃಹತ್ ಗ್ರಂಥ, ಏಕಮೇವಾದ್ವಿತೀಯವಾದಂಥಾದ್ದು,..."

"ಯಾವುದು ಸ್ವಾಮೀ, ಅದು ?"

ಮುಖ ನೋಡಿದ ತಿಂಮ.

"ಅಯ್ಯೊ ಚಾಂಡಾಲಾ ! ನನ್ನ ಉತ್ತಮ ಕೃತಿ ಮ್ಯಾಗ್ನಂ ಓಪಸ್ ! ಅದರ ಹೆಸರನ್ನೇ ಕೇಳಿಲ್ಲವೇನೋ ನೀನು ? ಏನು ಸಾಹಿತ್ಯ ಓದುವಿರಿ, ಹಾಗಾದರೆ ?"

"ಯಾವುದು ಸ್ವಾಮೀ ? ಅದರ ಹೆ_ಸ_ರೂ......"

"ನನ್ನ ಶಾಶ್ವತ ಸಾಹಿತ್ಯ ! ನೋಡಿಲ್ಲವೇನೋ ತಿಂಮ, ಅಯ್ಯೋ ಪೆಚ್ಚು ಮುಂಡೇದೆ !"

ಕವಿಗಳ ಕಣ್ಣಲ್ಲಿ ಕಾಂತಿ ಮಿರಮಿರನೆ ಮಿನುಗಿತು. ಕೃತಿ ರಚನೆಯ ಕಾಲದಲ್ಲಲ್ಲ ಈ ಶುದ್ಧ ಸಾಹಿತಿಗಳ ಬುದ್ಧಿ ಚುರುಕಾಗುತ್ತಿದ್ದುದು—ತಮ್ಮಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಚಿತವಾದ ಕೃತಿಗಳ ಬಗ್ಗೆ ಮಾತನಾಡುವಾಗ ಅತ್ಯುದ್ಭುತವಾಗಿ ಪ್ರಖರ ವಾಯಿತು. ನಾಲಗೆಯಂತೂ ಸರೇ ಸರೇ !

"ಐದು ನೂರಾ ಅರವತ್ಮೂರು ಪುಟಗಳು, ಯಾವನಯ್ಯ ಬರೆದಿದ್ದಾನೆ ಅಂತಹ ಬೃಹತ್ ಗ್ರಂಥವನ್ನು ? ಹೇಳು ನನಗೆ. ಇಪ್ಪತ್ತು ಜನರು ಅದನ್ನು ಓದಿದರೆ ಒಬ್ಬನಿಗೋ ಇಬ್ಬರಿಗೋ, ತಿಳಿದರೆ ಹೆಚ್ಚು..."

"ಅಹುದೇನು ಸ್ವಾಮೀ ? ವಿಷಯ ಅಷ್ಟು ಕ್ಲಿಷ್ಟವಾದದ್ದೆ ?"

ಇಷ್ಟಗಲವಾಯಿತು ಸಾಹಿತಿಗಳ ಮುಖ. ಎದೆಯುಬ್ಬಿತು. ಕಣ್ಣು ಹೊಳೆಯಿತು. ನಾಲಗೆಯಂತೂ ಸರೇ ಸರೆ—ಕಡಿವಾಣವನ್ನು ಕಳೆದುಕೊಂಡ ಹೆಣ್ಣು ಕುದುರೆ.

"ಈಗಿನ ಸಾಹಿತಿ ಕುನ್ನಿಗಳೂ ಇವೆ, ನೋಡು. ಏನೋ ಕಚರಾನೆಲ್ಲ ಬರೆದುಕೊಂಡು ಪುಟ ತುಂಬುತ್ತವೆ, ಬದುಕುತ್ತವೆ. ಓದಲು ಸಾಧ್ಯವೇನಯ್ಯಾ ಈ ಕಾಲದಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯವನ್ನು ? ಹೋಗಲಿ, ಅದೂ ಸಾಹಿತ್ಯವೇ ? ಸೂಳೆಯರ ಕತೆಗಳು, ಮೋಟಾರು ಡ್ರೈವರನ ಅವನ ಮುಂಡೆ ಯರ ಪ್ರಣಯ, ಇಲ್ಲವೆ ಗಂಡ ಹೆಂಡತಿ ಇಬ್ಬರೇ ಇದ್ದಾಗ ಆಡಿಕೊಳ್ಳುವ ಮಾತು. ಇದು ಸಾಹಿತ್ಯವೇ ? ನಾಲ್ಕು ಕಾಲ ಉಳಿಯಬೇಕಯ್ಯ ಏನಾದರೂ ಬರೆದರೆ. ನಾನೂ ಬರೆದಿದ್ದೇನೆ ನೋಡು, "ಶಾಶ್ವತ ಸಾಹಿತ್ಯ" ವನ್ನು ! "

"ಅದು ಶಾಶ್ವತವಾಗಿ ಉಳಿಯುತ್ತದೇನು, ಸ್ವಾಮಿ ?"

"ಶಾಶ್ವತವಾಗಿ ಉಳಿಯುತ್ತದೇನು ? ಆಚಂದ್ರಾರ್ಕವಾಗಿ, ತ್ರಿಕಾಲಾ ಬಾಧಿತವಾಗಿ ! ತಿಳಿಯಿತೇ ? ಅದರ ಹೆಸರೇ 'ಶಾಶ್ವತ ಸಾಹಿತ್ಯ'ವಯ್ಯಾ ಯಾರಿಗಾಗಿ ಗೊತ್ತೇ ನಾನು ಅದನ್ನು ಬರೆದುದು ?"

"ಯಾರಿಗಾಗಿ ಮಹಾಸ್ವಾಮಿ ? ಪಾಮರರಿಗಂತೂ ಅಲ್ಲ, ಬಿಡಿ ; ಗೊತ್ತಾಯಿತು, ಕೇವಲ ಪಂಡಿತರಿಗಾಗಿಯೇ ಇರಬೇಕು."

"ಅವನಮ್ಮನ ಪಿಂಡ ! ಯಾವ ಪಂಡಿತನಯ್ಯಾ ಇದ್ದಾನೆ, ನನ್ನ ಗ್ರಂಥವನ್ನೋದಿ ಜೀರ್ಣಸಿಕೊಳ್ಳುವಂತಹನು ? ಯಾವನಿಗಿದೆ ಆ ತಾಖತ್ತು ? ಒಬ್ಬನನ್ನು ತೋರಿಸು."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹಾಗಾದರೆ ಏಕೆ ಸ್ವಾಮೀ, ಅಂತಹದನ್ನು ಬರೆದಿರಿ ? ಯಾರು ಓದಬೇಕು ಅದನ್ನು ?"

"ಇನ್ನೂ ಹುಟ್ಟಲೇ ಇಲ್ಲ ಅವನು."

"ಅಯ್ಯೋ !"

ಪೆಚ್ಚಾಗಿ ಹಲ್ಲುಕಿರಿದ ತಿಂಮ.

ಪ್ರಚಂಡ ಪಂಡಿತರ "ಭಾಕರ ಭೀಷಣ" ಇನ್ನಷ್ಟು ಪ್ರಖರವಾಯಿತು. ಅಳತೆ ಮಾಡಿ ಹೆಜ್ಜೆ ಇಡುವವರಂತೆ ಗಂಭೀರ ಧ್ವನಿಯಲ್ಲಿ ಒಂದೊಂದೇ ಮಾತನ್ನು ಆಡಿದರು. ಸಾಹಿತ್ಯಗಾಂಪರ ಕಿವಿ ಕೆನ್ನೆ ಕೆಂಪಾಗಿದ್ದುವು.

"ಒಂದು ಮಾತು ಹೇಳುತ್ತೇನೆ. ಕೇಳು ತಿಂಮಾ ! ನಾ ಹೇಳೋದು ನಭೂತೋ ನಭವಿತವ್ಯಂ—ಅಂದರೇನು ಗೊತ್ತೇ ?"

"ಇಲ್ಲ ಸ್ವಾಮೀ ! ನನಗೆಲ್ಲಿ ತಿಳಿಯಬೇಕು ಸಂಸ್ಕೃತ."

"ಹೇಳುತ್ತೇನೆ ಕೇಳು. ಹಿಂದು ಆಗಿಲ್ಲ, ಮುಂದು ಆಗುವುದಿಲ್ಲ".

"ಅದೇಕೆ ಸ್ವಾಮೀ, ಹಾಗಾಯಿತು ?"

ಗಾಬರಿಯಿಂದ ಕೇಳಿದ ; ಅವನ ಚಿಕ್ಕ ತಲೆಗೆ ಅದೇನು ತೋಚಿತೋ ?

"ಏನಯ್ಯ ನೀನೆನ್ನುವುದು ? ಸಾಧ್ಯವೇ ? ಇನ್ನೊಬ್ಬನು ಹುಟ್ಟುತ್ತಾನೆಯೆ ? ಒಬ್ಬ ವ್ಯಾಸ. ಒಬ್ಬ ವಾಲ್ಮೀಕಿ. ಓರ್ವನೇ ಗೀತಾಚಾರ್ಯ. ಆದರೆ ಒಂದು, ಕಾಲ ಬಂದಾಗ ಮಹಾಭಾರತವು ಮಾಯವಾಗಬಹುದು. ರಾಮಾಯಣವನ್ನಂತೂ ಈಗಾಗಲೇ ಕೇಳುವವರಿಲ್ಲ ಅನ್ನು. ಗೀತೆಯ ಗತಿ ಏನಾಗುತ್ತದೋ ನಾನಂತೂ ಹೇಳಲಾರೆ. ಆದರೆ ನನ್ನ 'ಶಾಶ್ವತ ಸಾಹಿತ್ಯ' ಮಾತ್ರ..."

ತಿಂಡಿ ಮುಗಿಯಿತು. ಕಾಫಿ ಆಯಿತು. ಟೇಬಲ್‌ಗೆ ಬಿಲ್ಲು ಬಂತು. ಈ ಮಡಿ ಸಾಹಿತಿಗಳ ಭಾಷಣವೇ ಮುಗಿಯಲಿಲ್ಲವಲ್ಲ ?

"ಮರೀ !"

ಎಂದು ಕೂಗಿದರು ಶಾಶ್ವತ ಸಾಹಿತ್ಯಾಚಾರ್ಯರು.

ಬಿಲ್ ಮತ್ತು ಹಣವನ್ನು ಕೊಟ್ಟು ಅವನಿಗೆ ಹೇಳಿದರು.

"ನಿನ್ನ ದೋಸೆಯ ಆ ಹಾಳು ಡಾಲ್ಡಾ ಕೈಗೆಲ್ಲ ಮೆತ್ತಿದೆ, ಒಂದು ಕಾಗದ ತಾರಯ್ಯ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No...



"ನನ್ನ 'ಶಾಶ್ವತ ಸಾಹಿತ್ಯ' ಇದೇ ನೋಡು, ಇದನ್ನ...."

CC0. In Public Domain. Jangamwadi Math Collection, Varanasi

[illegible] ಕಾಗದದಿಂದ ಬೆರಳಿನ ಜಿಡ್ಡು ಒರೆಸುತ್ತ ಮುಂದು ವರಿಸಿದರು.

"ಏನೇನೋ ಬರೆದುಕೊಳ್ಳುತ್ತವೆ ಮುಂಡೇವು. ಅದನ್ನೆಲ್ಲ ಸಾಹಿತ್ಯ ಅನ್ನಬೇಕೇ ? ಅವರೂ ಸಾಹಿತಿಗಳೇ ? ನನ್ನ ಶಾಶ್ವತ ಸಾಹಿತ್ಯ ಇದೇ ನೋಡು. ಇದನ್ನು ಸೃಷ್ಟಿಸಿದ ನಾನು ಸಾಯುತ್ತೇನೆ. ಸೂರ್ಯಚಂದ್ರರು ಸಹ ಇಲ್ಲದಾಗ ಬಹುದು. ಈ ಪೃಥ್ವಿಯೂ ಹೋಗುತ್ತದೆ ಪ್ರಳಯ ಕಾಲದಲ್ಲಿ. ಆದರೆ ನನ್ನ "ಶಾಶ್ವತ ಸಾಹಿತ್ಯ "? ನನ್ನ ಅಮರ ಕೃತಿಗೆ ಚ್ಯುತಿ ಇದೆಯೇ ? ಕಾಲಾತೀತವಯ್ಯಾ ಅದು..."

ಅದೇಕೋ ಇದಕ್ಕಿದ್ದಂತೆ ಬ್ರೇಕ್ ಬಿದ್ದಿತು ಮಹಾ ಪಂಡಿತರ ನಾಲಗೆಗೆ ! ಕೈಗೆ ಉಜ್ಜಿದ ಕಾಗದವನ್ನು ಕೆಳಗೆ ಬಿಸುಡುವ ಮುನ್ನ ಅದರಲ್ಲಿದ್ದ ಅಕ್ಷರಗಳು ಕಣ್ಣಿಗೆ ಬಿದ್ದುವು. ಶಾಶ್ವತ ಸಾಹಿತ್ಯದ ಬ್ರಹ್ಮರು ಓದಿದರು— ಶಾಶ್ವತ ಸಾಹಿತ್ಯ !

"ಸ್ವಾಮೀ !"

ಎಂದ ತಿಂಮ. ಎಲ್ಲಿದ್ದಾರೆ ಸ್ವಾಮಿಗಳು ?

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿಟಿ ಬಸ್ ಹೆಂಡತಿ

"ಒದೆಯಿರಿ ಅವನ್ನ"

"ನಾಲ್ಕು ಕೊಡಿರಿ. ಏನು ನೋಡುತ್ತೀರಿ"

"ಪೋಲೀಸಿಗೆ ಹಿಡಿದು ಕೊಡಿ ಆ ಬದ್ಮಾಷನ್ನ"

"ಪೋಲೀಸರು ಏಕೆ ? ನಾವೇ ಮೈ ಮುಪ್ಪು ಮಾಡಿಬಿಡೋಣ."

ಬಸ್ಸಿನಲ್ಲಿದ್ದವರೆಲ್ಲರೂ ರೇಗಿಕೊಂಡು ತಲೆಗೊಂದು ಮಾತನಾಡಿದರು.

ಡ್ಯಾಗರ್ ಕಟ್ ಮೀಸೆಯ ಬಿಸಿ ರಕ್ತದ ಕಿರಿಯನೊಬ್ಬ ಅಂಗಿಯ ತೋಳನ್ನೇ ಏರಿಸಿದ. ಇನ್ನೊಂದೈದು ಮಿನಿಟುಗಳಲ್ಲಿ ಅವನು ತಿಂಮನ ಮೂಗಿನಿಂದ ದಳದಳ ರಕ್ತವನ್ನೇ ಸುರಿಸುತ್ತಿದ್ದ.

ಅಂತಹ ತಪ್ಪು ಮಾಡಿದ್ದನೇ ತಿಂಮ ?

ಮಾಡಿದ್ದ !

ಬುದ್ಧಿ ಇಲ್ಲವೇ ತಿಂಮನಿಗೆ ಅಂತಹ ಕೆಲಸ ಮಾಡಲು ? ಅದೇಕೆ ಹಾಗೆ ಹೇಳಿದ ಕಂಡಕ್ಟರನಿಗೆ ?

ಅಥವ ಕಂಡಕ್ಟರ ಮುಂಡೇದು ತಪ್ಪು ತಿಳಿದುಕೊಂಡಿತೊ ? ಇಲ್ಲ, ಇಲ್ಲಿ ಆ ಕಂಡಕ್ಟರನದು ಏನೂ ತಪ್ಪಿಲ್ಲ. ಎರಡೆರಡು ಬಾರಿ ಕೇಳಿದರೂ ತಿಂಮ ಹಾಗೆಯೇ ಹೇಳಿದ್ದ.

ಅದಾರೋ ಹೆಣ್ಣು ಮಗಳನ್ನು ತನ್ನ ಹೆಂಡತಿ ಎಂದು ತೋರಿಸಬೇಕೇ ತಿಂಮ ?

ಬಸ್ಸಿನಲ್ಲಿ ಗಂಡುಗಳು ಒದೆಯದೆ ಬಿಟ್ಟಾರೆಯೆ ಅವನನ್ನು ?

ಜರುಗಿದುದು ಇಷ್ಟೇ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಟಿಕೆಟ್ ಟಿಕೆಟ್"

ಎನ್ನುತ್ತ ಕಂಡಕ್ಟರ್ ಎಲ್ಲ ಪ್ಯಾಸೆಂಜರುಗಳ ಬಳಿ ಬಂದ; ತಿಂಮನ ಬಳಿಯೂ ಬಂದ.

''ಅಲ್ಲಿದ್ದಾರೆ ನಮ್ಮಾಕೆ, ಅವರನ್ನು ಕೇಳಿ''

ಎಂದು ಮುಂದಿನ ಸೀಟಿನಲ್ಲಿ ಕುಳಿತಿದ್ದ ಸ್ತ್ರೀಯರ ಕಡೆ ತಿಂಮ ಕೈ ತೋರಿಸಿದ.

"ಯಾರಯ್ಯಾ ನಿಮ್ಮವರು? "

ಕಂಡಕ್ಟರು ಅನುಮಾನಿಸುತ್ತ ಕೇಳಿದ.

ಅರ್ಧ ಎದ್ದು, ಬಾಗಿ, ಬೆರಳು ಮಾಡಿ ಆಕೆಯನ್ನೇ ತೋರಿಸಿದ ತಿಂಮ.

"ಅವರು ಆಗಲೇ ತಮ್ಮ ಒಂದು ಟಿಕೇಟನ್ನು ಕೊಂಡಿದ್ದಾರಯ್ಯ"

"ನನ್ನದನ್ನೂ ಅವರೇ ಕೊಳ್ಳುತ್ತಾರೆ. ನೀವು ಹೋಗಿ ಕೇಳಿ"

ಕೊಂಚ ಗಡುಸಾಗಿಯೇ ಹೇಳಿದ ತಿಂಮ.

ಮುಂದಿನ ಸೀಟಿನಲ್ಲಿ ಕುಳಿತಿದ್ದ ಆ ಆಕೆ ತಿಂಮನ ಮನೆಯಾಕೆಯೆ ?

ದುಂಡು ಮುಖ, ಇನ್ನೂ ಹೆಚ್ಚು ದುಂಡು ಮೈ, ದಷ್ಟ ಪುಷ್ಟವಾದ ಜೋಡು ಎಮ್ಮೆಕೆಯ ಹೆಣ್ಣು. ಬಣ್ಣ ? ಒಳ್ಳೆಯ ನಿಂಬೆ. ಶ್ರೀಮಂತಿಕೆಯಲ್ಲಿ ಬೆಳೆದಾಕೆ ಎಂದು ಆಕೆಯ ಮುಖ, ಮೈ, ಉಡುಪು, ಆಕೆ ಕುಳಿತಿದ್ದ ಠೀವಿ ಎಲ್ಲವೂ ಹೇಳುತ್ತಿದ್ದುವು. ತಿಥಿ, ವಾರ ಮತ್ತು ದಿನಾಂಕವನ್ನು ಹೇಳುವ ಕೈ ಗಡಿಯಾರ. ಚಿನ್ನದ ಚೈನು ಅದಕ್ಕೆ. ನೈಲಾನ್ ಸೀರೆ, ಕಾಲಲ್ಲಿ ಗಾಳಿ ಚಪ್ಪಲು, ತುಟಿಗೆ ಕೆಂಪು, ತೊಡೆಯ ಮೇಲೆ ಜಂಬದ ಚೀಲ. ಇನ್ನೊಂದು ಪ್ಲಾಸ್ಟಿಕ್ ಬುಟ್ಟಿ ಬೇರೆ; ಚೆಕ್‌ಬುಕ್, ಇನ್ನೂ ಏನೇನೋ ಹೊರ ಕಾಣು ತ್ತಿದ್ದುವು ಅದರಿಂದ. ಯಾರೋ ಬಹು ದೊಡ್ಡ ಅಧಿಕಾರಿಗಳ ಹೆಂಡತಿ ಇರಬೇಕು ಆಕೆ. ಅಥವ ಆಗರ್ಭ ಶ್ರೀಮಂತರ ಮನೆಯಾಕೆ, ಸಿಟಿ ಬಸ್ಸಿನಲ್ಲಿ ಬರುವಂತವರೇ ಅಲ್ಲ—ಅವರ ಕಾರು ಕೆಟ್ಟಿರಬೇಕು ಪ್ರಾಯಶಃ.

ತಿಂಮ ?

ಆ ಕ್ರಾಪು ಎಂದು ಕಂಡಿದ್ದಿತೋ ಬಾಚಣಿಕೆಯನ್ನು, ಪಾಪ! ಒಣಗಿದ ಮುಖ. ಅವನ ಗಡ್ಡಕ್ಕೆ ವಾರದಲ್ಲಿ ಒಂದು ಸಲವಾದರೂ ಬ್ಲೇಡು ತಾಕಿದ್ದರೆ ಅವನ ಪುಣ್ಯ. ಅರ್ಧ ಮಾಸಿದ ಶರಟು, ಪೂರ್ತಿ ಮಾಸಿದ ಪ್ಯಾಂಟು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಲಿಷ್ ಅಂದರೇನು ಅನ್ನುವಂತಹ ಬೂಟು ಕಾಲಲ್ಲಿ. ಕಪ್ಪು ಅದರ ಬಂಣ, ಕೊಂಡಾಗ. ಈಗ ? ಬೂದಿಯ ಬಂಣ ಬಂದು ಕ್ರಮೇಣ ಬಿಳಿದಾಗುತ್ತ ಸಾಗಿದ್ದಿತು. ಯಾರು ಬಲ್ಲರು, ತಿಂಮ ಸೆಕೆಂಡ್‌ಹ್ಯಾಂಡ್ ಬೂಟನ್ನೇ ಕೊಂಡಿದ್ದರೆ ?

ಕೈಗಡಿಯಾರ ?

ಊರಲ್ಲಿಲ್ಲವೆ ಕಾರ್ಪೊರೇಷನ್ ಗೋಪುರದ ಗಡಿಯಾರ ?

ಈ ತಿಂಮ ಆ ಹೆಂಣಿನ ಗಂಡನೆ !

ಹೇಳಿದನಲ್ಲ ಹಾಗಾದರೆ ?

ಹೇಳಿದ ಅಲ್ಲ. ಬೊಗಳಿದ ಆ ಭಂಡ ತಿಂಮ.

"ನನ್ನ ಮೇಮ್ ಸಾಬ್ ಇದ್ದಾಳೆ ನೋಡು ಅಲ್ಲಿ. ಆಕೆಯೇ ಟಿಕೀಟು ಕೊಳ್ಳುತ್ತಾಳೆ"

ಎಂದು ಧೈರ್ಯವಾಗಿ ಹೇಳಿದ್ದ, ತಾಳಿಯನ್ನು ಕಟ್ಟಿ ಆಳುತ್ತಿದ್ದ ಗಂಡನಂತೆ.

ಅವರು ಗಂಡ–ಹೆಂಡತಿ ಅಲ್ಲ ಎಂದು ಕಂಡಕ್ಟರನಿಗೆ ಹೇಗೆ ಗೊತ್ತು ? ಇದ್ದರೂ ಇರಬಹುದು ?

ಒಂದೇ ಸ್ಟಾಪ್‌ನಲ್ಲಿ ಇಬ್ಬರೂ ಬಸ್ ಏರಿದ್ದರು.

ಇದು ಚೆನ್ನಾಗಿದೆ–ಒಂದೇ ಸ್ಟಾಪ್‌ನಲ್ಲಿ ಒಂದು ಗಂಡು, ಒಂದು ಹೆಂಣು ಬಸ್‌ನಲ್ಲಿ ಏರಿದ ಮಾತ್ರಕ್ಕೆ ಅವರು ಗಂಡ, ಹೆಂಡತಿ ಆಗಿಹೋದರೆ !

ಮೊದಲು ಇಬ್ಬರೂ ಒಂದೇ ಸೀಟ್‌ನಲ್ಲಿ ಕುಳಿತಿದ್ದರು ?

ಏನು ತಪ್ಪು ?

ಇದು ಬೆಂಗಳೂರು, ಮರಿಯಮ್ಮನಹಳ್ಳಿ ಅಲ್ಲ !

ಮುಂಬಯಿ, ದಿಲ್ಲಿಗಳಲ್ಲಿ ಬಸ್‌ನಲ್ಲಿರುವವರೆಲ್ಲರೂ ಪ್ಯಾಸೆಂಜರುಗಳು, ಅಷ್ಟೇ.

ಗಂಡು, ಹೆಂಣು ಎನ್ನುವ ದ್ವೈತ ಸಂಪ್ರದಾಯವೆಲ್ಲ ಅಲ್ಲಿಲ್ಲ.

ಎಲ್ಲವೂ ಅದ್ವೈತವಾಗಿ ಹೋಗಿದೆ ಆ ದೊಡ್ಡೂರುಗಳಲ್ಲಿ.

ಮೈ ಮೈ ತಗುಲಿಸಿಯೇ ಕುಳಿತಿದ್ದರು ?

ಏನಾಯಿತು ಮೈಗೆ ಮೈ ತಗುಲಿದರೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನಸ್ಸು ಸ್ವಚ್ಛವಿದ್ದವರು ಮಾಡುವುದೇ ಹಾಗೆ —ಅಲ್ಲವೆ ?

ಕೊಂಚ ಸಮಯದ ನಂತರ ಮುಂದಿನ ಸೀಟು ಖಾಲಿ ಆಯಿತು. ಆಗ ಎದ್ದು ಹೋಗಿ ಅಲ್ಲಿ ಕುಳಿತಳು ಆ ತಾಯಿ.

ಆ ಆಕೆ ಈ ತಿಂಮನ ಹೆಂಡತಿಯಾದಳೆ ?

ಈ ಗಡಿಬಿಡಿಯಲ್ಲಿ ಕಂಡಕ್ಟರ್ ಪೆಚ್ಚಾದ, ಪಾಪ !

"ನಿಮ್ಮ ಯಜಮಾನರ ಟಿಕೀಟನ್ನು ನೀವೇ ಕೊಳ್ಳುತ್ತೀರಾ ?"

ಹುಲಿಯಂತೆ ಮೈ ಮೇಲೆಯೆ ಬಂದಿದ್ದಳು ಆ ಮಹರಾಯತಿ.

ಅಲ್ಲವೆ ಮತ್ತೆ ?

ಗರತಿ ಮಾತ್ರವೇ ಏಕೆ ? ಎಂತಹ ವೇಶ್ಯೆಯೂ ಸಹಿಸಲಾರಳು ಅಂತಹ ಅಪಮಾನವನ್ನು.

ಅದಾರ ಹೆಂಡತಿಯನ್ನೋ ತೋರಿಸಿ ತನ್ನ ಹೆಂಡತಿ ಎನ್ನುವುದೇ ತಿಂಮ?

ಬಸ್‌ನಲ್ಲಿದ್ದ ಗಂಡುಗಲಿಗಳು ಸುಮ್ಮನೆ ಬಿಟ್ಟಾರೆಯೆ ತಿಂಮನನ್ನು ?

"ಚೆನ್ನಾಗಿ ಒದೆಯಿರಿ ಆ ರ್‍ಯಾಸ್ಕಲ್‌ನನ್ನು"

ಎಲ್ಲರದೂ ಒಂದೇ ಮಾತು.

ಪ್ರಜಾಪ್ರಭುತ್ವದ ಕಾಲ ಬೇರೆ. ನಾಲ್ವರು ಸೇರಿ ಒದ್ದರೆ ಐದನೆಯವನು ಒದಿಸಿಕೊಳ್ಳಲೇಬೇಕು !

"ಅವರು ನಿನ್ನ ಹೆಂಡತಿ ಏನಯ್ಯಾ ? ಬದ್ಮಾಷ್ !"

ಬಲ ಮುಷ್ಟಿಯನ್ನು ಮೂಗಿನ ಬಳಿ ತಂದೇಬಿಟ್ಟ, ಮೆದುಳಿನಕಿಂತಲೂ ಮೀಸೆಯನ್ನೇ ಹೇರಳವಾಗಿ ಬೆಳೆಸಿಕೊಂಡಿದ್ದ ಒಬ್ಬ.

ತಿಂಮ ಪೆಚ್ಚಾಗಲಿಲ್ಲವಲ್ಲ ?

ಸಮಾಧಾನದಿಂದ ಹೇಳಿದ.

"ಅಹುದು ಸ್ವಾಮಿ ! ಆಕೆಯ ಕೈ ಚೀಲದಲ್ಲಿ ನನ್ನ ಪರ್ಸ್ ಇದೇ ನೋಡಿ."

"ನಿನ್ನ ಪರ್ಸು ! ಬದ್ಮಾಷ್ !"

ಕುಳಿತಲ್ಲಿಯೇ ಕಾಲಪ್ಪಳಿಸಿದಳು ಆಕೆ.

"ನನ್ನ ಫೋಟೋ ಕೂಡ ಇದೆ ಆ ಪರ್ಸ್‌ನಲ್ಲಿ. ಹಣ ಮಾತ್ರ ಇಲ್ಲ."

ಬಸ್ ಸ್ಟಾಪ್ ಬಂದಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಳಿದು ದುಡುದುಡು ನಡೆದರು ಅಮ್ಮನವರು.
ಟಪ್ ಎಂದು ಕೆಳ ಬಿದ್ದಿತು ತಿಂಮನ ಪರ್ಸು.
ಅದರಲ್ಲಿಂದ ತಿಂಮ ಹೊರತೆಗೆದ ತನ್ನ ಫೋಟೋವನ್ನು.
ಬಸ್‌ನಲ್ಲಿದ್ದವರೆಲ್ಲರೂ ಭಲಾ ಎಂದರು.
ತಿಂಮನಿಗಲ್ಲ !
ತಿಂಮನ ಸಿಟಿ ಬಸ್ ಹೆಂಡತಿಗೆ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಷ್ಟ್ರೀಯ ಅದ್ವೈತ

"ಏನಯ್ಯಾ ಮರಿ, ಕಾಣುತ್ತಲೇ ಇಲ್ಲವಲ್ಲ ಈ ಮಧ್ಯೆ ? ಮದುವೆ ಆಯಿತು ಎಂದರೆ ಜಗತ್ತನ್ನೇ ಮರೆತು ಬಿಡುವುದೇ ?"

"ಜಗತ್ತಷ್ಟೆ ಏಕೆ ಸಾರ್, ನನ್ನನ್ನೂ ನಾನು ಮರೆತುಕೊಳ್ಳಬೇಕಾಗಿದೆ ಈಗ. ಹಾಯಾಗಿ ಇದ್ದೆ ಸ್ವಾಮೀ ಇಷ್ಟು ವರ್ಷ. ಉರುಲು ಹಾಕಿಕೊಳ್ಳಲು ಹಗ್ಗವನ್ನು ಕೊಂಡು ತಂದಂತಾಗಿದೆ, ಲಗ್ನವಾದುದು......"

ಇನ್ನೂ ಹಾಗೆಯೇ ಗೊಣಗಿದ ; ಗೊಣಗುತ್ತಲೇ ಇರುತ್ತಿದ್ದ ನಾನು ಮಧ್ಯೆ ಮಾತನಾಡಿರದಿದ್ದರೆ.

ಹೊಸತಾಗಿ ಲಗ್ನವಾದ ಹುಡುಗರು ಹೀಗಿರಬೇಕೆ ?

"ಮಾತನಾಡುತ್ತ ನಿಲ್ಲಲು ಪುರುಸೊತ್ತಿಲ್ಲ ಸಾರ್. ಅವಳನ್ನು ಸ್ಕೂಟರ್ ಮೇಲೆ ಕೂಡಿಸಿಕೊಂಡು ಪಿಕ್ಚರ್‌ಗೆ ಹೋಗಬೇಕು–ಬಂದೆ, ಬಂದೆ."

ಎನ್ನುತ್ತ ಓಡುತ್ತಿರಬೇಕು. ಆ ವಯಸ್ಸು, ಆ ಸಂದರ್ಭ, ಆ ಸನ್ನಿವೇಶ ಅಂತಹವು.

ಈ ಮುಂಡೇದು ಹೀಗೆ ಅಪಸ್ವರ ತೆಗೆಯಿತು ಅದೇಕೋ, ಪಾಪ !

"ತುಂಬ ತಾಪತ್ರಯ ಆಗಿಹೋಗಿದೆ ಸಾರ್, ಮನೆಯಲ್ಲಿ. ಅವಳೂ..."

"ನಿನ್ನ ಅಕ್ಕ ಇದ್ದಾರೆ ತಾನೆ ?"

"ಇದ್ದಾರೆ ಸಾರ್. ಆ ಅಕ್ಕ ಇದ್ದಾರೆಂದೇ ಒಂದು ತುತ್ತು ಅನ್ನವನ್ನಾದರೂ ಕಾಣುತ್ತಿದ್ದೇನೆ. ಇಲ್ಲದಿದ್ದರೆ ಹೋಟೇಲೇ ಗತಿ."

"ಯಾಕಯ್ಯಾ, ನಿನ್ನ ಹೆಂಡತಿಗೆ ಅವರ ಮನೆಯಲ್ಲಿ ಅಡುಗೆ ಕಲಿಸಿಲ್ಲವೇ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಊಟ ಕಳಿಸಿದ್ದಾರೆ."

ಮುಖವನ್ನು ಗಂಟಿಕ್ಕಿದ ಕಿರಿಯ.

"ಇದು ತನ್ನ ಮನೆ ಅನ್ನುವ ಭಾವವೇ ಬರಲೊಲ್ಲದು ಸಾರ್, ಅವಳಿಗೆ ಇನ್ನೂ."

ಇವನು ಹೆಂಡತಿಯನ್ನು ದೂರುತ್ತ ನಿಂತರೆ ನಾನು ಕುಳಿತು ಕೇಳುವುದೇ ?

"ಎಲ್ಲವೂ ತಾನೇ ಸರಿಹೋಗುತ್ತೆ, ಇಂದಲ್ಲ ನಾಳೆ. ನೀವೂ ಕೊಂಚ ಅವಳಂತೆಯೇ ಹೋಗಬೇಕು. ಗಂಡ ಹೆಂಡತಿಯ ಪ್ರೇಮವನ್ನು ಕಾಯಿದೆಯಿಂದ ದೊರಕಿಸಲು ಸಾಧ್ಯವೆ ? ಒಬ್ಬರಿಗೊಬ್ಬರು ಹೊಂದಿಕೊಳ್ಳಬೇಕು. ಇದೆಲ್ಲವೂ ಪರಸ್ಪರ, ಅಲ್ಲವೇ ?"

ಅವನು ಇನ್ನೂ ಹಾಗೆಯೇ ನಿಂತಿದ್ದ. ನಾನೇ ಆ ಸ್ಥಳವನ್ನು ಬಿಟ್ಟು ಹೊರಟೆ.

ಒಂದು ಮನೆಯ ಕಥೆ ಇದು, ಒಂದು ಕುಟುಂಬದ ಜೀವನ ಹೀಗಿದೆ. ಎಷ್ಟಿವೆಯೋ ಇಂತಹ ಸಂಸಾರಗಳು, ಪಾಪ !

ಮಧ್ಯಾಹ್ನ ಗಂಟೆ ಒಂದೂವರೆ ಆಯಿತು.

ಚಿಕ್ಕಚಿಕ್ಕ ಗುಂಪುಗಳು—ಇಬ್ಬಿಬ್ಬರು, ಮೂವರು, ನಾಲ್ವರು ತಂಡ ತಂಡವಾಗಿ ಆಫೀಸುಗಳಿಂದ ಹೊರಬೀಳುತ್ತಾರೆ ಕಾಫಿಗೆಂದು.

ನೋಡಬೇಕು ಅವರನ್ನು, ಅಲ್ಲ—ಕೇಳಬೇಕು ಅವರು ಆಡಿಕೊಳ್ಳುವ ಮಾತುಗಳನ್ನು, ಅಷ್ಟು ಸ್ವಾರಸ್ಯವಾಗಿರುತ್ತವೆ.

"ನೀವು ಸಾವಿರ ಹೇಳ್ರೆಪಾ, ಈ ಹಳೇ ಮೈಸೂರು ಮಂದೀ ಹಣೇ ಬಾರಾಸೇ ಹಂಗೆ. ಏನಂತೀರಿ ? ನೀವು ಏನಂತೀರೀ ಕುಲಕರ್ಣಿ ?"

"ನಾ ಆಗಲೆ ಹೇಳಿದನಲ್ಲ ನಿಮಗೆ ? ಛೇ ! ನಿಮ್ಮ ಜನದೊಂದಿಗೆ ಹೊಂದಿಕೊಳ್ಳೋದು ನಮ್ಮಿಂದಂತೂ ಸಾಧ್ಯಾನೇ ಇಲ್ಲ. ಅಗದೀ 'ಸ್ಮಾಲ್ ಮೈಂಡೆಡ್'ರೆಪಾ ಈ ಒನ್-ಬೈ-ಟೂ ಮಂದಿ. ಎಲ್ಲಾ ಕಡೀನೂ ತಮ್ಮದೇ ಶಾಠ್ಯ ಚಲಾಯಿಸ್ತಾರೆ ಮಕ್ಳು."

ಮೂರನೆಯವನು ಮೆಲ್ಲನೆ ನುಡಿದ.

"ತುಸು ಮೆಲ್ಲಗೆ ಒದರ್ರೆಲಾ. ಹಿಂದೆ ಅಯ್ಯಂಗಾರಿ ಬರಲಿಕ್ಕೆ ಹತ್ಯಾನೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಗುಂಪು ಹಳೆಯ ಮುಂಬಯಿ ಗುಮಾಸ್ತರುಗಳದು ಎಂದು ಪ್ರತ್ಯೇಕವಾಗಿ ಹೇಳಬೇಕೆ ?

ಇನ್ನೊಂದು ಚಿಕ್ಕ ಪಂಗಡ ಮುಂಚಿತವಾಗಿಯೇ ಬಂದು ಕುಳಿತಿರುತ್ತದೆ ಹೋಟಲಲ್ಲಿ !

"ಅಲ್ಲಾ ಸ್ವಾಮೀ ! ಹೈದರಾಬಾದಿನ ಈ ಕ್ಲಾರ್ಕುಗಳು ಬಂದಿವೆಯಲ್ಲಾ, ಇವರು ನಮಗೆ ಬೇಕು ಎಂದು ನಾವೇನಾದರೂ ಕೇಳಿಕೊಂಡಿದ್ದೆವೆ ? ಇವರು ಬಾರದಿದ್ದರೆ ನನಗೆ ಎಂದೋ ಪ್ರಮೋಷನ್ ಬಂದುಬಿಡುತ್ತಿತ್ತು. ಅಲ್ಲವೇನು ಶ್ರೀಕಂಠಯ್ಯ ?"

"ಆಳಬೇಕು ಅಷ್ಟೆ, ಈ ಬಾಂಬೆ ಈ ಹೈದರಾಬಾದು ಜನವನ್ನು ಕಟ್ಟಿಕೊಂಡು. ಅವರಿಗೆ ಕೆಲಸ ಬರುತ್ತೆಯೆ ?"

"ಕೆಲಸ ಬರಲಿ ಬಿಡಲಿ, ಸಂಬಳವಂತೂ ಬರುತ್ತೆ ನೋಡಿ.".

"ಅದೇನಯ್ಯಾ ಅಷ್ಟಷ್ಟು ಸಂಬಳ ಅವರಿಗೆ !"

"ಕೆಲಸಕ್ಕೆ ನಾವು, ಸಂಬಳಕ್ಕೆ ಅವರು."

ಹಳೆ ಮೈಸೂರಿಗರ ಧ್ವನಿ ಇದು.

ಹೊರಗಿನಿಂದ ಬಂದವರೆಲ್ಲರೂ ಒಂದು, ಮೊದಲಿನಿಂದಲೂ ಮೈಸೂರಿಗ ರಾಗಿದ್ದವರು ಒಂದು ಎಂಬಂತೆಯೂ ಇಲ್ಲ. ಮುಂಬಯಿ ಮತ್ತು ಹೈದರಾಬಾದುಗಳವರು ಕೂಡ ಹೃತ್ಪೂರ್ವಕವಾಗಿ ಸೇರಿ ಮಾತನಾಡಿ ಕೊಳ್ಳುವುದೂ ಕಡಿಮೆಯೇ. ಒಂದು ವೇಳೆ ಸೇರಿದರೆ, ಹಳೆ ಮೈಸೂರಿಗರನ್ನು ಆಡಿಕೊಳ್ಳಲಿಕ್ಕಷ್ಟೆ.

ಮಂಗಳೂರಿನವರು, ಕಾರವಾರದವರು, ಕೊಡಗಿನವರು ಸರೇ ಸರೆ. ಪ್ರತ್ಯೇಕವಾಗಿ ತಂದು ಹಚ್ಚಿದ ತೇಪೆಯಂತೆ ಕಾಣುತ್ತಾರೆ.

ಜಾಣ ಕಾರ್ಮಿಕರ ದಡ್ಡ ಬಾಳು ಇದು. ಸಮಾಜದ ಒಂದು ಅಂಗ ಹೀಗಿದೆ, ನಮಗೆ ಬೇಕಾಗಲಿ ಬೇಡವಾಗಲಿ.

"ಇನ್ನೂ ಯಾವಾಗಯ್ಯಾ ನೀನು ರೈಟ್ ಕೊಡುವುದು ?"

"ನಾನು ರೈಟ್ ಕೊಟ್ಟಾಗ ನೀನು ಗಾಡಿ ಬಿಡಯ್ಯಾ. ಅಲ್ಲಿಯವರೆಗೂ ಬಾಯಿಗೆ ಬೀಗ ಜಡಿದುಕೊಂಡಿರು. ತಿಳಿಯಿತೇ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಣ್ಣು ಕಿಸಿಯುತ್ತಾನೆ ಸಿಟಿ ಬಸ್ ಕಂಡಕ್ಟರ್, ಟಿಕೆಟ್ ಕೊಡುವುದೂ ನಿಂತು ಹೋಯಿತು ಅಲ್ಲಿಗೆ.

"ಗಾಡಿ ಲೈಟ್ ಆದರೆ ನಿಮ್ಮಪ್ಪಯೋಳ್ತವ್ನಾ ಇನ್ಸ್‌ಪೆಕ್ಟರಿಗೆ ಸಮ್ಝಾಯಿಷಿ ?"

"ನಮ್ಮಪ್ಪನ ತನಕ ಬಂದರೆ ಹಲ್ಲು ಉದುರಿಸ್ತೇನೆ ಗೊತ್ತಾ ?"

ಈ ಬಡಪಾಯಿ ಕಂಡಕ್ಟರನಿಗೇ ಗೊತ್ತಿಲ್ಲ, ಪಾಪ! ಬಾಯಿಂದ ಕೃತಕ ಹಲ್ಲನ್ನು ಹೊರತೆಗೆದು ಜೇಬಿಗೆ ಹಾಕಿ, ಸ್ಟೇರಿಂಗ್‌ನಿಂದ ಎದ್ದೇಬಿಟ್ಟ ಡ್ರೈವರ್ ಸಾಬಿ.

"ಬಾರೋ ಬೇಕೂಪ! ಯಾರ ಹಲ್ಲು ಯಾರು ಉದುರುಸ್ತಾರೋ ನೋಡೇ ಬಿಡ್ತಿವ್ನಿ"

ಎನ್ನುತ್ತ.

ಗಾಡಿಯಲ್ಲಿ ಕುಳಿತಿರುವವರು ಆಫೀಸುಗಳಿಗೆ ಹೋದಂತಾಯಿತಲ್ಲ ?

ಬಸ್ಸಿನಲ್ಲಿ ಏರಿ ಕುಳಿತರೆ ಆಯಿತು. ಡ್ರೈವರನಿಗೂ ಕಂಡಕ್ಟರನಿಗೂ ಈ ಮಾತಿನ ಕುಸ್ತಿ, ಇವರಿಬ್ಬರೂ ಒಂದಾದರೆ ಮುಗಿಯಿತು. ಎಲ್ಲರದೂ ಆದರೂ ಯಾರದೂ ಅಲ್ಲ ಎಂದು ಎಲ್ಲರೂ ತಿಳಿದಿರುವ ಸರಕಾರದ ಜೇಬಿಗೇ ಕತ್ತರಿ.

ಇನ್ನು ಜಾತಿಗಳ ಮಾತು.

ಜಗಳಕ್ಕಾಗಿಯೇ ಜಾತಿಗಳ ನಿರ್ಮಾಣವಾಯಿತೋ ಏನೋ ಎನ್ನುವಂತಿದೆ. ಅಲ್ಪ ಬುದ್ಧಿಯವನಿಗೆ ಅವನ ಜಾತಿಯೇ ಅಫೀಮು. ಇದರ ಉಪಯೋಗ, ಅರ್ಥಾತ್ ದುರುಪಯೋಗ ಅತಿ ಬುದ್ಧಿಯವನಿಗೆ ಮಾತ್ರ. ಕೆಲವೇ ದುರ್ಮತಿವಂತರು ಹಲವಾರು ಗತಿಗೇಡಿಗಳನ್ನು ಕೋತಿ ಮಾಡಿ ಕುಣಿಸಲು ಜಾತಿಯೊಂದು ಲಗಾಮು. ಜಾತಿಗಳು ಎಂದೋ ಸತ್ತಿವೆ, ಅವುಗಳ ಭೂತಗಳು ಇಂದು ಎದ್ದು ಕುಣಿಯುತ್ತಿವೆ. ಇದಕ್ಕೆ ಮದ್ದು ?

ಕೋಮುವಾರು (ತೆಲುಗು ಶಬ್ದದಂತಿದೆ ಇದು, ಅದೇಕೋ) ಭಾವನೆ ಹೋಗಬೇಕು ಎನ್ನದವರೇ ಇಲ್ಲ ಈಗ. ಇದರಲ್ಲಿ ಒಂದು ಸ್ವಾರಸ್ಯ.

"ಹಿಡಿಯಿರಿ, ಹಿಡಿಯಿರಿ, ಕಳ್ಳ! ಕಳ್ಳ!" ಎಂದು ಕೂಗುತ್ತ ಓಡಿ ಕಳ್ಳನೇ ಮೊದಲು ಪರಾರಿಯಾಗುತ್ತಾನೆ. ಹೇಗೆ ಗೊತ್ತಾಗಬೇಕು ಯಾವನು ಕಳ್ಳ, ಯಾವನು ಅಲ್ಲ ಎಂಬುದು ? ಕೈ ತಪ್ಪಿಸಿಕೊಂಡವನೇ ಕಳ್ಳ!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ನಿಮ್ಮ ಸ್ನೇಹಿತರು ಮೊನ್ನೆ ಬಂದಿದ್ದರಲ್ಲಾ ನಮ್ಮ ಮನೆಗೆ ನಿಮ್ಮ ಜೊತೆಯಲ್ಲಿ—ಪರವಾ ಇಲ್ಲ ಕಣ್ರೀ, ತುಂಬಾ ಜಾಣರಂತೆ ಕಾಣುತ್ತಾರೆ."

"ಅಲ್ಲವೆ ಮತ್ತೆ ? ಚೆನ್ನಾಗಿ ಓದಿಕೊಂಡಿದ್ದಾರೆ, ಸಾಕಷ್ಟು ಪರಿಶ್ರಮವಿದೆ, ಪಾಪ !"

"ಅಷ್ಟೇ ಒಳ್ಳೆಯ ಮನುಷ್ಯರೂ ಆಗಿ ಕಾಣುತ್ತಾರೆ ಅವರು"

"ಚಿನ್ನದಂತಹ ಮನುಷ್ಯ ಕಣ್ರೀ, ಆ ಮನುಷ್ಯ ಆ ಜಾತಿಯಲ್ಲಿ ಹುಟ್ಟ ಕೂಡದಿತ್ತು"

"ಯಾವ ಜನ ? ನಮ್ಮವರಲ್ಲವೇ ?"

"ಛೆ ಛೆ !.........ಜಾತಿ ಅವರದು."

"ಹಾಗೇನು ? ಕೊಂಚ ದೂರವೇ ಇಟ್ಟುಬಿಡಿ ಅವನನ್ನು."

"ನಾನೂ ಅಷ್ಟೇ ಮಾಡಿದ್ದೇನೆ."

"ನೋಡೀ ನೋಡೀ, ಆ ಜಾತಿಯನ್ನು ನಂಬುವುದೇ ?"

ಇಬ್ಬರೂ ಒಂದೇ ಬಾರಿಗೆ ಆಡುತ್ತಾರೆ ಈ ಮಾತನ್ನು. ಈ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಕ್ಕೆ ಆಸ್ಪದವೇ ಇಲ್ಲ.

ಇನ್ನು ಬಂತು ನೋಡಿ ಚುನಾವಣೆ, ಜನಿವಾರ, ಶಿವದಾರ, ದಾಡಿ ಮುಂತಾದುವುಗಳ ಪುಕ್ಕಟೆ ಪ್ರದರ್ಶನ. ಇದುವೇ ಪ್ರಜಾಪ್ರಭುತ್ವ ?

ಸಾಮಾನ್ಯ ಜನತೆಯ ಸಮಾಚಾರವೇ ಹೀಗಿರುವಾಗ ಇನ್ನು ರಾಜ ಕಾರಣಿಗಳ—ಓಟು ಭಕ್ಷಕರ—ವಿಚಾರ ಆಡಬೇಕೆ ? ಲೀಡರುಗಳಿಗಿಂತಲೂ ಮಿಸ್ಲೀಡರುಗಳೇ ಹೆಚ್ಚು. ಅವರ ಬೇಳೆ ಬೇಯಬೇಡವೇ, ಪಾಪ !

ಜನಪ್ರಿಯವಾಗಬೇಕಾದವರು ಸ್ವಜನ ಪ್ರಿಯರಾದರೆ, ದೇಶಪ್ರೇಮಿಗಳು ಮತ್ತು ಸ್ವಾರ್ಥತ್ಯಾಗಿಗಳು, ಸ್ವಾರ್ಥ ಪ್ರೇಮಿಗಳು ಮತ್ತು ದೇಶ ತ್ಯಾಗಿಗಳು ಆದರೆ ರಾಷ್ಟ್ರವನ್ನು ದೇವನೇ ಕಾಪಾಡಬೇಕು—ಸಾಧ್ಯವಾದರೆ.

'ಭಾರತಾಂಬೆ ! ಯಮ್ಮ ಮಾತೆ ಎಲ್ಲಕ್ಕಿಂತ ಹೆಚ್ಚು' ಯಮ್ಮ ಮಾತೆ ಎಂದರೆ ನಾವು ಆಡುವ ಮಾತೇ—ನಮ್ಮ ಭಾಷೆಯೇ, ಉಳಿದೆಲ್ಲ ಭಾಷೆಗಳ ಕಿಂತಲೂ ಹೆಚ್ಚು !

ಭಾಷೆಯ ಜಗಳ, ಜಾತಿಯ ಜಗಳ, ಓಟಿಗೆ ಜಗಳ—ಜಗಳ ಬೇಕಾ ದವರಿಗೆ ಕಾರಣ ದೊರೆಯುವುದು ಕಷ್ಟವೇ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ವಿದ್ಯಾರ್ಥಿಗಳು—ಮನೆಯಿಂದ ಮನಿಯಾರ್ಡರ್ ತರಿಸಿಕೊಳ್ಳುವ ಡಿಗ್ರ್ಯಾರ್ಥಿಗಳು—ಜಾತೀಯತೆಯ ಭಾವನೆಯಿಂದ ದೂರವಿರಬೇಕು ಎಂಬುದು ಅವರಿಗೆ ಮಾಮೂಲಾಗಿ ನಿಸ್ಸಂದೇಹವಾಗಿ ಬರುವ ಸಂದೇಶ. ಅವರು ಕುಡಿದ ಹಾಲಿನ ಗುಟುಕಿನಲ್ಲಿಯೇ ಇತ್ತು ಆ ಅಶುದ್ಧ ಭಾವನೆ. ಮನೆಯಲ್ಲಿ ಅನ್ನದೊಂದಿಗೆ ಮೈ ಹೊಕ್ಕಿದೆ. ಶಾಲೆ ಕಾಲೇಜುಗಳಲ್ಲಿ ಬಹು ಚೆನ್ನಾಗಿ ಅದರ ಪೋಷಣೆಯಾಗಿದೆ. ಸುತ್ತಮುತ್ತಲಂತೂ ಸರೇಸರಿ. ಬರೀ ಅದೇ ಅದು. ಆದರೂ ನಮ್ಮ ವಿದ್ಯಾರ್ಥಿಗಳು ಒಳ್ಳೆಯ ವಿಚಾರವಂತರಾಗಬೇಕು ಎಂಬುದು ನಮ್ಮ ಆಶಯ. ನಾವು ಬೇವನ್ನೇ ಬಿತ್ತುತ್ತೇವೆ, ಮಾವು ಬೆಳೆಯಲಿ ?

ಸಾಲದುದಕ್ಕೆ ಮುಂದು ಉರುಳುತ್ತಿರುವವರಿಗೂ ಹಿಂದುಳಿಯಬೇಕೆಂಬ ಹಂಬಲ.

ಒಂದೇ ಕುಟುಂಬ, ಒಂದೇ ವರ್ಗ, ಒಂದೇ ಸಮಾಜ, ಒಂದೇ ರಾಷ್ಟ್ರ ಮಾತ್ರ ಹೀಗಿಲ್ಲ. ಕಂಣು ಹೊರಳಿಸಿ ನೋಡಿದಷ್ಟು ದೂರ ಇದೇ. ಸ್ಮಶಾನ ಶಾಂತಿಗಾಗಿ ಮಹಾಯುದ್ಧವಾಗಬೇಕೆನ್ನುವ ನಾಯಕರುಗಳು ಇದ್ದಾರೆ. ಅಣು ಶಸ್ತ್ರ ಕಾಲು ತಿಕ್ಕುತ್ತ ಕಾದಿದೆ. ಚಿಕ್ಕ ಮೀನನ್ನು ದೊಡ್ಡ ಮೀನು ತಿನ್ನಲು ಹವಣಿಸುತ್ತಿದೆ. ಇದನ್ನು ತಿನ್ನಲು ತಿಮಿಂಗಲ ಕಾದಿದೆ. ಆದರೂ—

ಮಹಾ ಆಶಾವಾದಿಗಳೆಲ್ಲರೂ "ನ್ಯಾಷನಲ್ ಇಂಟಿಗ್ರೇಷನ್"—ರಾಷ್ಟ್ರೀಯ ಅದ್ವೈತ—ಆಗಲೇಬೇಕು ಎನ್ನುತ್ತಾರೆ. ಆಗುತ್ತದೆ ಎಂದೂ ಎನ್ನುತ್ತಾರೆ. ಎಲ್ಲರೂ ಅನ್ನುತ್ತಾರೆ. ನಾವೂ ಅನ್ನುತ್ತೇವೆ.

ಸಕ್ಕರೆ ಸಕ್ಕರೆ ಎಂದು ಸಾವಿರ ಸಲ ಜಪ ಮಾಡಿದರೆ ಯಾರ ಬಾಯಿ ಯಾದರೂ ಸಿಹಿಯಾದುದುಂಟೆ ? ಕೃತಿಗಿಳಿಯಬೇಕು, ಇಳಿದಿರುವವರೊಂದಿಗೆ ಸಹಕರಿಸಬೇಕು.

ರಾಷ್ಟ್ರೀಯ ಅದ್ವೈತ ಬೇಕಾಗಿದೆ ನಮಗೀಗ. ಅದ್ವೈತ ಎಂದರೇನು ? ದ್ವೈತ ಅಲ್ಲದುದು. ದ್ವೈತ ಅಂದರೆ ಎರಡು. ಎರಡು ಅಲ್ಲದುದು ಎಂದರೆ ಮೂರೂ, ನಾಲ್ಕೂ ನೂರೂ ಕೂಡಾ ಆಗುತ್ತದೆ. ಈ ಅದ್ವೈತ ಆಗಿಯೇ ಇದೆ ಈಗ. ಅಲ್ಲವೆ ?

ಈ ಅದ್ವೈತ ಹೋಗಲಿ—ಆ ಏಕತಾ ಬರಲಿ, ಬರಲಿ ಎಂದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲಿಂದಲೋ ಬಾರದು—ಪ್ರತಿಯೊಬ್ಬನ ಮನದ ಆಳದಿಂದ ಮೂಡಿ ಬರಲಿ. ದೀಪಾವಳಿಯ ಬೆಳಕಿನಿಂದ ಎಲ್ಲರ ಬಾಳೂ ಬೆಳಗಲಿ, ಬೆಳಕಾಗಲಿ.

ಸರ್ವೇಜನಾಃ ಸುಖಿನೋ ಭವಂತು ಎಂಬುದು ಕೇವಲ ಸರ್ವೇ ಖಾತೆಗೆ ಮಾತ್ರ ಅನ್ವಯಿಸುವ ಮಾತಲ್ಲ. ಯಾರಾರು ತಂತಮ್ಮ ಮನವನ್ನು 'ಸರ್ವೇ' ಮಾಡಿಕೊಳ್ಳುತ್ತಾರೋ ಅವರೆಲ್ಲರಿಗೂ ಸುಖ ದೊರೆಯಲಿ. ಆ ಸುಖಕ್ಕಾಗಿ ಆತ್ಮನಿರೀಕ್ಷೆ ಎಲ್ಲರಲ್ಲಿಯೂ ಆಗಲಿ.

ನನ್ನಲ್ಲಿ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನನ್ನ ಕೇಳಿದರೆ...

"ತಾವು ಹೇಳಿದಂತೇ"

ಎನ್ನದೆ ಯಾವ ಮಾತೂ ಆರಂಭವಾಗುವಂತೆಯೇ ಇಲ್ಲ ಕೆಲವರಿಗೆ. ಈ ಕಾಯಿಲೆ ತಮಿಳಿನಿಂದ ಬಂದಿರಬೇಕು ಪ್ರಾಯಶಃ.

"ನಿಂಗೆ ಸೊನ್ನೆ ಮಾದರಿ..."

"ನಾನು ಏನಯ್ಯಾ ಹೇಳಿದೆ ?"

ಎಂದು ಕೇಳಿದೆ ಒಬ್ಬನನ್ನು.

"ಅಲ್ಲ ಸೋಮಿ, ತಾವು ಹೇಳಲಿಲ್ಲ ಬಿಡಿ. ಆದರೆ ಒಂದು ವಿಚಾರ. ತಾವು ಹೇಳಿದಂತೇ...?"

ಇನ್ನೂ ಕೆಲವರದು ಬೇರೊಂದು ಪಲ್ಲವಿ.

"ಇದು ಈಗ ಯಾಕೆ ಹೇಳೋಕೇ ಬಂತಂತಂತಂತಂತಂದ್ರೇ..."

"ಹೇಳು ಹಾಗಾದರೆ, ಇದು ಯಾಕೆ ಹೇಳೋಕೆ ಬಂತು"

ಎಂದು ನೀವು ಝಾಡಿಸಿ ಕೇಳಿಬಿಡಿ. ನಿಮಗೆ ಉತ್ತರವೇ ಬಾರದು. ಕಾರಣವಿಷ್ಟೆ—ಹೇಳೋಕೆ ಬಂದುದು ಇದು ಅಲ್ಲ. ಇವನು !

ಇನ್ನೊಂದು ಬಗೆಯ ದಡ್ಡ ಜಾತಿಯ ಜನವೂ ಇದೆ. ನೀವು ಏನೇ ಹೇಳಿ, ಅದನ್ನೆಲ್ಲ ಆದ್ಯಂತವಾಗಿ ಒಂದು ಸಲ ಅಂದುಕೊಂಡೇ ಮುಂದಿನ ಮಾತು.

"ಗಂಟೆ ಹತ್ತಾಗುತ್ತಾ ಬಂತು. ಊಟಕ್ಕೆ ಏಳೋಣವೇನಯ್ಯ ?"

ಮಧ್ಯಾಹ್ನಕ್ಕೆ ಮನೆಗೆ ಬಂದಿದ್ದ ಅತಿಥಿಯೊಬ್ಬನನ್ನು ಕೇಳಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಗಂಟೆ ಹತ್ತಾಗುತ್ತಾ ಬಂತು. ಊಟಕ್ಕೆ ಏಳೋಣವೇನಯ್ಯ ಅಂದಿರಾ ರಾಯರೆ? ಆಗಲಿ."

"ನನ್ನ ಮನೆಯಾಕೆ ಊರಲ್ಲಿಲ್ಲ. ಆಕೆ ಬಂದ ಮೇಲೆ ನನಗೆ ಈ ಯಾವ ತೊಂದರೆಯೂ ಇಲ್ಲ."

—ಎಂದೊಬ್ಬರು ಹೇಳಿದರು. ಕೂಡಲೆ ಸುರು ಮಾಡಿದ ಈ ಪಲ್ಲವಿ ಪ್ರಿಯ.

"ನನ್ನ ಮನೆಯಾಕೆ ಊರಲಿಲ್ಲ. ಆಕೆ ಬಂದ ಮೇಲೆ ನನಗೆ ಈ ಯಾವ ತೊಂದರೆಯೂ ಇಲ್ಲ ಅಂತ ಅಂದಿರಾ? ಅಹುದು."

ಭಾಷಣಕಾರರಿಗಂತೂ ಗ್ಯಾರಂಟಿಯಾಗಿ ಇದ್ದೇ ಇರುತ್ತದೆ ಯಾವುದೋ ಒಂದು ಮಾಮೂಲು ಪಲ್ಲವಿ!

"ನಾನು ಈ ಮಾತನ್ನು ನಿಮ್ಮ ಮುಂದು ನಿಂತು ಹೇಳುತ್ತಿದ್ದೇನೆ."

ಅವರು ನಮ್ಮ ಮುಂದು ನಿಂತಿರುವುದು ಕಣ್ಣಿಗೆ ಕಾಣುತ್ತಿದೆ. ಹೇಳುತ್ತಿರುವುದು ಕಿವಿಗೆ ಕೇಳುತ್ತಲಿದೆ. ಆದರೂ ಅದನ್ನು ಅವರು ಹೇಳಬೇಕು ಮುಂದಿನ ಮಾತು ದೊರೆಯುವವರೆಗೂ.

ಇನ್ನೊಬ್ಬರು ಕೆಮ್ಮಿ, ಕೇಕರಿಸಿ ಹೀಗೆ ಆರಂಭಿಸಿದರು.

"ಈಗ...ನಾನು...ತಿಳಿಯಿತೇ?"

"ನಾನು ಇವತ್ತು...ತಿಳಿಯಿತೇ?"

"ಇಂದು ನಾವು...ತಿಳಿಯಿತೇ?"

ಈ "ತಿಳಿಯಿತೇ?" ಕಾಯಿಲೆಯ ಪ್ರಾಣಿ ಹಿಂದಿನ ಜನ್ಮದಲ್ಲಿ ಸ್ಕೂಲ್ ಮಾಸ್ಟರ್ ಏನಾದರೂ ಆಗಿದ್ದಿರಬಹುದೇ? ಅಭ್ಯಾಸ ಬಲ, ಪಾಪ!

ತಿಳಿಯಿತೇ ಎಂದು ಕೇಳುವುದು ಇದಿರಿನಲ್ಲಿ ಕುಳಿತಿರುವ ಹೇಮಾಹೇಮಿ ಸಭಿಕರನ್ನಲ್ಲ—ಅವರಿಗೆ ತಿಳಿದೇ ಇದೆ, ಇವರಿಗೆ ಹೇಳಲು ಬರುವುದಿಲ್ಲ ಎಂಬುದು. ಪ್ರಾಯಶಃ ಭಾಷಣಕಾರರ ಈ ಪ್ರಶ್ನೆ ಆತ್ಮಗತವಿರಬೇಕು.

ನಾನೂ ಒಂದು ಬಾರಿ ಪುರಾಣಕ್ಕೆ ಹೋಗಿದ್ದೆ, ಅದಾರೋ ದುಷ್ಟ ಜನಗಳ ಸಹವಾಸದಿಂದ. ಮುಗಿಯಿತು ಕೊನೆಗೂ. ಆಮೇಲೆ ನನಗೂ, ಆ ಬದಿ ಕುಳಿತಿದ್ದ ಇನ್ನೊಬ್ಬರಿಗೂ ದೊಡ್ಡ ವಾದವೇ ಸುರುವಾಗಿ ಬಿಟ್ಟಿತು. ಕ್ರಮೇಣ ಕಾವು ಏರಿ, ಕುಸ್ತಿ ಹಿಡಿಯಲಿಕ್ಕೇ ಸಿದ್ಧವಾದೆವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಪ! ಪುರಾಣದ ಆಚಾರ್ಯರೇ ಬಂದರು ನಮ್ಮ ಜಗಳವನ್ನು ಬಿಡಿಸಲು.

"ಏಕೆ ಕಣ್ರೀ ? ಏನಾಯಿತು ?"

ನಾನು ದೂರು ಕೊಟ್ಟೆ ಅವರಿಗೆ.

"ನೋಡಿ ಆಚಾರ್ಯರೆ! ನಾನು ಆರಂಭದಿಂದ ಕೇಳಿದ್ದೇನೆ, ಸರಿಯಾಗಿ ಎಣಿಸಿದ್ದೇನೆ. ಒಂದು ನೂರು ಹದಿನೇಳು ಬಂದುವು. ಒಂದು ನೂರ ಹದಿನಾರೇ ಬಂದುವು ಎಂದು ಇವನು ಹೇಳುತ್ತಾನೆ."

"ಇಲ್ಲ ಸ್ವಾಮಿ, ನಾನು ಸರಿಯಾಗಿ ಎಣಿಸಿದ್ದೇನೆ. ಹದಿನಾರೇ ಬಂದುವು"

ಎಂದು ಅವರು ವಾದಿಸಿದರು. ಆಚಾರ್ಯರು ಕಕ್ಕಾಬಿಕ್ಕಿಯಾದರು. ಸಂದರ್ಭವೇ ಅರ್ಥವಾಗಲಿಲ್ಲ ಅವರಿಗೆ.

"ಏನು ನೂರಾ ಹದಿನೇಳು, ಹದಿನಾರು ?"

ಎಂದು ಕೇಳಿದರು ಆಚಾರ್ಯರು.

ನಾನೇ ಅವರನ್ನು ಕೇಳಿದೆ :

"ಅಲ್ಲಾ ಆಚಾರ್ಯರೇ, ಪರಮಾತ್ಮನಾದಂಥಾ ಶ್ರೀಕೃಷ್ಣಪರಮಾತ್ಮ ಏನು ಮಾಡಿದನಪ್ಪಾ ಅಂದ್ರೆ ಎಂಬುದು ನೂರಾ ಹದಿನೇಳು ಸಲ ಅಲ್ಲವೇ ಪುರಾಣದಲ್ಲಿ ಬಂದದ್ದು !"

"ಏನೋ ಅಪ್ಪ, ನಾನು ಎಣಿಸಿಲ್ಲ. ಆ ಪರಮಾತ್ಮನೇ ಬಲ್ಲ"

ಎಂದು ಹೇಳಿ ಹೊರಟೇಬಿಟ್ಟರು ಆಚಾರ್ಯರು.

ಶ್ರೀ ಕೃಷ್ಣಪರಮಾತ್ಮ ಏನು ಮಾಡಿದ ಎಂಬುದನ್ನು ನಾನು ಕೇಳಲಿಲ್ಲ. ಅವನೂ ಕೇಳಲಿಲ್ಲ ಅನ್ನಿ. ಆದರೆ ಅವರು ಎಷ್ಟು ಸಲ ಆ ಮಾತು ಅಂದರು ಎಂಬುದೇ ಮುಖ್ಯ ಪ್ರಶ್ನೆ ನಮಗೆ ಅಲ್ಲವೇ ?

ನನ್ನ ಪರಿಚಿತರೊಬ್ಬರದು ಇನ್ನೊಂದು ಸ್ವಾರಸ್ಯ. ಅವರ ಕೈಯಲ್ಲಿ ಸಿಕ್ಕರಂತೂ ಪಾರಾಗಲು ಪೋಲೀಸ್ ಸಹಾಯವನ್ನೇ ಪಡೆಯಬೇಕು ನಾವು.

"ಇದು ಈಗ ಹೀಗೆ ಏಕೆ ಸಾರ್ ಅನ್ನು..."

ಎಂದು ಪ್ರಾರಂಭಿಸಿದರು ಮಾತನ್ನು.

"ಹೇಳಿ ಸ್ವಾಮಿ"

ಅಂದೆ ನಾನು. ಅವರು ಹಾಗೆಲ್ಲ ಹೇಳುತ್ತಾರೆಯೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಮೊದಲು ಅನ್ನು ನೀನು."

"ಏನನ್ನಲಿ ಸಾರ್ ?"

"ಇದು ಈಗ ಹೀಗೆ ಏಕೆ ಸಾರ್ ಅನ್ನಯ್ಯಾ"

ಎಂದೇ ಹಠ ಅವರದು. ವಯೋವೃದ್ಧರು ಬೇರೆ ಅವರು, ಆಂದ ರಾಯಿತು. ನನ್ನದೇನು ಗಂಟು ಹೋಗುತ್ತದೆ ಎಂದಂದೆ.

"ಹೀಗೆ ಏಕೆ ಸಾರ್."

"ಛೆಛೆ! ಪೂರ್ಣವಾಗಿ ಅನ್ನು ಮರಿ. ನಾನು ಹೇಳಿದಂತೆ. 'ಇದು... ಈಗ...ಹೀಗೆ...ಏಕೇ ಸಾರ್' ಎಂದು ನನ್ನನ್ನು ಕೇಳು ನೀನು."

ಮಂತ್ರವನ್ನುಚ್ಚರಿಸಿದಂತೆ ಅಂದೆ.

"ಇದು...ಈಗ...ಹೀಗೆ...ಏಕೇ ಸಾರ್...?"

ಹಸನ್ಮುಖಿಯಾದರು ಕೂಡಲೆ.

"ಹಾಂ, ಹಾಗೆ ಕೇಳಪ್ಪ. ಈಗ ಹೇಳುತ್ತೇನೆ."

ಅದೇನು ಹೇಳಿದರೋ ಅವರಿಗೇ ಪ್ರೀತಿ. ನನ್ನಿಂದ ಮಾತ್ರ ಆ ಶ್ರಾದ್ಧ ಮಂತ್ರವನ್ನು ಅರ್ಧ ಗಂಟೆಯಲ್ಲಿ ಹದಿನೆಂಟು ಬಾರಿ ಅನಿಸಿದರು. ಆದರೂ ಕಡೆಗೂ ಕೈಬಿಟ್ಟರಲ್ಲ ಅದೇ ನನ್ನ ಪುಣ್ಯ ?"

ಮಾತಿಗೊಮ್ಮೆ

"ನನ್ನ ಕೇಳಿದರೇ"

ಎಂಬುದು ನಮ್ಮ ತಿಂಮನಿಗೆ ಗಂಟು ಬಿದ್ದಿದ್ದ ರೋಗ.

"ಯಾವನಯ್ಯಾ ನಿನ್ನನ್ನು ಕೇಳಿದ ?"

ಎಂದು ಗದರಿಕೊಂಡೆ. ಒಂದು ಸಲ ಕೊಂಚ ಪೆಚ್ಚಾದ ಅವನು. ಪರವಾ ಇಲ್ಲ, ತಿಂಮನ ರೋಗವು ಗುಣವಾಯಿತು ಎಂದುಕೊಂಡೆ. ಕೂಡಲೆ ಸುರುಮಾಡಿದ.

"ಅದು ಸರೆ ಸಾರ್. ಆದರೆ ನೋಡಿ, ನನ್ನ ಕೇಳಿದರೇ..."

ಏನೋ ಹುಚ್ಚು ಅವನದು ಎಂದು ಸುಮ್ಮನಾದರೆ ಅದೇ ಹುಚ್ಚು ಹೆಚ್ಚು ಆಗುತ್ತಾ ಹೊರಟಿತಂ. ಅವನನ್ನು ರಿಪೇರಿ ಮಾಡಲೇಬೇಕು ಎಂದು ನೇರವಾಗಿ ಹುಚ್ಚಾಸ್ಪತ್ರೆಗೆ ಒಯಿದೆ.

"ಸೀಟು ಇಲ್ಲ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಸೀಟು ಇಲ್ಲ ? ಏಕೆ ಡಾಕ್ಟರೇ ? ಯಾರಾದರೂ ಎಮ್ಮೆಲೆಗಳ ರೆಕಮೆಂಡೇಷನ್ ಬೇಕೆ ? ನಿಮ್ಮ ಆಸ್ಪತ್ರೆಗೆ ಡೊನೇಷನ್ ಕೊಡಬೇಕೇನು ? ಕಥವಾ ಕಮ್ಯುನಲ್ ಜಿ. ಓ. ಮೇರೆಗೆ ಇವನಿಗೆ ಈಗ ಚಾನ್ಸ್ ಇಲ್ಲವೇ ?"

"ಈ 'ಕ್ಯಾಂಡಿಡೇಟ್'ಗೆ 'ಕ್ವಾಲಿಫಿಕೇಷನ್' ಇಲ್ಲ ಕಣ್ರೀ."

"ಕ್ವಾಲಿಫಿಕೇಷನ್ ಇಲ್ಲ ? ಹುಚ್ಚಾಸ್ಪತ್ರೆಯಲ್ಲಿ ಸೇರಲಿಕ್ಕೆ ಅದಾವ ಕ್ವಾಲಿಫಿಕೇಷನ್ ಸ್ವಾಮಿ ಬೇಕು ? ಇವನಿಗೆ ಹುಚ್ಚು ಇಲ್ಲವೇ ?"

"ಹುಚ್ಚು ಇದೆ ಕಾಣ್ರೀ, ಆದರೆ..."

"ಆಯಿತು. ಹುಚ್ಚಿನಕಿಂತಲೂ ಹೆಚ್ಚಿನ 'ಕ್ವಾಲಿಫಿಕೇಷನ್' ಯಾವುದು ಬೇಕು, ಹುಚ್ಚಾಸ್ಪತ್ರೆಯಲ್ಲಿ ಸೇರಿಸಿಕೊಳ್ಳಲು ?"

ನಾನೂ ಕೊಂಚ ದನಿ ಎತ್ತರಿಸಿಯೇ ವಾದಿಸಿದೆ. 'ರ್‍ಯಾಂಕ್'ನಲ್ಲಿ ಬಂದಿರುವ 'ಕ್ಯಾಂಡಿಡೇಟು' ನಾನು ತಂದಿರುವ ಅಸಾಮಿ. ಅವನಿಗೇ ಸೀಟು ಇಲ್ಲವೆಂದರೆ ?

"ರಿಟ್ ಫೈಲ್ ಮಾಡಿಬಿಡುತ್ತೇನೆ, ಅಷ್ಟೆ."

ಇದಕ್ಕೂ ಅಂಜಲಿಲ್ಲ ಡಾಕ್ಟರು. ಆಮೇಲೆ ಇನ್ನೊಬ್ಬ ಡಾಕ್ಟರು ವಿವರಿಸಿದರು.

"ಎಲ್ಲಾ ಹುಚ್ಚರನ್ನೂ ಹುಚ್ಚಾಸ್ಪತ್ರೆಗಳಲ್ಲಿ ಸೇರಿಸಿಕೊಳ್ಳುವುದಿಲ್ಲ ಸ್ವಾಮಿ. ಕೇವಲ ಗುಣವಾಗಬಹುದಾದ ಹುಚ್ಚರಿಗಷ್ಟೆ ಪ್ರವೇಶ ಇಲ್ಲಿ."

ಗಹಗಹಿಸಿ ನಕ್ಕೇ ಬಿಟ್ಟ ತಿಂಮ. ನನ್ನನ್ನು ಕೈ ಬಿಟ್ಟ, ಆ ಡಾಕ್ಟರಿಗೆ ಗಂಟುಬಿದ್ದ ಆಮೇಲೆ.

"ಡಾಕ್ಟರೇ ! ನನ್ನ ಕೇಳಿದರೇ..."

ಆ ಡಾಕ್ಟರರಿಗೆ ಅಲ್ಲದೆ ಬೇರಾರಿಗೆ ಇರಬೇಕು ಅಷ್ಟು ಸಮಾಧಾನ, ಸಾವಕಾಶವಾಗಿ ನಿಂತು ಅವನನ್ನು ಕೇಳಿದರು.

"ಹೂಂ, ಏನು ? ಹೇಳಪ್ಪಾ. ಏನು ನೀನು ಹೇಳುವುದು ?

"ಏನೂ ಇಲ್ಲ ಸೋಮಿ ನಾನು ಹೇಳುವುದು ಇಷ್ಟೆ. ಯಾಕೆಂದರೆ ನೋಡಿ, ನನ್ನ ಕೇಳಿದರೇ..."

"ಹೇಳು ಮತ್ತೆ, ನನಗೆ ಕೆಲಸವಿದೆ. ಹೋಗಬೇಕು. ಬೇಗಹೇಳು." ಕೊಂಚ ಅವಸರ ಮಾಡಿದರು ಡಾಕ್ಟರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಆಗಲಿ ಸಾರ್, ಹೇಳುತ್ತೇನೆ. ಹೇಳಲಿಕ್ಕೇ ಬಂದಿದ್ದೇನೆ ನಾನು—ತಾವು ಕೇಳಲಿಕ್ಕೇ ಇದ್ದೀರಿ. ನನ್ನ ಕೇಳಿದರೇ..."

"ಬೇಗ ಹೇಳಿಬಿಡು ಮತ್ತೆ"

ಸಲುಗೆಯಿಂದ ಬೆನ್ನಿನ ಮೇಲೆ ಕೈಯಿಟ್ಟರು ಡಾಕ್ಟರು.

ಸುರುಮಾಡಿದ ಉಪದೇಶ ಪ್ರಿಯನಾದ ತಿಂಮ.

"ನೋಡಿ ಡಾಕ್ಟರೇ! ನನ್ನ ಕೇಳಿದರೆ...ಈಗ...ನಾನು ನಿಮಗೆ ಹೇಳುವುದೊಂದು. ನೀವು ಏನು ಮಾಡಬೇಕೆಂದರೆ...ನನ್ನ ಕೇಳಿದರೇ...ಈಗ ಏನಾಗಿದೆ ಅನ್ನಿ...ಒಂದಾಗಿದೆ ಸಮಾಚಾರ...ನನ್ನ ಕೇಳಿದರೇ..."

ಅಷ್ಟರಲ್ಲಿಯೇ ಅದಾರೋ ಬಂದು ಕರೆದರು ಆ ಡಾಕ್ಟರರನ್ನು.

"ನಾನು ಬರುತ್ತೇನೆ ತಿಂಮ, ಕರೆಯುತ್ತಾರೆ ನನ್ನನ್ನಲ್ಲಿ. ನಿನ್ನ 'ನನ್ನ ಕೇಳಿದರೆ' ಇವತ್ತೇನು ಮುಗಿಯುವಂತಿಲ್ಲವಲ್ಲ ಹೇಗೂ?"

"ಛೆ ಛೆ! ಹೇಳಿ ಮುಗಿಸಿಬಿಡುತ್ತೇನೆ ಸ್ವಾಮಿ ಒಂದೇ ಒಂದು ನಿಮಿಷದಲ್ಲಿ. ಹಾಗೆಲ್ಲ ನಾನು ನಿಮ್ಮಂತಹವರ ಸಮಯವನ್ನು ವೃಥಾ ಹಾಳು ಮಾಡುವುದಿಲ್ಲ. ಏಕೆಂದರೆ ನೋಡೀ..."

ಡಾಕ್ಟರರಿಗೆ ಅವಸರ, ಪಾಪ!

"ಹೇಳಿಬಿಡಯ್ಯ ಪುಣ್ಯಾತ್ಮ—ಅದೇನು ನೀನನ್ನುವುದು, ಬೇಗ ಹೇಳು."

"ನಾನು ಹೇಳುವುದೊಂದೇ ಮಾತು. ನೋಡಿ ಡಾಕ್ಟರೇ, ನೀವು ಅವಶ್ಯವಾಗಿ ಕೇಳಲೇ ಬೇಕು ನನ್ನ ಮಾತನ್ನು. ಕೇಳುವುದೆಂದರೆ ಬರೀ ಕಿವಿಯಿಂದಷ್ಟೇ ಅಲ್ಲ..."

"ಹೇಳು ತಿಂಮ ಮೊದಲು, ಕಿವಿಯಿಂದಲೂ ಕೇಳುತ್ತೇನೆ, ಕೈಯಿಂದಲೂ ಕೇಳುತ್ತೇನೆ, ಆಯಿತೇ?"

"ಹಾಗಲ್ಲ ಡಾಕ್ಟರೇ, ನನ್ನ ಅರ್ಥ-ಅಲ್ಲ—ನನ್ನ ಮಾತಿನ ಅರ್ಥ. ನನ್ನ ಕೇಳಿದರೆ—ನನ್ನ ಮಾತನ್ನು ಕೇಳಬೇಕು ಅಂದರೆ, ಕಾರ್ಯತಃ ಅದನ್ನು ಮಾಡಿ ತೋರಿಸಬೇಕು ನೀವು"

"ಆಗಲಿ ಹೇಳು ಮತ್ತೆ"

"ಮಾಡುತ್ತೀರಾ?"

ಹತ್ತುತ್ತು ಬಾರಿ ಕೇಳಿ ಗ್ಯಾರಂಟಿ ಮಾಡಿಕೊಂಡ ತಿಂಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



"ಈ ಹುಚ್ಚಾಸ್ಪತ್ರೆಯಲ್ಲಿರುವವರನ್ನೆಲ್ಲ ಬಿಟ್ಟುಬಿಡಿ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ನಿಜವಾಗಿಯೂ ಮಾಡುತ್ತೇನೆ. ಹೇಳಯ್ಯಾ ಅದೇನದು ?"

ತಿಂಮ ಕಡೆಗೂ ದಾರಿಗೆ ಬಂದ, ಅದೇ ಸಂತೋಷ ನಮ್ಮೆಲ್ಲರಿಗೂ.

"ನೀವು ಮೊಟ್ಟಮೊದಲು ಒಂದು ಕೆಲಸ ಮಾಡಿಬಿಡಿ, ತಪ್ಪದೆ ನನ್ನ ಕೇಳಿದರೇ..."

"ಕೇಳಿದ್ದೇನಲ್ಲ ನಿನ್ನನ್ನು, ಹೇಳು ಈಗ"

"ಈ ಹುಚ್ಚಾಸ್ಪತ್ರೆಯಲ್ಲಿರುವ ಎಲ್ಲರನ್ನೂ ಮೊಟ್ಟಮೊಟ್ಟಲು ಹೊರಗೆ ಬಿಟ್ಟುಬಿಡಿ"

ಅವಾಕ್ಕಾದರು ಡಾಕ್ಟರು. ಬೆಚ್ಚಿಬಿದ್ದು ಕೇಳಿದರು.

"ಬಿಟ್ಟು ?"

"ಬಿಟ್ಟುಬಿಡಿ ಸಾರ್, ಮೊದಲು"

"ಊರಲ್ಲಿಯ ಜನರ ಗತಿ ? ಅವರೇನು ಬದುಕಬೇಕೋ..."

"ನನ್ನ ಕೇಳಿದರೆ ಆ ಜನವನ್ನೆಲ್ಲಾ ತಂದು ಒಳಗೆ ಹಾಕಿ"

ಗೆದ್ದವರಂತೆ ಮಾತನಾಡಿದರು ಡಾಕ್ಟರು.

"ಈಗ ಖಾತ್ರಿಯಾಯಿತು ನೋಡು ತಿಂಮಾ, ನೀನು ಹುಚ್ಚನೆಂಬುದು"

"ಹೌದಾ ! ಈಗ ನೀವು ಸಿಕ್ಕಿಬಿದ್ದಿರಿ ಡಾಕ್ಟರೇ. ನೀವು ಒಪ್ಪಿಕೊಂಡಿರಿ ತಾನೆ, ಈಗ, ನಾನು ಹುಚ್ಚನೆಂದು ? ನನ್ನ ಕೇಳಿದರೆ..."

"ನೀನು ಹುಚ್ಚ ಎಂಬುದನ್ನು ಆಗಲೇ ಒಪ್ಪಿಕೊಂಡೆನಲ್ಲ ನಾನು ? ಈಗ ನೀನೂ ಒಪ್ಪಿಕೊಂಡಿ"

"ರೈಟ್ ಡಾಕ್ಟರೇ, ರೈಟ್ ? ನಾನು ಹುಚ್ಚ ಎಂಬುದನ್ನು ನಾನೂ ಒಪ್ಪಿಕೊಂಡಿದ್ದೇನೆ, ನೀವೂ ಒಪ್ಪಿದಿರಿ. ಆದರೆ ಈ ಆಸ್ಪತ್ರೆಯಲ್ಲಿ ಮಾತ್ರ ನನ್ನನ್ನು ನೀವು ಸೇರಿಸಿಕೊಳ್ಳುವುದಿಲ್ಲ, ಅಲ್ಲವೇನು ಸ್ವಾಮಿ ?"

ಡಾಕ್ಟರು ಮರುಸವಾಲು ಮಾಡಿದರು ಧೈರ್ಯವಾಗಿ.

"ಅದು ಹೇಗೆ ಆಗುತ್ತೆ ? ಗುಣವಾಗುವ ಹುಚ್ಚು ಅಲ್ಲವಲ್ಲ ಇದು ?"

"ಒಳ್ಳೆಯದು ಸ್ವಾಮಿ, ಇಂತಹ ಗುಣವಾಗದ ಹುಚ್ಚು ಇರುವವನು ನಾನೊಬ್ಬನೇನಾ ಭೂಲೋಕದಲ್ಲಿ ?"

"ಛೆ ಛೆ ! ಉಂಟೆ ? ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಇದ್ದೇ ಇರುತ್ತದೆ, ಅಂತಹವರೇ ಹೆಚ್ಚು"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಂಮ ಇದಕ್ಕಾಗಿಯೇ ಕಾದಿದ್ದನೇನೋ ಎಂಬಂತೆ ಇದನ್ನೇ ಹಿಡಿದು ಕೊಂಡ ; ಮಾತನ್ನು ಮುಕ್ತಾಯಕ್ಕೆ ತಂದು ನಿಲ್ಲಿಸಿದ,

"ಅದಕ್ಕೇ ಸ್ವಾಮಿ ನಾನು ಹೇಳಿದ್ದು. ಗುಣವಾಗಲಿ ಬಿಡಲಿ, ಆ ಮಾತು ಬೇರೆ. ಅಂತೂ ಹುಚ್ಚುರಲ್ಲದವರಕಿಂತಲೂ ಹುಚ್ಚರೇ ಹೆಚ್ಚು ಇದ್ದಾರೆ ಎಂದು ನೀವೇ ಒಪ್ಪಿಕೊಂಡಂತಾಯಿತು ಅನ್ನಿ. ನನ್ನ ಕೇಳಿದರೇ..."

"ಬೇಡ ಪುಣ್ಯಾತ್ಮ ನಿನ್ನ ಕೇಳುವುದೇ ಬೇಡ"

ಎಂದು ದುಡು ದುಡು ನಡದೇ ಬಿಟ್ಟರು. ಆ ಡಾಕ್ಟರು ಬಂದ ಕೆಲಸ ಬಾಗಿಲಲ್ಲಿಯೇ ಆಯಿತಲ್ಲ ? ಬಂದ ಹಾದಿಗೆ ಸುಂಕವಿಲ್ಲ.

"ಮನೆಗೆ ಹೋಗೋಣವೇ, ತಿಂಮ ?"

ಎಂದು ಕೇಳಿದೆ. ಸುರುಮಾಡಿದ ತಿಂಮ ಯಥಾಪ್ರಕಾರ.

"ಮನೆಗೇ ಹೋಗೋಣ. ಆದರೆ ನನ್ನ ಕೇಳಿದರೇ..."

"ನಾನು ಕೇಳಲಿಲ್ಲವಲ್ಲ ನಿನ್ನ ?"

"ನೀವು ಕೇಳಲಿಲ್ಲ. ಸರೆ, ಆದರೆ ಹೇಳುವುದು ನನ್ನ ಧರ್ಮ ನೋಡಿ."

"ಹೇಳುವದು ನಿನ್ನ ಧರ್ಮ ಅಹುದೋ ಅಲ್ಲವೋ, ಕೇಳುವುದಂತೂ ನನ್ನ ಕರ್ಮ ಆಗಿದೆ. ಹೂಂ, ಹೇಳಯ್ಯ ಅದೇನದು ನಿನ್ನ ಉಪದೇಶ"

"ಉಪದೇಶ ಅಲ್ಲ ಕಣ್ರೀ ಇದು. ನನ್ನ ಕೇಳಿದರೆ..."

ಕೊಂಚ ಅವಸರ ಮಾಡಿದೆ ನಾನು.

"ಮನೆಗೆ ಹೋಗೋಣ ನಡೆ ಮೊದಲು"

"ಅದೇ, ಅದೇ ವಿಷಯವನ್ನು ಹೇಳಲಿಕ್ಕೆ ಬಂದಿದ್ದೆ ನಾನು. ನೀವು ಮನೆ ಎಂದಿರಲ್ಲ ? ನೆನಪಾಯಿತು. ನನ್ನ ಕೇಳಿದರೇ...ಈ ಇದು ಇದೇ ನೋಡಿ ಮನೆ, ಈ ಮನೆ ಸುಮ್ಮನೆ...ಏಕೆಂದರೆ ಈ ಮನೆ, ಮನೆಯಾಕೆ ಎನ್ನುವ ಅಭಿಮಾನವೇನೋ ಇದೆಯಲ್ಲ ? ಇದೂ..."

"ಸುರುವಾಯಿತೇನಯ್ಯ ನಿನ್ನ ಉಪದೇಶ ? ಇನ್ನು ಸಾಕು, ಹೋಗೋಣ ನಡೆ"

ಮೆಲ್ಲನೆ ಅಲ್ಲಿಂದ ಹೊರಡಿಸಿದೆ ತಿಂಮನನ್ನು. ಇಬ್ಬರೂ ರಸ್ತೆಗೆ ಬಂದೆವು. ನಡುದಾರಿಯಲ್ಲಿ ಅದಾರೋ ತಿಂಮನನ್ನು ಮಾತನಾಡಿಸಬೇಕೆ, ನನ್ನ ದುರ್ದೈವಕ್ಕೆ ಸರಿಯಾಗಿ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಏನಪ್ಪಾ ತಿಂಮಾ ? ಎಲ್ಲಿಗೆ ಹೊರಟಿತ್ತು ಸವಾರಿ ? ರೈಲ್ವೆ ಸ್ಟೇಷನ್‌ಗೇನು ?"

ಮೊದಲೇ ಕೊಳೆ. ಮೇಲೆ ಮಳೆಯಾದರೆ ಕೇಳಬೇಕೆ ? ಕುರುವಿನ ಮೇಲೆ ಬೊಕ್ಕೆ ಎದ್ದಂತಾಯಿತು. ತಿಂಮನನ್ನು ಕೇಳುವುದುಂಟೆ ಎಲ್ಲಿಯಾದರೂ ?

"ನನ್ನ ಕೇಳಿದರೇ"

ಪೂರ್ವ ಪೀಠಿಕೆಯಿಂದ ಆರಂಭಿಸಿಯೇಬಿಟ್ಟ ಮಹಾರಾಯ.

"ತಾವು ರೈಲ್ವೆ ಸ್ಟೇಷನ್ ಎಂದಿರಲ್ಲವೆ ? ಈಗ ನನ್ನ ಕೇಳಿದರೆ...ಈಗ ಏನಾಗಿದೆ ಎಂದರೆ...ನೋಡಿ. ನನ್ನ ಕೇಳಿದರೇ...ಎಲ್ಲ ರೈಲುಗಳೂ ಬಂದು ರೈಲ್ವೇ ಸ್ಟೇಷನ್ನಿನಲ್ಲಿಯೇ ನಿಲ್ಲುತ್ತವೆ, ಅದೇಕೋ ಇದರಿಂದ...ನನ್ನ ಕೇಳಿದರೇ ...ಊರುಗಳಿಂದ ಬರುವವರಿಗೆ ಮತ್ತು ಇಲ್ಲಿಂದ ಹೋಗುವವರಿಗೆ ವಿಪರೀತ ತೊಂದರೆಯಾಗುತ್ತದೆ ಒಂದೊಂದು ಸಲ. ಆದಕಾರಣ ರೈಲಿನವರು...ನನ್ನ ಕೇಳಿದರೆ...ಏನು ಮಾಡಬೇಕೆಂದರೆ... ರೈಲು ನಿಲ್ಲುವ ಸ್ಥಳಕ್ಕೂ, ರೈಲ್ವೇ ಸ್ಟೇಷನ್ನಿಗೂ ಸಂಬಂಧವೇ ಇಲ್ಲದಂತೆ ಮಾಡಬೇಕು. ನನ್ನ ಕೇಳಿದರೆ ?"

ಆ ಪ್ರಾಣಿ ಆಗ ಬಾಯಿ ತೆರೆಯಿತು, ತಿಂಮನ ಬಾಯಿ ಮುಚ್ಚಿಸಲು.

"ಏನಯ್ಯಾ ತಿಂಮಾ, ನೀನು ಹೇಳುವುದು ? ರೈಲು ನಿಲ್ಲುವ ಸ್ಥಳಕ್ಕೇ ಸ್ಟೇಷನ್ ಅನ್ನುವುದು"

ಮಧ್ಯದಲ್ಲಿಯೇ ಮಾತು ತೂರಿಸಿದ ತಿಂಮ. ತನ್ನ ಕಿವಿಗೆ ತನ್ನ ಧ್ವನಿಯೊಂದೇ ಹಿತ, ಉಪದೇಶ ಪ್ರಿಯನಿಗೆ. ಬೇರಿನ್ನೊಬ್ಬರ ಮಾತು ಕೇಳುವ ಅಭ್ಯಾಸವೇ ಇಲ್ಲವಲ್ಲ ಇವನಿಗೆ ?

"ನನ್ನ ಕೇಳಿದರೇ, ರೈಲಿನವರು ಏನು ಮಾಡಬೇಕೆಂದರೆ ?...ನನ್ನ ಕೇಳಿದರೆ..."

ಅವರು ಸ್ಪಷ್ಟವಾಗಿಯೆ ಹೇಳಿಬಿಟ್ಟರು.

"ನೋಡಯ್ಯಾ ತಿಂಮ. ಮೊದಲನೆಯದು ನಿನ್ನನ್ನು ಯಾರೂ ಕೇಳಲಿಲ್ಲ. ಎರಡನೆಯದಾಗಿ ನನಗೂ ರೈಲಿಗೂ ಯಾವ ಸಂಬಂಧವೂ ಕೂಡ ಇಲ್ಲ. ರೈಲಿನವರಿಗೆ ಕೊಡಬೇಕಾದ ಸಲಹೆಗಳನ್ನು ನನಗೇಕಯ್ಯಾ ಹೇಳುತ್ತಿ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡದೇಬಿಟ್ಟ ಆ ಜಾಣ ; ಮತ್ತೆ ನಾನೇ ನಾನು, ತಿಂಮನೇ ತಿಂಮ ಬೀದಿಯುದ್ದಕ್ಕೂ !

ಮತ್ತಾರೊಡನೆ ಮಾತಿಗೆ ನಿಲ್ಲುತ್ತಾನೋ ತಿಂಮ, ಎಂಬ ಭಯ ನನಗೆ. ಅದಕ್ಕಾಗಿಯೇ ಮೊದಲೇ ಹೇಳಿದೆ ಅವನಿಗೆ.

"ಇಲ್ಲಿ ಕೇಳಯ್ಯ ತಿಂಮ ! ಇನ್ನು ನಿನ್ನ ಈ ನನ್ನ ಕೇಳಿದರೇ ಸಾಕು ಸದ್ಯಕ್ಕೆ. ಯಾರಿಗೂ ಬೇಕಿಲ್ಲ ನಿನ್ನ ಉಪದೇಶ..."

"ಅಹುದು ಸಾರ್, ರೈಟ್ ! ಬಹಳ ಕರೆಕ್ಟಾಗಿ ಹೇಳಿದಿರಿ ನೀವು. ಯಾಕೆಂದರೆ ನೋಡೀ, ನನ್ನ ಕೇಳಿದರೆ... ಈ ಉಪದೇಶ ಅನ್ನುವುದಿದೆ ನೋಡಿ, ಇದರ ಸ್ವಾರಸ್ಯ ಏನು ಗೊತ್ತೆ ನಿಮಗೆ ? ನನ್ನದೊಂದು ತತ್ವ—ಮಾಡು, ಇಲ್ಲವೆ ಉಪದೇಶ ಮಾಡು. ಏನೂ ಮಾಡಲಾರದವನು, ಉಪದೇಶ ಮಾಡುತ್ತಾನೆ. ಅದು ಬಹು ಸುಲಭ ನೋಡಿ. ಅಲ್ಲದೆ ಇನ್ನೊಂದು ಸಮಾಚಾರ ಸಾರ್. ನನ್ನ ಕೇಳಿದರೇ..."

ಗಂಗೆಯಂತೆಯೋ ಗತಾರದಂತೆಯೋ ಅಂತೂ ಹರಿಯಿತು ಪ್ರವಾಹ—ತಿಂಮವಾಣಿಯಾಗಿ.

"ಧಾರಾಳ ಅನ್ನಬೇಕು ನಮ್ಮ ಜನರದು ನೋಡಿ. ಅದೆಷ್ಟು ಧಾರಾಳವೋ, ಇತರರಿಗೆ ಉಪದೇಶ ಮಾಡುವುದರಲ್ಲಿ ? ಅವರಿವರಿಗೆ ಟನ್‌ಗಟ್ಟಲೆ ಉಪದೇಶ ಕೊಡುವ ಬದಲು, ಗುಂಜಿಯಷ್ಟಾದರೂ ತಾವೇ ಅದನ್ನು ತೆಗೆದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ?"

ಪರವಾ ಇಲ್ಲ. ತಿಂಮನಿಗೂ ತಿಳಿದಿದೆ ಈ ಮಾತು ಎಂದು ಸಂತೋಷ ವಾಯಿತು.

"ಇದನ್ನು ತಿಳಿದೂ ನೀನೇ ಅದೇ ತಪ್ಪನ್ನು ಮಾಡುತ್ತೀಯಲ್ಲವೋ ತಿಂಮ ?"

ಈ ಪ್ರಶ್ನೆಗೆ ಏನು ಹೇಳಬೇಕು ತಿಂಮ ? ಗಹಗಹಿಸಿ ನಕ್ಕೇ ಬಿಡುವುದೇ ?

"ಅದೇಕಯ್ಯ, ನಗೆ ಬಂತು ನಿನಗೆ ?"

ಕೊಂಚ ಹುಬ್ಬೇರಿಸಿ ಕೇಳಿದೆ. ನಗೆಯಲ್ಲಿಯೇ ಹೇಳಿದ ಆ ಹುಚ್ಚ:

"ಎಂತಹ ಹುಚ್ಚು ಸ್ವಾಮಿ ನಿಮ್ಮದು !"

"ಏನೋ, ತಿಂಮಾ, ನಾನು ಹುಚ್ಚನೇ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ನೀವು ಹುಚ್ಚರು ಎನ್ನಲಿಲ್ಲ ಸ್ವಾಮಿ ನಾನು. ಹುಚ್ಚು ನಿಮ್ಮದು ಎಂದಂಪೆ ಅಷ್ಟೆ. ಏಕೆಂದರೆ ನೋಡೀ ನನ್ನ ಕೇಳಿದರೆ..."

"ಇರಲಿ ಹೇಳಯ್ಯ"

ಗದರಿಕೊಂಡೆ.

"ಕೇಳಿದರೂ ಹೇಳುತ್ತಿ, ಕೇಳದಿದ್ದರೂ ಹೇಳುತ್ತಿ. ಅದೇನು ಹೇಳು. ನೀನನ್ನು ವುದೇನು ಈಗ ?"

"ಏನೂ ಇಲ್ಲ ನನ್ನೊಡೆಯಾ. ತಿಳಿದೂ ತಿಳಿದೂ ತಪ್ಪು ಮಾಡುತ್ತೀಯಲ್ಲ ಎಂದಿರಲ್ಲ ? ಅದಕ್ಕೇ ನಗೆ ಬಂದಿತು, ನಕ್ಕೆ ಅಷ್ಟೆ. ಅಲ್ಲ ಸ್ವಾಮೀ ! ಯಜಮಾನರೇ ! ತಿಳಿದವನಲ್ಲದೆ ತಿಳಿಯದವನು ತಪ್ಪುಮಾಡುತ್ತಾನೆಯೆ ? ತಿಳಿಯದವನು ಮಾಡಿದರೆ ಅದು ತಪ್ಪು ಹೇಗೆ ಆಯಿತು ? ತಿಳಿದವನು ತಪ್ಪು ಮಾಡುತ್ತಾನೆ, ತಿಳಿಯದವನು ಅದನ್ನು ತಿದ್ದುತ್ತಾನೆ. ನನ್ನ ಕೇಳಿದರೆ... ಲೋಕದ ರೀತಿಯೆ ಹೀಗೆ."

ಸತ್ತವರೆಲ್ಲರೂ ಮತ್ತೆ ಹುಟ್ಟುತ್ತಾರೋ ಇಲ್ಲವೋ ಅದಂತೂ ನಾನು ಕಾಣದ ವಿಷಯ. ಹುಟ್ಟಿದವರೆಲ್ಲರೂ ಸಾಯುತ್ತಾರೋ ? ಅದೂ ಖಾತ್ರಿಯಾಗಿ ಗೊತ್ತಿಲ್ಲ. ಎಲ್ಲರೂ ಸಾಯುತ್ತಾರೋ ? ಕೆಲವರು ಮಾತ್ರವೇ ಸಾಯುತ್ತಾರೋ ಯಾರಿಗೆ ಗೊತ್ತು ? ಅಂತೂ ನಮ್ಮ ತಿಂಮ ಸತ್ತ ಒಂದು ಸಲ. ಒಂದೇ ಸಲ ಸತ್ತ. ದಿನವೂ ಸಾಯಲು ಅವನೇನು ಅಂತಹ ಹೇಡಿಯೇ ! ಸಿದ್ಧವಾಗಿ ಬಂದೇ ಬಿಟ್ಟರು ಯಮನ—ಅಲ್ಲ ಯಮಧರ್ಮನ ಅಸಿಸ್ಟೆಂಟ್‌ಗಳು ತಿಂಮನ ಬಳಿ.

"ಏಳೋ ತಿಂಮಾ, ಹೋಗೋಣ"

ಎಂದು ಎಬ್ಬಿಸಿದರು ಅವರು, ಸತ್ತುಬಿದ್ದಿದ್ದ ತಿಂಮನನ್ನು.

"ಬಾರಯ್ಯ, ನಿನ್ನನ್ನು ಯಾರು ಕೇಳಿದರು ? ನಿನ್ನನ್ನು ಕೇಳಿ ಹುಟ್ಟಿಸಲಿಲ್ಲ ಆ ದೇವರು, ನಿನ್ನನ್ನು ಕೇಳಿ ಒಯ್ಯುವುದೂ ಇಲ್ಲ. ಮಧ್ಯೆ ಅದೆಲ್ಲಿಯೋ ಬಂತು ನಿನ್ನ 'ಈ' ನನ್ನ ಕೇಳಿದರೆ."

ನಡದೇಬಿಟ್ಟರು ತಿಂಮನೊಂದಿಗೆ.

ಉಪದೇಶ ಪ್ರಿಯನಾದ ತಿಂಮನೇನೋ ಸತ್ತ. ಆದರೆ ಉಪದೇಶ ಕೊಡುವ ಚಟ ಮಾತ್ರ ಚಿರಂಜೀವಿಯಾಗಿ ಉಳಿದೇ ಇದ್ದೆ ಇನ್ನೂ ಎಲ್ಲರಲ್ಲಿಯೂ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಗಟು

ಪಾತ್ರ ಪರಿಚಯ

ರಾಮಣ್ಣ — ಚಂಚಲೆಯ ಗಂಡ
ಕೃಷ್ಣಮೂರ್ತಿ — ಸಾವಿತ್ರಿಯ ಗಂಡ
ಚಂಚಲ — ರಾಮಣ್ಣನ ಹೆಂಡತಿ
ಸಾವಿತ್ರಿ — ಕೃಷ್ಣಮೂರ್ತಿಯ ಹೆಂಡತಿ
ಹನುಮ — ರಾಮಣ್ಣನ ಮುದಿ ಸೇವಕ

೧

ಚಂಚಲ

(ಕುಳಿತಲ್ಲಿಯೇ ಆಕಳಿಸುತ್ತ) ಹನುಮಾ, ಹನುಮಾ, ಏ ಹನುಮಾ!

ಹನುಮ

(ಬೆಚ್ಚಿಬಿದ್ದು) ಹ!

ಚಂಚಲ

ನಿದ್ರೆ, ಏನೋ ಹನುಮಾ ಆಗಲ್ಲೆ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹನುಮ

ಆಗಲೆ ಏನು ಬಂತ್ರೆವ್ವ? ನೀವು, ಅದೇನೊ ಅವ್ಮಾ್ರರಲ್ಲ ಹಂಗೆ— ಚಿಂತೆ ಇಲ್ಲದವನಿಗೆ ಸಂತ್ಯಾಗೆ ನಿದ್ದಿ ಅಂತೆ.

ಚಂಚಲ

ಸುಖ ಪುರುಷ ಅನ್ನಬೇಕು ನೀನೇ ನೋಡೋ.

ಹನುಮ

ಅಲ್ವಾ ಮತ್ತೆ ? ಅದೇನೋ ಅಮ್ಮಾರಲ್ಲ ಹಂಗೆ–ಹಸಿವಿ ಆದಾಗೇ ಬಾಯಿ ತೆರೆದರೆ, ಕಂಣು ಮುಚ್ಚಿದಾಗೇ ನಿದ್ದಿ ಬರತೈತಂತೆ. ಸುಮ ಸುಮಕೆ ಬಾಯಿ ತೆರೆಯೋ ಚಟ ಬಾಳ ಅಗೈತ್ರವ್ವಾ ಈ ಕಲಿವಿಗದಾಗೆ.

ಚಂಚಲ

ಏನು ಅನ್ನುತ್ತಿಯೋ ನೀನು, ಒಂದೂ ತಿಳಿಯಲೊಲ್ಲದು. ಹನುಮಾ ನೀನು ಮಾತು ಆಡಿದರೆ ಒಗಟು ಇದ್ದಂತಿರುತ್ತದಲ್ಲವೋ ?

ಹನುಮ

ಸೈ ಬುಡ್ರಿ. ಆದೇನೋ ಅಮ್ಮಾರಲ್ಲ ಹಂಗೆ—ಮುಚ್ಚಿ ಹೇಳಿದರೆ ಒಗಟು ಅಮ್ತೀರಾ, ಬಿಚ್ಚಿ ಹೇಳಿದರೆ ಒರಟು ಅಮ್ತೀರಾ,

ಚಂಚಲ

ಬಿಚ್ಚೇ ಹೇಳಿಬಿಡೋ ಹನುಮಾ, ತಿಳಿದಾದರೂ ತಿಳಿಯಲಿ.

ಹನುಮ

ಬಿಚ್ಚೀನು ಬ್ಯಾಡ ಮುಚ್ಚೀನು ಬ್ಯಾಡ. ಇದ್ದದ್ದು ಇದ್ದಹಾಗೆ ಹೇಳಿ ಬಿಡೋ ಗಮಾರನ ಮಗ ನಾನು. ದೇವರು ಕೊಟ್ಟ ಬಾಯಿ ಐತೆ ಅಂತ ತೆರೆದು ಬುಟ್ರೆ ಬಂತೆ ? ಓಡೋದೇ ಅದರ ಕೆಲಸ ಅಂತ ನಾಲಿಗೆ ಚಾಲೂ ಮಾಡಿದರೆ ಬಂತೇನ್ರಿ ಅಮ್ತೀನಿ. ಹೇಳೀ ಕೇಳಿ ತ್ಯಾವದಾಗೆ ಇರೋದು ಅದೂನೂ ಜಾರಿಕೊಂತಾನೆ ಇರತೈತೆ ಅದು ಸದಾಕಾಲಾನೂ. ಸಮಯ ನೋಡಿ ಬಾಯಿ ತೆರೆದರೆ ಜಾಗ ನೋಡಿ ಕಂಣು ಮುಚ್ತೈತೆ.

ಚಂಚಲ

ಹನುಮಾ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹನುಮ

ಏನ್ರೆವ್ವಾ ?

ಚಂಚಲ

ನೀನು ಅದೆಷ್ಟೋ ಜಾಣ ಆದ್ರೂನೂ ನನಗೆ ತಿಳಿಯುವಂತೆ ಹೇಳಲಿಕ್ಕೆ ಬರುವದಿಲ್ಲವೋ ನಿನಗೆ.

ಹನುಮ

ಬೇಸ್ ಅಂದ್ರಿ ನನ್ನಾಯಿ, ನನ್ನವ್ವ. ಎದ್ದವ್ರನ್ನ ಎಚ್ಚರಿಸಬಹುದು. ನಿದ್ದೆ ಬಂದವ್ರನ್ನೂ ಎಬ್ಬರಸಬಹುದು. ಸುಮಸುಮಕೆ ಗತ್ತು ಹಿಡಿದು ಮಲಗಿದವ್ರನ್ನ ದೇವ್ರುನೂ ಎಚ್ಚರಿಸಲಾರನಂತೆ.

ಚಂಚಲ

ಏನೋ ಹನುಮಾ ನೀನು ಅನ್ನುವುದು ?

ಹನುಮ

ಅದನ್ನೆ ಅಂದೆನ್ರಿ. ಹಂಗೆ ಹೇಳೋಕೆ ಬರೋದಿಲ್ಲ ಅವ್ವಾನೇ ಮತ್ತೆ ಆಳಾಗಿ ದುಡಿತಿರೋದು.

ಚಂಚಲ

ಹೇಳಲಿಕ್ಕೆ ಬಂದಿದ್ರೆ ?

ಹನುಮ

ಮಾಸ್ತರಾಗಿ ಮನಗುತಿದ್ದೆ. ಅದೇನೊ ಅಮ್ಮಾರಲ್ಲ ಹಂಗೇ—ಆಳಾಗಿ ದುಡೀಬೇಕಂತೆ, ಒಡೆಯನಾಗಿ ಆಡಬೇಕಂತೆ,

ಚಂಚಲ

ಏನು ಒಡೆಯನೋ, ಬಿಡು ಹನುಮಾ. ಇದ್ದಾರೆ ನೋಡು ನಿನ್ನ ಒಡೆಯರು, ನನ್ನ ತಲೆ ಒಡೆಯುವವರು.

ಹನುಮ

ಅಯ್ಯ, ನನ್ನವ್ವ ! ಈ ವಿಗದಾಗೆ ಇವರೇ ಒಳ್ಳೇವರು ಅನ್ನು. ಅದೇನೋ ಅಮ್ಮಾರಲ್ಲ ಹಂಗೆ. ಎದೆ ಒಡೆಯೋರ ಊರಾಗೆ ತಲೆ ಒಡೆಯೋರೇ ಸಂಪನ್ನರಂತೆ. ಉಳಿದವರನ್ನ ನೋಡಿದರೆ ನನ್ನ ಒಡೆಯನ್ನ ಕಂಣಿಗೊತ್ತಿಗೋಬೇಕು, ಕಂಣಿಗೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂಚಲ

ನೀನೇ ಮೆಚ್ಚಿಗೋ ಬೇಕು ನೋಡು ಹನುಮಾ ನಿನ್ನ ಒಡೆಯನ್ನ.

ಹನುಮ

ನಮ್ಮವ್ವ! ಎಂಥಾ ಮಾತು ಆಡಿದಿರಲ್ಲ ಅಮ್ಮಿನಿ. ಅದೇನೋ ಅಮ್ತಾರಲ್ಲ ಹಂಗೆ–ಮನಸು ಕಚ್ಚಿಗೊಂಡಮ್ಯಾಲೆ ಮನಿಶಾ ಮೆಚ್ಚಿಗೊಳ್ಳೋದು ಯಾವ ದೊಡ್ಡ ಮಾತು ಅಮ್ಮಿನಿ. ನಾಯಿ ಬೇಕು, ಆದರೆ ಬಾಲ ಬ್ಯಾಡ ಅಂದ್ರೆ ಆದೀತಾ ? ಹನುಮ ಬೇಕು ಅಂದ ಮ್ಯಾಗೆ ಆತು, ಹನುಮನ ನಿದ್ದೀನು ಹಿಂದೇ ಬರತ್ತೈತೆ. ತೆಪ್ಪ ಮಾಡದ ಮನಿಶಾನ್ನ ದೇವ್ರೇ ಉಟ್ಟಿಸಲಿಲ್ಲ. ನಿನಗೆಲ್ಲಿಂದ ತಂದು ಕೊಡಲಿ ನಾನು, ಅಂತಾ ಉಟ್ಟದ ಪ್ರಾಣೇನ್ನ !

ಚಂಚಲ

ಎಲ್ಲಾರೂ ಹೀಗೆಯೇ ಇರತಾರೇನೊ, ಹನುಮ ಜಗತ್ತಿನಲ್ಲಿ ?

ಹನುಮ

ಏನ್ಮಾತ್ರವ್ವ ? ಅದೇನೊ ಅಮ್ತಾರಲ್ಲ ಹಂಗೆ—ಮೊಸರು ಕೊಡೊ ಎಮ್ಮಿಗೆ ಕೆಸರೆಂದರೆ ಬವ್ವು ಇಷ್ಟಂತೆ. ಕೆಸರಿನಾಗೆ ಎಮ್ಮಿ ಇರತ್ತೈತಿ. ಅಂದ್ರೆ ಅದು ಕೆಸರು ತಿನ್ನತ್ತೈತೆ ಅನ್ನಾಕೆ ಬಂದೀತೆ ?

ಚಂಚಲ

ನೀನು ಸಾವಿರ ಹೇಳು ಹನುಮ. ನನಗೆಷ್ಟೋ ಇಷ್ಟವಿಲ್ಲ ನೋಡು, ಅವರು ಆ......

ಹನುಮ

ಬುಡ್ರೆವ್ವ ನಸ್ತಾಯಿ ಈ ಸುದ್ದೀನ. ಅದೇನೊ ಅಮ್ತಾರಲ್ಲ ಹಂಗೆ...

(ಹೊರಬಾಗಿಲಲ್ಲಿ ಕಾಲಸಪ್ಪಳ)

ಬಂದಂಗಾತು ನೋಡವ್ವ ಹುಲಿ. ಅರಣ್ಯದಾಗಿನ ಹುಲಿ ಹೊರಗೆ ಬೀಳೋ ಹೊತ್ತಿಗೆ, ಈ ಊರಾಗಿನ ಹುಲಿ ಒಳಗೆ ಬರತ್ತೈತೆ.

ರಾಮಣ್ಣ

(ಒಳ ಬರುತ್ತ) ಏನೋ ಹನುಮಾ ಅದು, ಗೊಣಗುತಾ ಇದ್ದೀಯಲ್ಲವೋ ಆಗಲೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹನುಮ

ನಾನೇನು ಗೊಣಗಲಿ ನನ್ನೊಡೆಯ, ಅದೇನೋ ಅಮ್ಮಾತ್ರಲ್ಲ ಹಂಗೆ ಚೆಂಚಲಮ್ಮನಿಗೆ ಹೇಳಿದೆ, ಅಷ್ಟೆ.

ರಾಮಣ್ಣ

ಏನೋ ಹೇಳದಿ, ಚೆಂಚಲಮ್ಮನಿಗೆ ?

ಹನುಮ

ಲೋಕಕ್ಕೇ ತಿಳಿದ ಮಾತು. ಬೇರಿನ್ನೇನು ಹೇಳಲಿ ನನ್ನೊಡೆಯಾ! ಅದೇನೋ ಅಮ್ಮಾತ್ರಲ್ಲ ಹಂಗೆ—

ರಾಮಣ್ಣ

ನೇರವಾಗಿ ಹೇಳಬಾರದೇನೋ ? ಸುತ್ತುಗಟ್ಟಿ ಆಡಿದರೆ ಏನು ಬಂತೊ.

ಹನುಮ

ಸೈ ಬುಡ್ರಿ, ಅದೇನೊ ಅಮ್ಮಾತ್ರಲ್ಲ ಹಂಗೆ—ಸುತ್ತು ಗಟ್ಟಿದರೇನು ಕಟ್ಟಿ ಸುತ್ತಿದರೇನು, ಸುಡುಗಾಡು ತಪ್ಪೀತೇ ಹುಟ್ಟಿದ ಮನಿಶಾಗೆ ? ಯಾವುದೋ ಮಾತು ಬಂತು, ಅಮ್ಮ ಏನೋ ಏಳಿತು, ಅದಕೇ ಹೇಳಿದೆ ನನ್ನೊಡೆಯ.

ರಾಮಣ್ಣ

ಏನೋ ಹೇಳಿದ್ದು ?

ಹನುಮ

ಇನ್ನೇನು ಹೇಳಲಿ ಹೊಸತು ? ಅದೇನೋ ಅಮ್ಮಾತ್ರಲ್ಲ ಹಂಗೆ—ಧೂಳ ಎದ್ದರೆ ಮೂಗು ಮುಚ್ಚಿಗೊಂಡ್ರಾತು, ದೂಷಣೆ ಎದ್ದರೆ ಮೂಕಾನೆ ಮುಚ್ಚಿಗೋ ಬೇಕಾದೀತು ಅಂತ ಅಂದೆ.

ಚಂಚಲ

(ಅಂಜಂಜುತ್ತ) ಹನುಮಾ, ಹನುಮಾ!

ಹನುಮ

ಸುಮ್ನಿರವ್ವಾ ನೀನು. ಅದೇನೋ ಅಮ್ಮಾತ್ರಲ್ಲ ಹಂಗೆ—

ರಾಮಣ್ಣ

(ಕೋಪದಿಂದ) ಏನೋ ದೂಷಣೆ ? ಯಾರ ಮೇಲೋ ದೂಷಣೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲ್ಯೋ ದೂಷಣೆ ? ಯಾಕೋ ದೂಷಣೆ ? ಯಾವುದೋ ದೂಷಣೆ ? ಎಲ್ಲರಿಗೂ ಎಚ್ಚರದಿಂದ ಇರಲಿಕ್ಕೆ ಹೇಳು. ದೂಷಣೆ ಪಾಷಣೆ ಅಂದ್ರೆ ಬಾಯಲ್ಲಿನ ಹಲ್ಲು ಪಟ ಪಟ ಉದುರಿಸಿ ಕೈಯಾಗೆ ಕೊಟ್ಟು ಬಿಟ್ಟೇನು.

ಹನುಮ

ನನ್ನೊಡೆಯಾ ! ಒಳ್ಳೆ ಕೆಲಸಕ್ಕೇ ಕೈ ಆಕ್ತಿ ಬಿಡು. ಅದೇನೋ ಅಮ್ಮಾರಲ್ಲ ಹಂಗೆ—ಜನರ ಬಾಯಿ ಮುಚ್ಚಿಸೋದು ಜನನ್ನ ಉಟ್ಟಿಸಿದವನಿಗೂ ಆಗಾಕಿಲ್ಲವಂತೆ. ಹಲ್ಲು ಉದುರಿಸಿದರೆ ಇನ್ನಾ ಪಾಡು ಆತೆಲ್ಲ ನಾಲಿಗ್ಗೆ. ಸವತಿ ಸತ್ತರೆ ಆಕಿ ಯಾವಾಕಿ ಅಳೋಕಿ ಅಮ್ತೀನಿ.

ಚಂಚಲ

ಹೋಗಲಿ ಬಿಡೋ ಹನುಮಾ. ಯಾತರ ಮಾತೋ ಇದು, ಮನೆಗೆ ಬಂದಕೂಡಲೇ. ಹಲ್ಲು ಉದುರುಸ್ತೀನಿ, ಕಲ್ಲು ಉದುರುಸ್ತೀನಿ ಅಂತ.

ಹನುಮ

ಏ ನಮ್ಮವ್ವ ! ಉದುರಿಸಲಿ ಬಿಡು ಹಲ್ನ, ಯಾರು ಬ್ಯಾಡಂತಾರೆ ಪಾಪ ! ಅದೇನೋ ಅಮ್ತಾರಲ್ಲ ಹಂಗೆ—ಊರು ಸುಟ್ಟರೂ ಹನುಮ ಹೊರಗೆ ಅಂಥಂಗೆ ನನ್ನ ಹಲ್ಲಂತೂ ಯಾರೂ ಉದರಸೊ ಹಂಗೇ ಇಲ್ಲ. ನನ್ನ ಕಡೀ ಹಲ್ಲೂನೂ ಬಿದ್ದು ಮೂರು ವರುಸದ ಮ್ಯಾಗೆ ಈ ಒಡೆಯ ಹುಟ್ಟಿದ. ನಿನ್ನ ಹಲ್ಲಂತೂ ಸೈಯೇ ಸೈ. ಒಡೆಯನೇ ದುಡ್ಡು ಕೊಟ್ಟು ಡಾಗ್ತಾರಸರಿ ಕಟ್ಟಿ ಶಾನೆ. ಇನ್ನ ಊರಾಗಿನವರ ಹಲ್ಲು ಉದುರಿಸದರೆ...

ರಾಮಣ್ಣ

(ಗದರಿಕೊಂಡು) ಏ ಹನುಮಾ !

ಹನುಮ

ಓರೀ !

ಚಂಚಲ

ಬಿಡೋ ಆ ಮಾತು ಅಲ್ಲಿಗೆ. ಊಟದ ಹೊತ್ತಿನಲ್ಲಿ ಏಕೋ ಅದೆಲ್ಲ ? ಸುಮ್ಮನೆ ಮಾತು ಬೆಳಸಿದರೆ ಏನೋ ಹನುಮಾ ಪ್ರಯೋಜನ ?

ಹನುಮ

ಅವುದು ಬುಡವ್ವ ನನ್ತಾಯಿ. ಅದೇನೋ ಅಮ್ತಾರಲ್ಲ ಹಂಗೆ—ಅರ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿಕೊಳ್ಳದವರ ಮುಂದೆ ಮಾತು ಬೆಳೆಸೋದು, ಅನ್ನಕ್ಕಿಲ್ಲದವನು ಮೀಸೆ ಬೆಳೆಸೋದು ಎಳ್ಡೂ ಒಂದೇ ಅಂತೆ.

ರಾಮಣ್ಣ

(ಸಮಾಧಾನದಿಂದ ರಾಜಿ ಮಾಡಿಕೊಳ್ಳುವ ದನಿಯಲ್ಲಿ) ಏ ಹನುಮಾ!

ಹನುಮ

(ಅದೇ ದನಿಯಲ್ಲಿ) ಒಡೆಯಾ ?

ರಾಮಣ್ಣ

ಏನು ಮಾಡಂತೀಯ ನೀನು, ಅದನಾದರೂ ಸ್ಪಷ್ಟವಾಗಿ ಹೇಳೋ. ಹಳೇ ಮನುಷ್ಯ ನೀನು. ಏನು ಮಾಡಬೇಕು ನಾನು, ಅದನ್ನ ಹೇಳು ಮೊದಲು.

ಹನುಮ

ಅದು ಆದೀತಾ ನಿನ್ನ ಕೈಯಿಂದ ? ಅದೇನೋ ಅಮ್ಮಾರಲ್ಲ ಹಂಗೆ— ಕುಂತು ಹೇಳೋ ಅವಂದು ಏನು ಹೋದೀತು ? ಕುಣಿಯೋ ಅವಂದು ಕಾಲು ನೊಂದೀತು. ನಾನೆಲ್ಲ ಹೇಳೇನು, ನೀನೊಂದು ಮಾಡಬೇಕಲ್ಲ ? ಆದೀತೆ ನನ್ನೊಡೆಯಾ, ಆ ಕಷ್ಟದ ಕೆಲಸ ನಿನ್ನಿಂದ ?

ರಾಮಣ್ಣ

(ಹುಸಿನಗು) ನಿಜವಾಗಿಯೂ ಮಾಡ್ತೇನೆ ಹೇಳೋ. ಏನು ಮಾಡಬೇಕು ಹೇಳೋ ?

ಹನುಮ

ಮಾಡ್ತೀರಾ ಹಂಗಾದರೆ ? ಬವು ಕಷ್ಟದ ಕೆಲಸ ಹೇಳ್ತೀನಿ ನೋಡು ನನ್ನೊಡೆಯಾ.

ರಾಮಣ್ಣ

ಆಗಲಿ ಹೇಳೋ. ನಾನೇನು ಮಾಡಬೇಕು ?

ಹನುಮ

ಮಾಡು ಹೋಗು ಹಂಗಾದರೆ. ಹೊಟ್ಟೆ ತುಂಬ ಉಂಡು ಹಾಯಾಗಿ ಮನಗೋದು ಆದೀತೇ ಒಡೆಯ ? ಇಂತಾ ಕಷ್ಟದ ಕೆಲಸ! (ಮೂವರೂ ಗಹಗಹಿಸಿ ನಗುವರು).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨

(ಕೃಷ್ಣಮೂರ್ತಿಯ ಮನೆ—ಬಾಗಿಲಲ್ಲಿ ಸದ್ದು)

ಕೃಷ್ಣಮೂರ್ತಿ

(ಕುಳಿತಲ್ಲಿಂದಲೆ) ಇಲ್ರೆಮ್ಮಾ, ಇನ್ನೂ ಬಂದಿಲ್ಲ. ಯಾರು ನೀವು ?

ಸಾವಿತ್ರಿ

ಬಾಗಿಲು ತೆಗೆಯಿರೀ, ಬಾಗಿಲು.

ಕೃಷ್ಣಮೂರ್ತಿ

ಇಲ್ರೆಮ್ಮಾ, ಆಕಿನ್ನು ಬಂದಿಲ್ಲ. ನನ್ನ ಕೇಳಿದರೆ...

ಸಾವಿತ್ರಿ

ನಿಮ್ಮನ್ನೆ ಕೇಳಿದ್ದು, ಬಾಗಿಲು ತೆಗೆಯಿರೀ ಅಂದೆ. ಬಾಗಿಲು, ಬಾಗಿಲು.

ಕೃಷ್ಣಮೂರ್ತಿ

ಓಹೋ ನೀನೇ ! ಬಂದೆ ಬಂದೆ. (ಬಾಗಿಲನ್ನು ತೆಗೆಯುವನು)

ಸಾವಿತ್ರಿ

ಊಟ ಆದಂತಿದೆಯಲ್ಲ ?

ಕೃಷ್ಣಮೂರ್ತಿ

ನನ್ನ ಕೇಳಿದರೇ...

ಸಾವಿತ್ರಿ

(ನಡುವೆ ಬಾಯಿ ಹಾಕಿ) ನಿಮ್ಮನ್ನೇ ಕೇಳಿದ್ದು.

ಕೃಷ್ಣಮೂರ್ತಿ

ಇಲ್ಲಾ, ಊಟ ಆತು ಅಂದೆ. ನಿನ್ನ ಊಟ ?

ಸಾವಿತ್ರಿ

ನನ್ನ ಊಟ ಅಲ್ಲಿಯೇ ಆಯಿತು, ಲೇಡೀಸ್ ಕ್ಲಬ್‌ನಲ್ಲಿಯೇ. ನಮ ನಾಟಕದ ರಿಹಾರ್ಸಲ್ ಮುಗಿಯುವಾಗಲೆ ಹತ್ತು ಗಂಟೆ ಆಯಿತು.

ಕೃಷ್ಣಮೂರ್ತಿ

ನನ್ನ ಕೇಳಿದರೆ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಿ

ಏನು ಕೇಳಬೇಕು ನಿಮ್ಮನ್ನ, ಊಟಕ್ಕೆ ಹಾಕರಿ ಎಂದೆ ?

ಕೃಷ್ಣಮೂರ್ತಿ

ಅಲ್ಲವೇ, ನೀನು ಲೇಡೀಸ್ ಕ್ಲಬ್‌ನಾಗಾರೆ ಉಣ್ಣು, ಬಳ್ಳಾರಿ ಗುಡ್ಡದ ಮ್ಯಾಲಾರೆ ಉಣ್ಣು ಅದಕ್ಕೆ ನಾ ಬ್ಯಾಡಂಬೋದಿಲ್ಲ. ನನ್ನ ಕೇಳಿದರೇ, ನೀನು ಹೇಳಿಕಳಿಸಿಬಿಟ್ಟಿದ್ದರೆ ನಾನು...

ಸಾವಿತ್ರಿ

ಹೇಳಿ ಕಳಿಸಲಿಕ್ಕೆ ಅಲ್ಲಿ ಇದ್ದರು ಯಾರು ? ಮತ್ತೆ ನಾನೇ ಬರಬೇಕಿತ್ತು. ಉಂಡ ಮೇಲೆಯಂತೂ ಹೇಗೂ ಬರಬೇಕಲ್ಲ ? ಆಗಲೆ ಹೇಳಿದರಾಯಿತು ಎಂದು...

ಕೃಷ್ಣಮೂರ್ತಿ

ಅದು ಸರೆಬಿಡು. ನನ್ನ ಕೇಳಿದರೆ ಅಹುದೂ, ಅದೇನೋ ನಾಟಕ ಅಂದಿಯಲ್ಲ ? ಏನು ನಾಟಕವೇ ಅದು-ಯಾರಾದರೂ ಗಂಡಸರು ವೇಷ ಧರಿಸುತ್ತಾರೇನು ಅದರಲ್ಲಿ ಮತ್ತೆ ? ನನ್ನ ಕೇಳಿದರೆ...

ಸಾವಿತ್ರಿ

ನೀವೇನು ಭಯಪಡಬೇಕಿಲ್ಲ. ನಮ್ಮ ಕರಪತ್ರಗಳಲ್ಲಿಯೇ ಸ್ಪಷ್ಟವಾಗಿ ಅಚ್ಚುಮಾಡಿಸಿಬಿಟ್ಟಿದ್ದೇವೆ, ಇಗೋ ನೋಡಿ ಬೇಕಾದರೆ.

ಕೃಷ್ಣಮೂರ್ತಿ

ಭೇಷ್ ಭೇಷ್, ಚೆನ್ನಾಗಿ ಮಾಡಿದ್ದೀರಿ. ವಿ.ಸೂ. ಎಂದರೇನೆ ? ನನ್ನ ಕೇಳಿದರೇ...

ಸಾವಿತ್ರಿ

ವಿ.ಸೂ ಅಂದರೆ ಗೊತ್ತಿಲ್ಲವೇ ? ವಿಶೇಷ ಸೂಚನೆ:

ಕೃಷ್ಣಮೂರ್ತಿ

ಹಾಂ, ಅಹುದು ಮರೆತಿದ್ದೆ (ಓದುವನು) ಸ್ತ್ರೀಯರೇ ಪುರುಷ ಪಾತ್ರಗಳನ್ನೂ ವಹಿಸುವರು. ಶಭಾಸ್, ಶಭಾಸ್ ! ಬಹಳ ಚೆನ್ನಾಗಿದೆ. ಹೀಗಿರಬೇಕು, ನಮ್ಮ ಸ್ತ್ರೀಯರೆಂದರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಿ

ಇನ್ನೂ ಮುಂದೆ ಓದಿರಿ, ನಿಮಗೆ ಇನ್ನೂ ಹೆಚ್ಚು ಮೆಚ್ಚುಗೆಯ ವಿಷಯುಗಳು ಇವೆ. ಇಷ್ಟು ವರ್ಷಗಳು ನಿಮ್ಮೊಡನೆ ಬಾಳಿದ ನನಗೆ ಗೊತ್ತಿಲ್ಲವೆ ನಿಮ್ಮ ಸ್ವಭಾವ ? ಈ ಎಲ್ಲ ಷರತ್ತುಗಳನ್ನು ಹಾಕಿಯೇ ನಾನು ಇದರಲ್ಲಿ ಪಾತ್ರ ವಹಿಸಿದ್ದೇನೆ,

ಕೃಷ್ಣಮೂರ್ತಿ

(ಓದುವನು) ಕುಲೀನ ಪುರುಷರಿಗೆ ಪ್ರತ್ಯೇಕ ಸ್ಥಳದ ಏರ್ಪಾಟು ಮಾಡಲಾಗಿದೆ. ಭೇಷ್, ಭೇಷ್.

ಸಾವಿತ್ರಿ

ಇನ್ನೂ ಮುಂದೆ ಓದಿ. ಇಷ್ಟಕ್ಕೇ ಹಿರಿ ಹಿರಿ ಹಿಗ್ಗುತ್ತೀರಲ್ಲ ?

ಕೃಷ್ಣಮೂರ್ತಿ

(ಓದುವನು) ಒನ್ಸ್‌ಮೋರ್ ಅನ್ನುವದು ಬಿಡುವದು ಪ್ರೇಕ್ಷಕರ ಇಷ್ಟ! ಗಲಾಟೆಮಾಡುವವರನ್ನು ಪೋಲಿಸರ ಸ್ವಾಧೀನಕ್ಕೆ ಕೊಡಲಾಗುವದು. ಗಲಾಟೆ ಮಾಡುವ ಪೋಲೀಸರನ್ನು ಸ್ತ್ರೀಯರ ಸ್ವಾಧೀನಕ್ಕೆ ಕೊಡಲಾಗುವದು. ಬಹಳ ಚೆನ್ನಾಗಿದೆ. ಬಹು ಸ್ವಾರಸ್ಯವಾಗಿದೆ. ಹೀಗಿರಬೇಕು ಸ್ತ್ರೀಯರೆಂದರೆ. ನನ್ನ ಕೇಳಿದರೆ...

ಸಾವಿತ್ರಿ

ಈಗ ನಿಮ್ಮನ್ನೇ ಕೇಳಬೇಕಾಗಿದೆ ಒಂದು ವಿಷಯ.

ಕೃಷ್ಣಮೂರ್ತಿ

ಏನೇ ಅದು ಅಂಥಾದ್ದು !

ಸಾವಿತ್ರಿ

ನಮ್ಮ ನಾಟಕದ ತಿಕೀಟುಗಳನ್ನು ನೀವು ಮಾರಿಸಿ ಕೊಡಬೇಕಲ್ಲ, ಈಗ ?

ಕೃಷ್ಣಮೂರ್ತಿ

ಅಯ್ಯೊ ಮಹರಾಯಿತಿ ! ನಮ್ಮ ಆಫೀಸಿನಲ್ಲಿಯಂತು ಈ ಸಮಾಚಾರ ವನ್ನು ಮಾತಾಡುವಂತೆ ಸಹ ಇಲ್ಲ. ಎಲ್ಲರೂ ಬೇಸತ್ತು ಹೋಗಿದ್ದಾರೆ ಈ ಕಂಪಲ್ಸರಿ ಚಾರಿಟಿಗಳಿಂದ. ಬಡವರು ಎಂದು ಹಲವರು ಬೇಡುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾತಿಗಳ ಲೇಬಲ್, ಪಾರ್ಟಿಗಳ ಮಾರ್ಕು, ಕಲೆಯ ನೆಪ, ದಾನ, ಧರ್ಮ, ಸಂಸ್ಥೆ-ವ್ಯಕ್ತಿ. ಎಲ್ಲರೂ ಹರಿದು ಹರಿದು ತಿಂದು...ನನ್ನ ಕೇಳಿದರೆ—

ಸಾವಿತ್ರಿ

ನಾಟಕವೇ ಬೇಡ ಎನ್ನುತ್ತೀರಿ. ಹೋಗಲಿ ಬಿಡಿ. ನಾಳೆ ನಾನೇ ಹೋಗುತ್ತೇನೆ ಮನೆಗೆ. ಬಿಟ್ಟುಬಿಡಿ ಆ ವಿಷಯ, ನಿಮ್ಮನ್ನು ಕೇಳಿದರಲ್ಲವೆ. ತೊಂದರೆ ?

ಕೃಷ್ಣಮೂರ್ತಿ

ನನ್ನ ಕೇಳಿದರೆ...!

೩

[ರಾಮಣ್ಣನ ಮನೆ-ಹೊರಕೋಣೆಯಲ್ಲಿ ರಾಮಣ್ಣ ಮತ್ತು ಸಾವಿತ್ರಿ ಎದುರು ಬದುರು ಕುರ್ಚಿಗಳಲ್ಲಿ ಕುಳಿತು ಮಾತನಾಡುತ್ತಿದ್ದಾರೆ. ಇದನ್ನು ಕದ್ದು ನೋಡಿದ ಚಂಚಲ ಹನುಮನನ್ನು ಕರೆಯುತ್ತಾಳೆ]

ಚಂಚಲ

ಹನುಮಾ, ಹನುಮಾ !

ಹನುಮ

ಬಂದಿನ್ರೆವ್ವ, ನನ್ತಾಯಿ.

ಚಂಚಲ

ನಿನ್ತಾಯಿಯ ಮುಖಕ್ಕೆ ಮಂಗಳಾರತಿಯಾಯಿತು. (ಮೆಲುದನಿಯಲ್ಲಿ) ನೋಡಿದೇನೋ ಕೋಣೆಯಲ್ಲಿ ?

ಹನುಮ

ಅದನ್ಯಾಕೆ ನೋಡಾಕೆ ಹೋಗ್ತಿರಿ ನೀವೂ ? ಯಾರು ಬಂದರೇನಂತೆ ? ಅದೇನೋ ಅಮ್ತಾರಲ್ಲ ಹಂಗೆ-ಬಾಡಿಗಿ ಮನೆ ಅವನಿಗೆ ಮೂಲಿ ಹಕ್ಕಿಲ್ಲಂತೆ, ಬಂಣದ ಮಾತಿನಾಗೆ ವಿಷಯ ಇಲ್ಲಂತೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂಚಲ

ಇದೆಲ್ಲ ಪಂಚಾಯಿತಿ ಬೇಡವೋ ನನಗೆ. ನಾನೂ ಹೀಗೆಯೇ ಮಾಡಿದರೆ...

ಹನುಮ

ಚೀ ನಿಮ! ಅದೇನೋ ಅವ್ನಾರಲ್ಲ ಹಂಗೆ—ಇಂತಾವಕ್ಕೆಲ್ಲ ನೀವ್ಯಾಕೆ ಮನಸು ಮಾಡ್ತೀರಿ ನನ್ನವ್ವ? ದಾರೀ ಮ್ಯಾಗಿನ ಕಲ್ಲು ಕಾಲಿಗೆ ಒತ್ತೈತೆ. ತಲೀಗೆ ತಗಲೀತೆ? ಹತ್ತೀಗೆ ಬೆಂಕಿ ಹತ್ತಿದರೆ ಎತ್ತೆತ್ತಾಗೋ ಹಾರಾಡೀತು. ಹಗುರ ಬುದ್ಧಿ ಮಾಡಿಕೊಬ್ಯಾಡ್ರಿ. ಆಡು ಹತ್ತೂತಾಗೆಲ್ಲ ಆನೆ ಹತ್ತಾಕಾದೀತೆ! ಎಲಿ ಒಣಗಿದರೆ ಚಿಗುರೀತು. ಬೇರು ಒಣಗಿದರೆ ಇನ್ನೇನೈತೆ? ತುಸ ಕುಂತು ಮನಗಬೇಕ್ರಿ. ತಡೆದವನಿಗೆ ತಡಿ ದೊರೆತೀತು ಅಂಬೋದು ಸುಳ್ಳಲ್ಲ. ಅಸ್ಸಲು ವಿಸಯಾನೇ ಗೊತ್ತಿಲ್ದೆ, ಅನುಮಾನದ ಬುನಾದೀ ಮ್ಯಾಗೆ ಗಾಳಿಗೋಪುರ ಕಟ್ಟಿದರೆ ಯಾಕೆ ಬಂತು?

ಚಂಚಲ

ಸಾಕು ಮುಗಿಸೋ ನಿನ್ನ ಪುರಾಣ. ನನಗೊಂದೇ ನೋಡು ನೀನು ಹೇಳುವದೆಲ್ಲ. ಅವರಿಗೆ ಹೇಳಬೇಕು.

ಹನುಮ

ದಡ್ಡವ್ವ! ವೀಳೇದೆಲಿಗೆ ಸುಣ್ಣ ಅಚ್ಚಾರೆ ಆಗಲಿ, ನಾಲಿಗ್ಗೆ ಅಚ್ಚಾರೆ ಯಾರಾರೆ?

ಚಂಚಲ

(ಅವಸರದಲ್ಲಿ) ಹನುಮಾ, ಹನುಮಾ!

ಹನುಮ

ಏನ್ರವ್ವೆ, ಏನಾತು?

ಚಂಚಲ

ಅಲ್ಲಿ ನೋಡೋ, ಅಲ್ಲಿ ನೋಡು. ಅವಳ ಗಂಡ ಕೃಷ್ಣಮೂರ್ತಿ ಅಲ್ಲಿಯೇ ಹೋಗುತ್ತಿದ್ದಾರೆ ನೋಡು.

ಹನುಮ

ಈಗ ನೋಡಿದೇನವ್ವ ನೀನು ಆ ಸಾಮಿನ್ನ? ಈಟು ಹೊತ್ತಿಗೆ ಮೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾರಿ ಪರದಕ್ಷಿನ ಮಾಡಿತು ನಮ್ಮ ಮನೀನ. ಆತನ ಮನಸಿಗೂ ನಿನ್ನ ಮನಸಿಗೆ ಬಡಿದಿರೋ ರೋಗಾನೆ ಬಡಧಂಗೈತಿ. ಮನಸು ಇರೋದೆ ರೋಗ ಬಡಸಿಗೊಳ್ಳಾಕೋ ಏನೋ, ಇವರಿಗೆಲ್ಲ !

ಚಂಚಲ

ನಿನ್ನ ಟೀಕೇ ಸಾಕೋ. ಮೊದಲು ಹೋಗಿ ಕರೆಯೋ ಅವರನ್ನ.

ಹನುಮ

ಸೋಮೀ ! ಕರದ ಕೂಡ್ಲೆ ಬಂದು ಬುಟ್ಟ ನೋಡ್ರಿ. ಅನುಮಾನದ ಸ್ವಾಮೀ ! ಬರ್ರೀ ಸ್ವಾಮೇರೆ, ಅನುಮಾನದ ಅಮ್ಮನೋರು ಕರೀತಾರೆ.

ಕೃಷ್ಣಮೂರ್ತಿ

ನಮಸ್ಕಾರ ತಾಯಿ, ನಾನು ನಿಮ್ಮನ್ನೇ ಕಾಣಬೇಕೆಂದು ಇದ್ದೆ. ಈಗಾ ನಮ್ಮಾಕೀ...ನನ್ನ ಕೇಳಿದರೆ.

ಚಂಚಲ

(ಮೆಲು ದನಿಯಲ್ಲಿ) ಗಟ್ಟಿಯಾಗಿ ಮಾತನಾಡಬೇಡಿ. ಕೊಂಚ ಹೊತ್ತು ಸುಮ್ಮನಿರಿ. ಆ ಕೋಣೆಯಲ್ಲಿಯೇ ಕುಳಿತಿದ್ದಾರೆ ಇಬ್ಬರೂ. ಇಲ್ಲಿಯೆ ಕುಳಿತು ಕೇಳಿಸಿಗೊಳ್ಳೋಣ. ಏನೇನು ಮಾತನಾಡುತ್ತಾರೋ......(ಪಕ್ಕದ ಕೋಣೆ ಯಿಂದ ಸಾವಿತ್ರಿ ಮತ್ತು ರಾಮಣ್ಣನ ದನಿಗಳು)

ರಾಮಣ್ಣ

ನಮ್ಮ ಕ್ಲಬ್ಬಿನ ಅಧ್ಯಕ್ಷರಿಗಂತೂ ಹೇಳಿ ನೋಡುತ್ತೇನೆ. ಪೂರ್ಣ ಜವಾಬ್ದಾರಿ ನಾನೊಬ್ಬನೇ ಹೇಗೆ ವಹಿಸಿಕೊಳ್ಳಲಿ, ತಾಯೀ ?

ಚಂಚಲ

(ಆಶ್ಚರ್ಯೋದ್ಗಾರ) ತಾಯೀ !

ಸಾವಿತ್ರಿ

ನೀವೇ ಹೀಗೆಂದರೆ ಹೇಗೆ ? ನಿಮ್ಮ ವರ್ಚಸ್ಸಿನ ಉಪಯೋಗವಾಗಲೇ ಬೇಕು. ನೀವು ಮನಸ್ಸು ಮಾಡಿದರೆ ಅದೇಕೆ ಹಣ ಆಗುವದಿಲ್ಲಣ್ಣಾ.

ಚಂ. ಕೃ

(ಆಶ್ಚರ್ಯೋದ್ಗಾರ) ಅಣ್ಣಾ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಿ

ಬರುತ್ತೇನೆ, ನಮಸ್ಕಾರ. ನಿಮ್ಮ ಮನೆಯವರು ?

ರಾಮಣ್ಣ

ಕರೆಯುತ್ತೇನೆ. ಏಕೆ, ಒಳಗೇ ಬನ್ನಿ. ಬಾಗಿಲು ತೆಗೀತಿನಿ.

ಸಾ. ರಾ.

ಅರೆ ! ನೀಯಾಕೆ ಹೀಗೆ ಇಲ್ಲಿ ಕೂತುಕೊಂಡೀಯೇ ! ಇದೇನು ? ನೀವು ! ಇಲ್ಲೇ !

ಕೃಷ್ಣಮೂರ್ತಿ

ನನ್ನ ಕೇಳಿದರೇ......

ಚಂಚಲ

ಇನ್ನು ಕೇಳುವದೇನಿದೆ ? ಸ್ಪಷ್ಟವಾಗಿ ಹೋಯಿತಲ್ಲ ನಮ್ಮ ದಡ್ಡತನ.

ರಾಮಣ್ಣ

ಹನುಮಾ !

ಹನುಮ

ಏನೋ ಇದೆಲ್ಲ ? ಒಂದೂ ಅರ್ಥವಾಗಲಿಲ್ಲವಲ್ಲೋ ? ಒಗಟು ಇದ್ದಂತಿದೆಯಲ್ಲವೋ ?

ಹನುಮ

(ಮಧ್ಯೆ ಮಧ್ಯೆ ನಗುತ್ತ) ಅದೇನೋ ಅಮ್ತಾರಲ್ಲ ಹಂಗೆ–ಮನಿಶಾಗೆ ಬಾಳೇ ಒಂದು ದೊಡ್ಡ ಒಗಟು, ನನ್ನ ಒಡೆಯಾ. ಆ ಒಗಟು ಒಡೆಯೋವನೆ ಬಾಳಿನ ಒಡೆಯ ಆಗೋವನು.

ಚಂಚಲ

ಹೇಗೋ ಹನುಮಾ, ಈ ಬಾಳಿನ ಒಗಟು ಒಡೆಯೋದು ?

ಹನುಮ

ಅದು ಯಾವ ಇದ್ದೇವು ನನ್ತಾಯಿ ? ಮನಿಶಾನ ಕೈಯಾಗೆ ಇಲ್ಲದ್ದು ಯಾವದೈತಿ ? ಅದೇನೋ ಅಮ್ತಾರಲ್ಲ ಹಂಗೆ–ಛತ್ರಿ ಬಿಡಿಸಿಗೊಂಡ್ರೆ ನೆರಳಂತೆ, ಮನಸ್ಸು ವಿಕಾಸ ಆದ್ರೆ ಬಿದ್ದಲ್ಲೆ ಮೋಕ್ಸಂತೆ. ಏನಂತೀರಿ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಡುಗೊರೆ

(ಓ ಹೆನ್ರಿ.ಯವರ "ಮ್ಯಾಗೀಸ್ ಗಿಫ್ಟ್" ಓದಿ ಸ್ಫೂರ್ತಿಗೊಂಡು ಬರೆದುದು)

ಪಾತ್ರ ಪರಿಚಯ

ಕುಸುಮ
ಉಮೇಶ } ...ನೂತನ ದಂಪತಿಗಳು

ಮುಕುಂದರಾಯ ... ಕುಸುಮಳ ತಂದೆ

ನಾಗರಾಜ ... ಉಮೇಶನ ಗೆಳೆಯ

೧

(ಮುಕುಂದರಾಯರ ಆಫೀಸು ಕೋಣೆ. ರಾಯರು ತಲೆಬಾಗಿ ಕೆಲಸದಲ್ಲಿ ತೊಡಗಿದ್ದಾರೆ. ಎದುರು ಕೋಣೆಯಲ್ಲಿ ಕುಸುಮ ಪತ್ರ ಒಂದನ್ನು ಎರಡೆರಡು ಬಾರಿ ಓದಿ ಅಲ್ಲಲ್ಲಿ ತಿದ್ದುತ್ತಿದ್ದಾಳೆ. ಬಾಗಿಲಲ್ಲಿ ಪೋಸ್ಟ್, ಪೋಸ್ಟ್!)

ಮುಕುಂದರಾಯ

(ಕುಳಿತಲ್ಲಿಂದಲೇ) ಒಳಗೆ ಬಾರಯ್ಯ.

ಕುಸುಮ

(ಆತುರದಿಂದ) ಯಾರದಪ್ಪ, ಕಾಗದ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಕುಂದರಾಯ

(ಹುಸಿನಗು) ಯಾರೋ ಮುಂಬಯಿ ಇಂದ ಬರೆದಂತಿದೆಯಮ್ಮ.

ಕುಸುಮ

(ಆತುರ) ಇಲ್ಲಿ ಕೊಡಿ ನೋಡ್ತೇನೆ.

ಮುಕುಂದರಾಯ

ತಾಳು, ತಾಳು. ಅಷ್ಟಕ್ಕೇ ಗಡಿಬಿಡಿ. ಅಕ್ಷರವೇನೊ ..

ಕುಸುಮ

ಅಹುದು ಅವರದೇ. ಇಲ್ಲಿ ಕೊಡಿ ಅಂದ್ರೆ. (ಕಸಿದುಕೊಂಡು ತನ್ನ ಕೋಣೆಗೆ ಓಡುವಳು. ತುಸು ಹೊತ್ತಿನ ಮೇಲೆ ಪುನಃ ಪ್ರವೇಶಿಸಿ) ತೆಕ್ಕೊಳ್ಳಿ, ನನಗೇನು ಬೇಕಿಲ್ಲ ನಿಮ್ಮ ಕಾಗದ.

ಮುಕುಂದರಾಯ

ಇದರಲ್ಲಿದ್ದ ಇನ್ನೊಂದು ಕಾಗದ ?

ಕುಸುಮ

ಅದು ಯಾರದೊ ಅವರು ತೆಗೆದುಕೊಂಡಿದ್ದಾರೆ. ನಿಮ್ಮದು ನೀವು ತೆಗೆದುಕೊಳ್ಳಿ.

ಮುಕುಂದರಾಯ

(ಕಾಗದವನ್ನು ಓದುತ್ತಾ) ಇದೇನಮ್ಮಾ ಕುಸುಮಾ ? ಎರಡೇ ದಿನಗಳಲ್ಲಿಯೇ ನಿನ್ನವರ ದಿಗ್ವಿಜಯ.

ಕುಸುಮ

ಅಹುದು. ರೈಲಿಗೆ ಹೋಗಬೇಕು ಬೆಳಿಗ್ಗೆ.

ಮುಕುಂದರಾಯ

ಅದಕ್ಕೆ ಈಗಾಗಲೆ ಇಷ್ಟು ಸಡಗರವೇ ?

ಕುಸುಮ

ಅದಕ್ಕಲ್ಲ, ನೀವು ಏಳಿ ಕೊಂಚ ಬೇಗ. ಸಿಟಿಯಲ್ಲಿ ಹೋಗಿ ಬರಬೇಕಾಗಿದೆ.

ಮುಕುಂದರಾಯ

ನನಗೆ ಗೊತ್ತು, ಕಾಗದ ಕಂಡ ಕೂಡಲೇ ನೀನು ಕುಣಿದಾಡ್ತಿ ಅಂತ. ಏನು ಆಗಬೇಕು ಈಗ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಸುಮ

ಏನೂ ಇಲ್ಲ. ನೀವೊಂದು ತಯಾರಾಗಿ ಬೇಗ. ಹೂ, ಏಳಿ ಅಂದ್ರೆ.

ಮುಕುಂದರಾಯ

ಇದೇನಮ್ಮ ಇಷ್ಟು ಅವಸರ ?

ಕುಸುಮ

ಇರಲಿ ಏಳಿ. ಆಮೇಲೆ ಅಂಗಡಿ ಮುಚ್ಚಿಬಿಟ್ಟಾವು.

ಮುಕುಂದರಾಯ

ಯಾವ ಅಂಗಡಿ ಬೇಕಮ್ಮಾ ನಿನಗೆ ? ಬಟ್ಟೆ ಅಂಗಡಿಯಂತೂ ಕಾಲಿಡು ವಂತಿಲ್ಲಾ, ರೇಷನ್ ಕಾರ್ಡು ಇಲ್ಲದಲೆ.

ಕುಸುಮ

ಬಟ್ಟೆ ಅಂಗಡಿ ಅಲ್ಲಾಂದ್ರೆ.

ಮುಕುಂದರಾಯ

ರಿಬ್ಬನ್ ಅಂಗಡಿಗೆ ಆದಿತ್ಯವಾರ ರಜೆ.

ಕುಸುಮ

ಅಯ್ಯೋ, ಅದೂ ಅಲ್ಲ.

ಮುಕುಂದರಾಯ

ಮತ್ತೆ ?

ಕುಸುಮ

ಮಂಗಳೂರು ನಾರಾಯಣಾಚಾರ್ಯರ ಅಂಗಡಿಗೆ.

ಮುಕುಂದರಾಯ

ಏನಮ್ಮಾ, ಏನು ಹುಚ್ಚೇ ನಿನಗೆ...?

ಕುಸುಮ

ಹುಚ್ಚೂ ಇಲ್ಲ, ಮಂಕೂ ಇಲ್ಲ. ಏಳಿ ನೀವಂತೂ ಬೇಗ.

ಮುಕುಂದರಾಯ

ಅಗತ್ಯ ಏಳ್ತೀನೆ ಬಿಡು, ಅದಕ್ಕೇನಾಗಬೇಕಾಗಿದೆ. ಅಲ್ಲ ಕುಸುಮಾ! ಚಿನ್ನದ ಬೆಲೆ ಎಷ್ಟೇರಿದೆ ಅದಾದ್ದರೂ ಗೊತ್ತಿದೆಯೆ ನಿನಗೆ ? ಈ ಯುದ್ಧದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯುಗದಲ್ಲಿ ಎಲ್ಲದಕ್ಕೂ ಆಳತೆಗೆಟ್ಟು ಬೆಲೆ ಏರಿದೆ. ಅಗ್ಗವಾದುದು ಮನುಷ್ಯನೊಂದೆ. ಚಿನ್ನ ಕೊಳ್ಳುವ ಕಾಲವೇನೆ ಕುಸುಮಾ ?

ಕುಸುಮ

ನಾನೇನು ಕೊಳ್ಳುವದಿದೆ ?

ಮುಕುಂದರಾಯ

ಮತ್ತೇತಕ್ಕೆ ಹಾಗಾದರೆ ಈ ಪ್ರಯಾಣ ? ಇದ್ದ ಚಿನ್ನ ಮಾರಲಿಕ್ಕೆಯೇ?

ಕುಸುಮ

ಅಲ್ಲಾ ಅಂದ್ರೆ, ನೀವು ಏಳಿ, ಬಟ್ಟೆ ಹಾಕಿಕೊಳ್ಳಿ ಸದ್ಯ. ನಾನೆಲ್ಲಾ ರಸ್ತೆಯಲ್ಲಿ ಹೇಳ್ತೇನೆ.

ಮುಕುಂದರಾಯ

ಬಹಳ ವಿಲಕ್ಷಣ ಇದೆಯಮ್ಮಾ ಇದು. ಕೊಳ್ಳಲಿಕ್ಕಲ್ಲ, ಮಾರಲಿಕ್ಕಲ್ಲ. ಮತ್ತೇತಕ್ಕೆ ಈ ಓಟ ? ಅದೇನು ಗುಟ್ಟು ಹೇಳಬಾರದೆ ?

ಕುಸುಮ

ಗುಟ್ಟೇನಿದೆ ಇದರಲ್ಲಿ, ಒಂದು ಚಿನ್ನದ ಸರಪಣಿ ಮಾಡಿಸಬೇಕಾಗಿದೆ ಅಷ್ಟೆ.

ಮುಕುಂದರಾಯ

ಸರಪಣಿ ?

ಕುಸುಮ

ಅವರ ಗಡಿಯಾರಕ್ಕೆ.

ಮುಕುಂದರಾಯ

ದೀಪಾವಳಿಯಲ್ಲಿ ಗಡಿಯಾರ ಕೊಟ್ಟ ತಪ್ಪಿಗೆ ಈಗ ಸರಪಣಿ ಕೂಡಾ ಕೊಡಬೇಕೆ ? ಚೆನ್ನಾಗಿದೆಯಮ್ಮ ನಿನ್ನ ಲೆಕ್ಕಾಚಾರ.

ಕುಸುಮ

ಅವರು ಗಡಿಯಾರಕ್ಕೆ ತೊಗಲು ಪಟ್ಟಿ ಕಟ್ಟಿರೋದು ನನಗೆ ಅಷ್ಟು ಚೆನ್ನಾಗಿ ಕಾಣಲಿಲ್ಲ ಅಂಣಾ ! ಆದಕ್ಕೇ ಒಂದು ಚಿನ್ನದ್ದು ಮಾಡಿಸಿದರಾಯಿತು ಅಂತ......

ಮುಕುಂದರಾಯ

ಬಹಳ ಸಂತೋಷ. ಆದರೆ ಅದಕ್ಕೆ ಚಿನ್ನ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಸುಮ

ಇದೆ ನನ್ನ ಹತ್ತಿರ.

ಮುಕುಂದರಾಯ

ಏನೂ, ಚಿನ್ನವೇ ?

ಕುಸುಮ

ಅಹುದು. ನನ್ನ ಕೈಯಲ್ಲಿ ಉಂಗುರ ಇದೆಯಲ್ಲ, ಅದಕ್ಕೆ ಹರಳು ಕೂಡಾ ಇಲ್ಲ. ಅದನ್ನೇ ಕರಗಿಸಿ ಒಂದು ಚಿಕ್ಕ ಸರಪಣಿ ಮಾಡಿಸಿದರಾಯಿತು. ಅದೆಷ್ಟೋ ಭೂಷಣವಾಗಿರುತ್ತೆ, ಅವರ ಕೈಯಲ್ಲಿ.

ಮುಕುಂದರಾಯ

ಭೂಷಣವೇನೊ ನಿಜವೇ. ಹೆಂಣುಮಕ್ಕಳ ಜಾಣತನವೇ ಇಷ್ಟು. ಒಂದನ್ನು ಕರಗಿಸಿ ಇನ್ನೊಂದು, ಇನ್ನೊಂದು ಕರಗಿಸಿ ಮತ್ತೊಂದು, ಮತ್ತೊಂದು ಕರಗಿಸಿ ಮಗದೊಂದು. ಇದ್ದ ಕೊಂಚ ಚಿನ್ನವೆಲ್ಲಾ ಹೀಗೆ ಕರಗಿಯೆ ಹೋಗಬೇಕು. ಹೂ, ಸರಿ—ಆಗಲಿ ಹೊರಡಮ್ಮ ಹಾಗಾದರೆ—ಎಲ್ಲಿ, ನನ್ನ ರುಮಾಲು ಕೊಡು. ಬೇಗನೆಯಾದರೂ ಹೋಗಿಬಿಟ್ಟು ಬರೋಣ.

ಕುಸುಮ

ಅಂಣಾ !

ಮುಕುಂದರಾಯ

ಏನಮ್ಮಾ ?

ಕುಸುಮ

ನನಗೇನೋ ಒಂದು ಉಡುಗೊರೆ ತರುತ್ತಾರಂತೆ ಮುಂಬಯಿಯಿಂದ. ಕಾಗದದಲ್ಲಿ ಬರೆದಿದ್ದಾರೆ.

ಮುಕುಂದರಾಯ

ಏನಂತೆ ಅದು ?

ಕುಸುಮ

ನೀನೇ ಊಹಿಸು ಎಂದು ಬರೆದಿದ್ದಾರೆ.

ಮುಕುಂದರಾಯ

ಸರಿ, ತಿಳಿಯಿತಲ್ಲ ಹಾಗಾದರೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಸುಮ

ಏನು ಹೇಳಿ ?

ಮುಕುಂದರಾಯ

ಅವರೇ !

೨

(ಸಾಯಂಕಾಲ ಸಮಯ. ಕತ್ತಲಾಗುವ ಮುನ್ನವೆ ಉಮೇಶ ಚೌಪಾತಿಯಿಂದ ಹೊರಟು ಅವಸರದಿಂದ ಸಾಗಿದ್ದಾನೆ. ಹಿಂದಿನಿಂದ ಬೈಸಿಕಲ್ಲು ಏರಿ ಬಂದ ನಾಗರಾಜ ಮೇಲಿಂದ ಮೇಲೆ ಗಂಟೆ ಬಾರಿಸಿದಾಗ ಬೆಚ್ಚಿಬಿದ್ದು ಉಮೇಶ ಹಿಂತಿರುಗಿ ನೋಡುತ್ತಾನೆ)

ನಾಗರಾಜ

(ತುಂಟತನದಿಂದ) ನಮಸ್ಕಾರ ರಾಯರೆ! ನನ್ನ ಬೈಸಿಕಲ್ಲು ಗಂಟೆಯಿಂದ ತಮಗೆ ರಸಹಾನಿಯಾಯಿತೇನೊ, ಕ್ಷಮಿಸಬೇಕು.

ಉಮೇಶ

ಇರಲಿ ಬಾರಯ್ಯ. ರಸವೇ ಇಲ್ಲ, ಇನ್ನು ಹಾನಿ ಎಲ್ಲಿಯದು. ಸಧ್ಯ ಒಳ್ಳೆ ಸಮಯಕ್ಕೇ ಬಂದಿ ಬಾ. ಅಪ್ರತಿಮ ಅನುಭವಶಾಲಿ ಬೇರೆ ನೀನು. ಕೊಂಚ ಹಾಗೆಯೇ ಹೋಗಿ ವ್ಯಾಪಾರ ಮಾಡಿಬಿಟ್ಟು ಬರೋಣ.

ನಾಗರಾಜು

ಏನಪ್ಪಾ ಅಂತಹ ವ್ಯಾಪಾರ ? ಏನು, ರಿಜರ್ವ್ ಬ್ಯಾಂಕಿನ ಶೇರುಗಳು ಬೇಕೊ ? ಯಾವುದಾದರೂ ಮಿಲ್ಲಿನ ಅರ್ಧ ಶೇರು ಬೇಕೋ ? ಸೊಸೈಟಿಯ ಪಾವು ಬೇಕೋ ? ಕಂಪನಿಯ ಚಟಾಕು ಬೇಕೋ...

ಉಮೇಶ

ಸಾಕು ಸಾಕು, ನಿನ್ನ ವ್ಯವಹಾರ ನೈಪುಣ್ಯದ ಪ್ರದರ್ಶನ. ನನಗೆ ಗೊತ್ತಿದೆ ತಮ್ಮ ಯೋಗ್ಯತೆ, ಅನುಭವವೆಲ್ಲ. ಮೊದಲು ಮಾರ್ಕೆಟ್ಟಿಗೆ ಹೋಗೋಣ ನಡೆಯಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗರಾಜ

ಯಾವ ಮಾರ್ಕೆಟ್ಟಿಗೆ ?

ಉಮೇಶ

ಅಂದರೆ ?

ನಾಗರಾಜ

ಕರಿಯದೋ, ಬಿಳಿಯದೋ ಅಂತ ?

ಉಮೇಶ

ನನಗೆ ಬೇಕಾಗಿರುವದಂತೂ ಒಂದು ಕೆಂಪು ಹರಳು. ನೀನು ಯಾವ ಮಾರ್ಕೆಟ್ಟಿಗಾದರೂ ಕರೆದುಕೊಂಡು ಹೋಗು.

ನಾಗರಾಜ

ಹರಳು ?

ಉಮೇಶ

ಅಹುದಯ್ಯಾ, ಉಂಗುರದಲ್ಲಿ ನಡಿಸಲಿಕ್ಕೆ ಹರಳು ಬೇಕು.

ನಾಗರಾಜ

ಉಂಗುರವೇ ಇಲ್ಲ ಹರಳು ಏತಕ್ಕೊ ನಿನಗೆ ?

ಉಮೇಶ

ಇದೆಯಪ್ಪಾ ಉಂಗುರ. ಆದರೆ ನನ್ನ ಕೈಯಲ್ಲಿಲ್ಲ.

ನಾಗರಾಜ

ಅಂದರೆ ?

ಉಮೇಶ

ಇರಬೇಕಾದವರ ಕೈಯಲ್ಲಿದೆ.

ನಾಗರಾಜ

ಓಹೋ ! ಕ್ಷಮಿಸಬೇಕು, ಅಧಿಕಪ್ರಸಂಗ ಮಾಡಿದ್ದಕ್ಕಾಗಿ. ಈಗ ಅರ್ಥವಾಯಿತು, ಶ್ರೀಮತಿ ಉಮೇಶರಾಯರ ಬೆರಳಲ್ಲಿನ ಉಂಗುರಕ್ಕೆ ಹರಳು ಕೊಳ್ಳಲು ಶ್ರೀಮಾನ್ ಕುಸುಮರಾದ ತಾವು ಹೊರಟಿದ್ದೀರಿ ಅಂದಂತಾಯಿತು. ಅಷ್ಟೇ ತಾನೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಮೇಶ

ಅಹುದು ಸ್ವಾಮಿ, ಇಷ್ಟೇ ಸಂದರ್ಭ. ಈಗಲಾದರು ತಮ್ಮ ಸಹಕಾರ ದೊರೆಯಬಹುದಷ್ಟೆ ?

ನಾಗರಾಜ

ಅಲ್ಲವೋ ಉಮೇಶ ! ಬೆಲೆ ಬಹಳ ಏರಿದೆಯೋ ಈಗ ಆ ಕಲ್ಲುಗಳಿಗೆ. ಅಷ್ಟು ಅವಸರವೇನೋ ಅದಕ್ಕೆ ?

ಉಮೇಶ

ಅವಸರವೇ ಮತ್ತೆ. ಅವಳ ಕೈಲಿರುವ ಉಂಗುರದ ಹರಳು ಬಿದ್ದು ಹೋಗಿದೆ. ಒಳ್ಳೆಯ ಹರಳು ಒಯಿದರೆ ಅದೆಷ್ಟೋ ಸಂತೋಷವಾಗುತ್ತೆ ಅವಳಿಗೆ. ಅದರಲ್ಲೂ ಕೆಂಪು ಹರಳು ಅವಳ ಬೆರಳಿಗೆ ಇನ್ನೂ ಚೆಂದ.

ನಾಗರಾಜ

ಸರೆ, ನಿನ್ನ ಹೆಂಡತಿಯ ಮೈ ಬಂಣವಂತೂ ತಿಳಿದಂತಾಯಿತಲ್ಲ ?

ಉಮೇಶ

ನಿನ್ನ ತಲೆ, ಅದೆಲ್ಲ ಜೇಷ್ಟೆ ಹಾಗಿರಲಿ. ಈಗ ಎಲ್ಲಿಗೆ ಹೋಗೋದು ಅದನ್ನು ಹೇಳು ಮೊದಲು.

ನಾಗರಾಜ

ನಿನಗೇನು ಇಮಿಟೇಷನ್ ಹರಳು ತಾನೆ ಬೇಕು ?

ಉಮೇಶ

ಛೆ, ಛೆ, ಇಮಿಟೇಷನ್ ಯಾಕಯ್ಯ ? ಕೊಳ್ಳುವಾಗ ಒಳ್ಳೆಯದನ್ನೆ ಕೊಂಡರಾಯಿತು.

ನಾಗರಾಜ

ಅಂದರೆ ಇಮಿಟೇಷನ್ ಹರಳಿನಲ್ಲಿ ಒಳ್ಳೆಯದಿಲ್ಲವೆಂದೇ ನಿನ್ನ ಅಭಿಪ್ರಾಯ ?

ಉಮೇಶ

ಅಲ್ಲವೊ...

ನಾಗರಾಜ

ಮತ್ತೇನಂತೆ ? ಇಮಿಟೇಷನ್ನಿಗಿರುವ ಮರ್ಯಾದೆ ಇಂದು ನಿಜವಾದ್ದಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲಯ್ಯ ಇದೆ ? ಬರಿ ಹರಳಿನ ಬಗ್ಗೆ ಒಂದೇ ಅಲ್ಲ ನಾನು ಹೇಳುವದು, ಮನುಷ್ಯರಲ್ಲೂ ಕೂಡ ಅಷ್ಟೇ. ಈಗ ನೋಡೂ...

ಉಮೇಶ

ಸಾಕು, ಸಾಕು. ಈಗ ಬೇಡ ನಿನ್ನ ವ್ಯವಹಾರ ಗೀತೆ. ಇಮಿಟೇಷನ್ನಿಗೆ ಎರಡು ಕಾಲ ಮರ್ಯಾದೆ ದೊರೆಯಬಹುದು ಮೂರ್ಖರಿಂದ. ಎಂದಾದರೂ ಕಪ್ಪಾಗಲೇ ಬೇಕುತಾನೆ ? ಆಗ ಗೊತ್ತಾಗಲ್ವೆ ಅದರ ತಾಮ್ರ ತೇಲಿದಾಗ ?

ನಾಗರಾಜ

ಇಷ್ಟು ಸಾಚಾ ದೃಷ್ಟಿ ಎಲ್ಲರಿಗೂ ಇದ್ದರೆ ಇಂದು ಜಗತ್ತಿನಲ್ಲಿ ಇಷ್ಟು ಇಮಿಟೇಷನ್ ದೊಡ್ಡ ಮನುಷ್ಯರೇ ಇರುತ್ತಿರಲಿಲ್ಲ. ಸರಿ ಆಗಲಿ ನಡೆ. ಹಣ ?

ಉಮೇಶ

ಜೋಡಿಸಬೇಕಾಗಿದೆ.

ನಾಗರಾಜ

ಎಲ್ಲಿದೆ ಜೋಡಿಸಲಿಕ್ಕೆ ? ರಸ್ತೆಯಲ್ಲಿ ಬಿದ್ದಿರುತ್ತೆಯೆ ?

ಉಮೇಶ

ಅಲ್ಲವೋ, ಈ ನನ್ನ ಕೈಗಡಿಯಾರವಿದೆಯಲ್ಲ...

ನಾಗರಾಜ

ಅದನ್ನು ಮಾರಿ ಹಾಕಬೇಕುತಾನೆ ?

ಉಮೇಶ

ಅಷ್ಟೇ ನೋಡು. ಈ ದರಿದ್ರ ತೊಗಲುಪಟ್ಟಿ ಕಟ್ಟಿಗೊಳ್ಳೋದು ಅವಳಿಗೆಷ್ಟೂ ಇಷ್ಟವಿಲ್ಲ. ಇದನ್ನು ಮಾರಿ ಹರಳನ್ನು ತಂದು ಉಂಗುರದಲ್ಲಿ ಇಟ್ಟರೆ ಅವಳ ಕೈಯಲ್ಲಾದರೂ ಸೊಗಸಾಗಿರುತ್ತೆ, ಅಲ್ಲದೆ ನಾನವಳಿಗೆ ಈಗ ಉಡುಗೊರೆ ಕೊಡಲಿಕ್ಕೆ ದೊಡ್ಡೊಂದು ಕಾರಣವೂ ಇದೆ ನಾಗರಾಜ್.

ನಾಗರಾಜ

ಏನಯ್ಯ ಅಂತಹ ಕಾರಣ ?

ಉಮೇಶ

ನನಗಾದಿ ಅವಳೂ ಏನೋ ಕೊಡುತ್ತಾಳಂತೆ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗರಾಜ

ಏನು ಉಮೇಶ ಅದು ?

ಉಮೇಶ

ಅದೇ ತಿಳಿಯದಾಗಿದೆ ಅಂದ್ರೆ. ನೀವೇ ಊಹಿಸಿ ಎಂದು ಬರೆದಿದ್ದಾಳೆ. ನನಗೆ ಬಹು ಬೇಕಾದುದಂತೆ.

ನಾಗರಾಜ

ಸರೆ, ತಿಳಿಯಿತಲ್ಲ ಹಾಗಾದರೆ.

ಉಮೇಶ

ಏನು ಹೇಳು.

ನಾಗರಾಜ

ಅವಳೇ !

ಉಮೇಶ

ಸಾಕು ಬಾರಯ್ಯ, ನಿನ್ನ ತಮಾಷೆ. ನಿನಗೆ ಹೇಗೂ ರಜೆ ಇದೆ. ನಡೆ ನನ್ನೊಟ್ಟಿಗೆ, ಎರಡು ದಿನ ಊರಿಗಾದರೂ ಹೋಗಿ ಬರೋಣ.

೩

(ಮುಕುಂದರಾಯರ ಮನೆ. ಒಳ ಕೋಣೆಯಲ್ಲಿ ರಾಯರು, ಕುಸುಮ. ಹೊರ ಕೋಣೆಯಲ್ಲಿ ಉಮೇಶ ಮತ್ತು ನಾಗರಾಜ. ಗುಜು ಗುಜು ನಡೆದಿದೆ)

ಮುಕುಂದರಾಯ

ಊಹಿಸಿ ಬಿಟ್ಟಾರಮ್ಮಾ ಕುಸುಮ, ನಿಮ್ಮವರು ಆಗಲೆ.

ಕುಸುಮ

ಏಕೆಪ್ಪಾ ?

ಮುಕುಂದರಾಯ

ನೋಡು, ಕೈ ಬಣಗುಟ್ಟುತ್ತೆ ತಿಳಿಯಲ್ವೆ ? ಗಡಿಯಾರ ಬಿಟ್ಟಿಟ್ಟಂತಿದೆ ಬೇಕಾಗಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗರಾಜ

ಬಹಳ ಜಾಣೆ ಕಣಯ್ಯಾ ಉಮೇಶ, ನಿನ್ನ ಹೆಂಡತಿ.

ಉಮೇಶ

ಯಾಕೋ ?

ನಾಗರಾಜ

ಗೊತ್ತಾಗಲ್ವೆ ಅವಳ ಬೆರಳು ನೋಡಿದರೆ ?

ಉಮೇಶ

ಅಂದರೆ ?

ನಾಗರಾಜ

ಸರಿಯಾಗಿ ಊಹಿಸಿ ಬಿಟ್ಟಿದ್ದಾಳಯ್ಯಾ ನಿನ್ನ ಉಡುಗೊರೇನ್ನ. ಬೇಕೂ ಅಂತ ಉಂಗುರವನ್ನು ಬೆರಳಿನಿಂದ ತೆಗೆದಿಟ್ಟಿದ್ದಾಳೆ ನೋಡು.

ಉಮೇಶ

ಕೇಳಿಯೇ ಬಿಡುತ್ತೇನೆ ಅವಳನ್ನೆ. ಕುಸುಮಾ ! ನಿನ್ನ ಆ ಹರಳಿಲ್ಲದ ಉಂಗುರವೆಲ್ಲಿ ?

ಕುಸುಮ

ನಿಮ್ಮ ಆ ತೊಗಲುಪಟ್ಟಿಯ ಕೈಗಡಿಯಾರವೆಲ್ಲಿ ಕೊಂಚ ಕೊಡಿ, ನೋಡೋಣ.

ಉಮೇಶ

ಇಗೋ ತೆಗೆದುಕೋ, ಕೆಂಪು ಹರಳು ನಿನ್ನ ಉಂಗುರಕ್ಕೆ.

ಕುಸುಮ

ನಿಮ್ಮ ಗಡಿಯಾರಕ್ಕೆ ತೆಗೆದುಕೊಳ್ಳಿ ಈ ಚಿನ್ನದ ಸರಪಣಿ.

ನಾಗರಾಜ
ಮುಕುಂದರಾಯ

ಆಹಾ ಉಡುಗೊರೆ !

(ಎಲ್ಲರೂ ಪೆಚ್ಚಾಗಿ ನಗುವರು)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆರೆ - ಹೊರೆ

ಪಾತ್ರ ವರ್ಗ

ಶೀಘ್ರಕೋಪಿ ಶಾಮಣ್ಣ
ಶಾಮಣ್ಣನ ಹೆಂಡತಿ—ಸಾವಿತ್ರಮ್ಮ
ಆಚೆ ಮನೆ ಅನಂತಯ್ಯ
ಅಪರಿಚಿತ ಮತ್ತು ಗಾಡಿ ಸಾಬಿ

ಸ್ಥಳ
ಊರಿನಿಂದ ಬಹುದೂರವಿರುವ ಒಂದೇ ಒಂದು ಮನೆಯ ಒಳಗಡೆ
ಸಮಯ
ರಾತ್ರಿ ಎಂಟು ಗಂಟೆ
ಸಂದರ್ಭ

ಶಾಮಣ್ಣನ ಹೆಂಡತಿ ಸಾವಿತ್ರಮ್ಮ ಗಂಡನ ದಾರಿ ಕಾದೂ ಕಾದೂ ಸಾಕಾಗಿ ಬೇಸತ್ತು, ಕತ್ತಲನ್ನು ನೋಡೀ ನೋಡಿ ಸಾಕಾಗಿ ಹೊರ ಬಾಗಿಲನ್ನು ಹಾಕಿ ನಡುಮನೆಗೆ ಬಂದು ಗಲ್ಲಕ್ಕೆ ಕೈಯಿಕ್ಕಿ ಕೂಡುವಳು. ಆತ್ಮಗತ ಆರಂಭ.

ಸಾವಿತ್ರಮ್ಮ

(ಆಕಳಿಸುತ್ತ—ಬಾಯಿ ಮುಂದೆ ಚಿಟಿಕೆ ಹೊಡೆದು) ಗಂಡಸರು ಅಂದ ಮ್ಯಾಲೆ ಆತು. ಆ ಜಾತೆಲ್ಲ ಒಂದೇ. ಅವರೇನು, ಇವರೇನು ? ಅದೇನೋ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಾರಲ್ಲ...ಹಾಗೆ...ಅಂತೂ ಇಂತೂ ಹೆಂಣಿಗೆ ಹಿಂಸೆ ತಪ್ಪಿದ್ದಲ್ಲ. (ಹಲ್ಲಿ ಯೊಂದು ಲೊಚಗುಟ್ಟುವುದು) ಕ್ರಿಷ್ಣ...ಕ್ರಿಷ್ಣ ಕ್ರಿಷ್ಣ...ಕ್ರಿಷ್ಣ. ಸುಳ್ಯಾಕೆ ಆದೀತು ನನ್ನ ಮಾತು, ಹಲ್ಲೀನೂ ಹೌದಂತು. ಈ ಹಲ್ಲೀನೂ ಹೆಣ್ಣೋ ಏನು ಮಣ್ಣೋ...ಇಲ್ಲದಿದ್ದರೆ ಅದಾದರೂ ಯಾಕೆ ಅಂದೀತು ? ರಾತ್ರಿ ಎಂಟಾದರೂ ಇವರು ಮನಿ ಸೇರದಿದ್ದರೆ ಏನು ಸುಡಗಾಡು ಮಾಡಬೇಕಾದೀತು ನಾನು ಅಂತೀನಿ — ಮಂಗಳವಾರ ಇಲ್ಲಾ ಶುಕ್ರವಾರ ಇಲ್ಲಾ — ಮುಂಜಾನಿಂದ ಮೂವತ್ತು ಬ್ಯಾರೆ ಹೇಳೀನಿ ಇವರಿಗೆ. ಹೇಳಿ ಕೇಳಿ—ಏನು ಹೇಳಿದರೆ ಏನದೆ ಅಂತೀನಿ. ಯಾವ ಪುಣ್ಯಾತ್ಮ ನನಗಾಗಿ ಈ ಅಡಿವ್ಯಾಗೆ ಮನಿ ಕಟ್ಟಿಸಿಟ್ಟನೋ ಏನೋ ಅವನ ಮನಿ ಹಾಳಾಗ. ಅದೇನೋ ಅಂತಾರಲ್ಲ...ಹಾಗೆ ಅದೆ ನನ್ನ ಹಣೇ ಬಾರ. ಆಸರ ಬ್ಯಾಸರ ಅಂತ ಹೊರಗೆ ಹೋದರೆ ಒಂದು ನರಮನುಷ್ಯ ಪ್ರಾಣೀ ಮುಖಾನಾದರೂ ಇಲ್ಲ...ನೋಡಲಿಕ್ಕೆ. ಬರಲಿ...ಬರಲಿ...ಬಂದಾಗೆ ಬರಲಿ. ಅದೇನೋ ಅಂತಾರಲ್ಲ ಹಾಗೆ...ನಾನೂ ಹಾಗೇ ಅಡ್ನಾಗ್ತೀನಿ. (ಸೈಕಲ್ಲ ಗಂಟೆ ಬಾರಿಸುವುದು ಹೊರಗಡೆ. ಧಿಡೀಲನೆ ಎದ್ದು ಬಾಗಿಲನ್ನು ತೆರೆದು ಹೊರಕಟ್ಟೆಗೆ ಬರುವಳು) ಅಂತೂ ಇವತ್ತಿನೊಳಗೆ ಬಂತು ಸವಾರಿ. ನನ್ನ ಪುಣ್ಯ.

ಅಪರಿಚಿತ

ರಾಯರು ಇದಾರೇನಮ್ಮಾ ?

ಸಾವಿತ್ರಮ್ಮ

ಇಲ್ಲಪ್ಪಾ...ಇನ್ನೂ ಬಂದಿಲ್ಲ.

ಅಪರಿಚಿತ

ಎಲ್ಲಿಗೆ ಹೋಗಿದ್ದಾರಮ್ಮ ?

ಸಾವಿತ್ರಮ್ಮ

(ಕೊಂಚ ಕೋಪ ಬೆರೆಸಿ) ಯಾರಿಗೆ ಗೊತ್ತಪ್ಪ...ಗಂಡಸರು ಹೇಳಿ ಹೋಗ್ತಾರೇನು ?

ಅಪರಿಚಿತ

ಯಾವಾಗ ಬರ್ತಾರಮ್ಮ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಮ್ಮ

(ಬುಸುಗುಟ್ಟುತ್ತ,) ಅವರನ್ನೆ ಕರಕೊಂಡು ಬಾರಪ್ಪ–ಕೇಳಿ ಹೇಳ್ತೀನಿ ...(ದುಪ್ಪೆಂದು ಕದವಿಕ್ಕಿ ನಡುಮನೆಗೆ ನಡೆಯುವಳು) ನಿನ್ನ ಮನೆ ಹಾಳಾಗ! ಒಳ್ಳೇ ದೆವ್ವ ಬಂದ್ಹಾಗೆ ಬಂದ. ಜೋಪಾಗಿ ಮಾತಾಡ್ತಾನೆ ಪಾಪ! ಮಧ್ಯಾಹ್ನದಿಂದ ಒಂದೇ ಸವನೆ ಬಂದೆ ಬರ್ತಾವೆ ಆಕಳಿಕಿ, ಸ್ವಾಟಿ ಹರಿಯೋ ಹಾಗೆ. ಐದು ನಿಮಿಷ ಮಲಗಲಿಕ್ಕೆ ಆಗಿಲ್ಲ. ಅದೇನೋ ಅಂತಾರಲ್ಲ ಹಾಗೆ ಆಗ್ಯದೆ. ಕಂಣಿಗೆ ಕಂಣು ಹಚ್ಚಿಲ್ಲ. ಅದೇನು ಕೆಲಸೋ ಅದೇನು ಮಣ್ಣೋ! ತಪ್ಪೇಲಾಗಿನ ತುತ್ತು ಅನ್ನ ಹೊಟ್ಯಾಗಿಟ್ಟುಕೊಂಡು ಬ್ಯಾಗನೆ ಮಲಗಲಿಕ್ಕೂ ನನಗಿಲ್ಲ ಅಂದರೆ...ಬರಲಿ, ಬಂದಾಗ ಬರಲಿ. ನೂರು ಬಾರಿ ಕೂಗಿ ಕೂಗಿ ಗಂಟ್ಲಾ ಹರಕೊಂಡ ಮ್ಯಾಲೆ ಬಾಗಿಲ ತೆಗೀತೀನಿ ನಾನೂನು.

(ಹೊರಗಡೆ ಟಾಂಗಾ ಗಾಡಿ ಬಂದು ಮನೆಯ ಮುಂದೆ ನಿಂತ ಸಪ್ಪಳ. ಕೂಡಲೆ ಓಡಿ ಬಂದು ಬಾಗಿಲನ್ನು ತೆರೆಯುವಳು)

ಗಾಡಿಸಾಬಿ

ಅಯ್ಯಾ ಐತೇನಮ್ಮಾ?

ಸಾವಿತ್ರಮ್ಮ

ಇಲ್ಲಪ್ಪಾ!

ಗಾಡಿಸಾಬಿ

ಯಾವಾಗ ಬರ್ತೈತೆಮ್ಮಾ!

ಸಾವಿತ್ರಮ್ಮ

ಯಾರು ಬಲ್ರುಪ್ಪಾ.

ಗಾಡಿಸಾಬಿ

(ಮೆಲು ದನಿಯಲ್ಲಿ ಶಪಿಸುತ್ತ ಗಾಡಿ ತಿರುಗಿಸುವನು) ಯಾವಾಗ ಬಂದ್ರು ಸಿಗಾಕಿಲ್ಲ, ಈ ಸಾಮಿ...ಇವನ ಮನೆ ಹಾಳಾಗ.

ಸಾವಿತ್ರಮ್ಮ

(ಬಾಗಿಲನ್ನು ಬಂಧಿಸಿ ಒಳ ಬರುತ್ತ) ಅದೇನೋ—ಅಂತಾರಲ್ಲ...ಹಾಗೆ ಆದೆ ನನ್ನ ಹಣೇಬಾರ. ಮನೀ ಅವರು ಬರಲಿಲ್ಲ ಅಂತ ಅಳಬೇಕೋ, ಅಜೂ ಬಾಜೂ ಮಂದಿ ಇಲ್ಲ ಅಂತ ಅಳಬೇಕೋ. ಬಂದು ಹೋಗೋ ಈ ಮಂದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಟಕ್ಕೆ ಅಳಬೇಕೋ ತಿಳೀಧಾಗೆ ಆಗ್ಯಾದೆ. ಬರಲಿ, ಬರಲಿ ಅವರು ಬಂದಾಗ ಬರಲಿ. ನಾನಂತೂ ಸ್ಪಷ್ಟ ಹೇಳಿಬಿಡತೀನಿ ಇವತ್ತು ಅವರಿಗೆ. ಸರವತ್ತಿಗೆ ಬರಲೊಲ್ಲರ್ಯಾಕೆ ಅವರು ಮನಿಗೆ. ಈ ಅಡಿವ್ಯಾಗ ನಾನು ಸಾಪು ಸಾಪು ಇರೋದಿಲ್ಲ ಅಂತ. ನಡು ಊರಾಗೆ ಒಂದು ಮನೀ ಮಾಡಿರಿ ಮೊದಲು ಅಂತೀನಿ.

(ಹೊರಗಡೆ ಸೈಕಲ್ಲು ಗಂಟೆ ಬಾರಿಸುವುದು. ಓಡಿಬಂದು ಬಾಗಿಲನ್ನು ತೆರೆಯುವಳು—ಶಾಮಣ್ಣನವರು ಒಳ ಬಂದು, ಸೈಕಲ್ಲನ್ನು ಪಡಸಾಲೆಯಲ್ಲಿಕ್ಕಿ ನೇರವಾಗಿ ತಮ್ಮ ಕೋಣೆಗೆ ಹೋಗುವರು. ಹಿಂದೆಯೇ ಸಾವಿತ್ರಮ್ಮ ಬರುವಳು. ದೂರು ಹೇಳುವ ದನಿಯಲ್ಲ)

ಇವತ್ತೂ ಮಂಗಳವಾರ...

ಶಾಮಣ್ಣ

(ನಡುವೆ ಬಾಯಿಹಾಕಿ) ಹೌದು, ನಿನ್ನೆ ಸೋಮವಾರ. ನಾಳೆ ಬುಧ ವಾರ. ಅದಕ್ಕೇ ಇವತ್ತು ಮಂಗಳವಾರ. ಮುಂದೇನು ?...

ಸಾವಿತ್ರಮ್ಮ

ಅಲ್ಲಾ...ಇಷ್ಟಕ್ಕೇ ಸಿಟ್ಟಿಗೆ ಬರ್‍ತೀರಲ್ಲ. ಅದೇನೋ ಅಂತಾರಲ್ಲ...

ಶಾಮಣ್ಣ

(ತಕ್ಷಣ) ಯಾರು ? ಯಾರು ಅಂತಾರೆ ? ಏನು ಅಂತಾರೆ ? ಯಾವಾಗ ಅಂತಾರೆ ? ಯಾರ ಮುಂದೆ ಅಂತಾರೆ ? ಯಾಕೆ ಅಂತಾರೆ ? ಅಂಬೋ ಅವರ ಅಪ್ಪನ ಗಂಟೇನು ಹೋದೀತು ? ನೀನು ಯಾರನ್ನೂ ಮಾತಿಗೆ ಹಚ್ಚಿಕೋ ಬ್ಯಾಡ ಅಂತ ಹೇಳಿದೆನಲ್ಲ ನಾನು ಆಗಲೆ. ಯಾರು ಬಂದಿದ್ದರು. ಯಾರಾದ್ರೂ ಬಂದಿದ್ದರೇನು ಮನೀಗೆ ?

ಸಾವಿತ್ರಮ್ಮ

(ಅಣಕಿನ ದನಿಯಲ್ಲಿ) ಹೂಂ ... ಬಂದಿದ್ದರು. ಬರದೆ ಯಾಕೆ ಬಿಟ್ಟಾರೂ ? ಕಡೀ ಮನೆ ಕಮಲಮ್ಮ ಬಂದಿದ್ರು—ಬಲಗಡೆ ಮನಿ ಭೀಮಕ್ಕ, ಎಡಗಡೆ ಮನಿ ಯಮುನಕ್ಕ, ಹಿಂದಿನ ಮನಿ ಹನುಮಂತಿ, ಮುಂದಿನ ಮನಿ ರಿಂದಕ್ಕ, ಕೊಳಾಯಿ ಕಸ್ತೂರಿ ಎಲ್ಲಾರೂ ಬಂದು ಮುಕುರಿ ಬಿಟ್ಟರು ನನ್ನ. ಬರತಾರಂತೆ ಬರತಾರೆ. ಸುಡುಗಾಡು ದಾಟಿ ಈ ಅಡವ್ಯಾಗೆ ಮನಿ ಮಾಡೀರಿ;

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರಿ ಮಾರಿ ಕೆರಕೊಂಡ್ರೂನು ಒಂದು ನರಮನುಷ್ಯರ ಸುಳಿವು ಸಹ ಇಲ್ಲಿಲ್ಲ ಮುಂಜಾನೆ ನೀವು ಹೋದಾಗಿಂದ ಒಬ್ಬಾಕೀನೆ ಕೂತು ಕೂತು ಸಾಕಾತು (ಅಳುವ ದನಿಯಲ್ಲಿ) ಹ್ಯಾಗಿತ್ತು ನನ್ನ ತವರು ಮನಿ...ಐದು ನಿಮಿಷಾದರೂ ಒಬ್ಬಾಕೀನೆ ಇದ್ದು ಗೊತ್ತಿಲ್ಲ ನನಗೆ. ನಮ್ಮಪ್ಪನ ಮನಿ ಅಂದ್ರೆ ಒಂದು ಸಂತೀಪ್ಯಾಟಿ ಆಗಿತ್ತು. ಇಲ್ಲೇನು ಸುಡುಗಾಡು ಅದೆ? ಏನೇ ಸಾವಿತ್ರಿ ಇದ್ದೀಯಾ, ಸತ್ತೀಯಾ ? ಅಂತ ಅಂಬೋವ್ರಿಲ್ಲಸಾಘಾತು ನನ್ನ ಹಣೇಬಾರ ...ನನ್ನ ಅಜ್ಜಿ ಸಾಯೋವರೆಗೂ ಅಂತಾನೇ ಸತ್ತಳು, ಭಾಗೀರ್ತಿ ಗಂಡನ ಮನಾಗೆ ಹ್ಯಾಗಿರ್ತೀ...ಅಂತ. ಒಬ್ಬಾಕಿ ಈ ಹಾಳು ಮನಾಗೆ ಇರಬೇಕೂ ಅಂದ್ರೆ ಗಡಗಡ ನಡುಗು ಬರ್ತದೆ. ವಿಪರೀತ ಅಂಜಿಕಿ...

ಶಾಮಣ್ಣ

ಅಂಜಿಕಿ ! ಅಂಜಿಕಿ ಅಂದ್ರೇನೇ ? ನಿನಗೂ ಅಂಜಿಕೀನೇ ? ನೀನು ಯಾರಾರಿಗೂ ಅಂಜಬಾರದು ಅಂತಾನೇ ಆ ಯಮನ್ನೂ ಅಂಜಿಸಿದ ಸಾವಿತ್ರಿ ಹೆಸರು ಇಟ್ಟೆನಲ್ಲೆ ನಿನಗೆ ! ಆ ತವರು ಮನೀ ಹೆಸರು ಭಾಗಿರ್ತೀ ಅಂಬೋದು ಬ್ಯಾಡಾ ಅಂತ.

ಸಾವಿತ್ರಮ್ಮ

ಸಾಕು ಬಿಡ್ರೀ ನಾನೊಲ್ಲೆ. ಪಿಳಿ ಪಿಳೀ ಕಂಣುಬಿಟುಕೋತ ಒಬ್ಬಾಕೀನೆ ಎಷ್ಟೊಂತ ಇರಲಿ ? ನಿಮ್ಮ ಅಮ್ಮ ಆದ್ರೂ ಇರಲಿಲ್ಲ ನಾಲ್ಕು ಕಾಲ ! ನನ್ನ ಪುಣ್ಯ ಅಂಥಾದ್ದು. ಅದೇನೋ ಅಂತಾರಲ್ಲ...

ಶಾಮಣ್ಣ

ಸಾಕು ಬಿಡೆ ನಾನೊಲ್ಲೆ...ನೀನು ಮನಿಗೆ ಬಂದು ವಾರದೊಳಗೆ ನಮ್ಮಮ್ಮ ಸತ್ತಳೂ ಅಂತ ನಾನೂ ಸುಖವಾಗಿದ್ದೀನಿ. ನೀನೂ ಒಳ್ಳೇ ಹುಡುಗಿ ಅಂತ ಹೆಸರು ಸಂಪಾದಿಸಿಕೊಂಡಿ. ಆಕಿ ಇದ್ದಿದ್ದರೆ ಅಯ್ಯಯ್ಯಪ್ಪ ! ಇದೆಲ್ಲಾ ದೂರಾಲೋಚನೆ ಮಾಡೀನೆ ನಾನು ನಿನ್ನ ಮಾಡಿಕೊಂಡೆ—ಅತ್ತಿ ಇಲ್ಲದ ಮನೀ ನಿಂದು ಅಂತ...

ಸಾವಿತ್ರಮ್ಮ

ಸಾಕು ಸುಮ್ಮನೆ ಇರ್ರಿ, ನಾನೊಲ್ಲೆ. ಸಂದೇನು ಅತ್ತಿ ಇಲ್ಲದ ಮನಿ ಅಲ್ಲ. ನೀವೇ ಅತ್ತೀನೂ ಆಗೀರಲ್ಲ ನನ್ನ ಪಾಲಿಗೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಮಣ್ಣ

ಬಾಯಿ ಮುಚ್ಚು...ನಿನಗೆ ಜತೀಗೆ ಬೇಕು ಅಂದ್ರೆ ನಿನ್ನ ಅಕ್ಕನ್ನ ಬಂದು ನಾಲ್ಕು ದಿನ ಇದ್ದು ಹೋಗು ಅನ್ನು ಬೇಕಾದರೆ.

ಸಾವಿತ್ರಮ್ಮ

ಸೈ. ಅದೇನೋ ಅಂತಾರಲ್ಲ...ನಾವಿಬ್ಬರೇ—ಹೆಂಗಸರು ಇದ್ದಾದರೂ ಮಾಡೋದೇನು ? ಮೂರನೇ ಆಕಿ ಒಬ್ಬಾಕಿಲ್ಲ ಅಂದ ಮ್ಯಾಲೆ, ಯಾವಾಕಿನ್ನ ಆಡಿಕೋಬೇಕು ನಾವು ಇಬ್ಬರೇ ಕೂತುಕೊಂಡು ? ಇದೆಲ್ಲಾ ಬ್ಯಾಡ. ಆಗೋ ಮಾತಲ್ಲ ಹೋಗೋ ಮಾತಲ್ಲ.

ಶಾಮಣ್ಣ

ಹಾಗಾದ್ರೆ, ಏನು ನೀನು ಅಂಬೋದು ? ಹೇಳು ಅದ್ಯಾವುದು ಆಗೋ ಮಾತು, ಹೋಗೋ ಮಾತು ?, ಹಾಳಾಗಿ ಹೋಗೋ ಮಾತು ?

ಸಾವಿತ್ರಮ್ಮ

(ಅಳುತ್ತ) ನಾನಂತು ಸಾಪು ಸಾಪು ಈ ಮನಾಗೆ ಇರೋದಿಲ್ಲ. ಅದೇನೋ ಅಂತಾರಲ್ಲ...ನೀವಾಗಿ ಪುಣ್ಯ ಕಟ್ಟಿಕೊಂಡು ನಡು ಊರಾಗೆ ಒಂದು ಮನಿ ಮಾಡಿದರೆ ಇರ್ತೀನಿ. ಇಲ್ಲದಿದ್ದರೆ ನನ್ನ ತೌರು ಮನೀಗೆ...... ಕಾಮನಕಟ್ಟೆ ಹತ್ತಿರ ಮನಿಗಳು ಅವಂತೆ, ಕಂಬಳಿಬಜಾರ, ಎತ್ತಿನ ಬಜಾರ, ಒಡಕರಾಯನ ಗುಡಿ ಹಿಂದೆ, ಎಲ್ಲಿ ಬೇಕೋ ಅಲ್ಲಿ ಅವೆ ಮನಿಗಳು ಬ್ರೂಟ್ಸ್ ಪೇಟೀ ಒಳಗೆ. ನನ್ನ ಪಾಲಿಗೆ ಎಲ್ಲೆ ಕಾದು ಕೂತಿತ್ತೋ ಅಂತೀನಿ—ಈ ಸುಡುಗಾಡು ಗಾಂಧಿನಗರ.

ಶಾಮಣ್ಣ

ಆತೇನು ನಿನ್ನ ಅಳೋದು ? ಹಾಗೇ ಮಾಡು ಮಾರಾಯಳೆ. ನಾಳೇ ಬಿಡತೀನಿ ಈ ಮನಿ. ಜನರ ಕಾಟ ಇಲ್ಲ, ಗಟಾರದ ವಾಸನಿ ಇಲ್ಲ, ಗಾಳಿ ಬೆಳಕು ಬೇಕಾದಷ್ಟು ಅವೆ ಅಂತ ಈ ದೂರದ ಮನೀಗೆ ಬಂದೆ. ಇದು ಯಾಕೆ ನಿನಗೆ ಸರೀ ಹೋದೀತು ? ನೀನೇ ಹೋಗಿ ಹುಡುಕಿಕೊಂಡು ಬಾ, ಯಾವ ನರಕಾಸುರ ನಗರ ಆದರೂ ಸರೀನೆ. ನಾನು ಎಷ್ಟು ಹೊತ್ತು ಇರತೀನಿ ಮನಿ ಒಳಗೆ ? ರಾತ್ರಿ ಒಂಭತ್ತರಿಂದ ಬೆಳಗಿನ ಒಂಭತ್ತರ ತನಕ ಹೌದಲ್ಲೋ... ಅನುಭವಿಸಿದರಾತು. ಮೂಗು, ಕಣ್ಣು, ಕಿವಿ, ಬಾಯಿ ಮುಚ್ಚಿಗೊಂಡು...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಮ್ಮ

ಹಾಗಾದರೆ ಊರಾಗ ಮನಿ ನೋಡಿ ಬರಲೇನ್ರೀ ?

ಶಾಮಣ್ಣ

ಈಗೇ ಹೊರಟೇನು ? ನಾಳೆ ಬೆಳಗಾಗ್ತದೆ, ದೇವರ ದಯದಿಂದ. ಆಗತ್ಯ ನೋಡಿ ಬಾ !

ಸಾವಿತ್ರಮ್ಮ

ಇರಲಿ ಏಳ್ರಿ ಊಟಕ್ಕೆ. ಅನ್ನ ಆರಿ ಅಂಗಾರ ಆಗ್ಯದೆ ಆಗಲೆ... ಆದೇನೋ ಅಂತಾರಲ್ಲ...

ಶಾಮಣ್ಣ

ಹೂಂ...ಅಂತಾರೇ ಅಂತಾರೆ. ಅಂಬೋ ಅವರದು ಏನು ಹೋದೀತು ಗುಟು ? ಹೂಂ ನಡಿ. ಒಂದಿಷ್ಟು ಅನ್ನ ಕಾಣಿಸು.

(೨ನೇ ದೃಶ್ಯ)

[ಶಾಮಣ್ಣನ ಹೊಸಮನೆ, ಸಾವಿತ್ರಮ್ಮನ ಆಶೆಯಂತೆ ಈಗ ನಡು ಊರಲ್ಲಿ. ಹಿಂದೆ ಸಂತೇಪೇಟೆ, ಮುಂದೆ ೫ನೇ ನಂಬರ ಮುನಿಸಿಪಲ್ ಗಂಡು ಮಕ್ಕಳ ಕನ್ನಡ ಪ್ರಾಥಮಿಕ ಶಾಲೆ, ಎಡಗಡೆ ಬಸ್‌ಸ್ಟ್ಯಾಂಡು ಟಾಂಗಾ ಕೂಟು. ಬಲಗಡೆ ಚಹಾದಂಗಡಿ, ಬೀಡಿ ಅಂಗಡಿ ಮುಂತಾದವು. ಶಾಮಣ್ಣ ಹೊರಕಟ್ಟೆಯ ಮೇಲೆ ನಿಂತಿದ್ದಾನೆ. ಆಗ ನೆರೆಹೊರೆಯ ಅನಂತಯ್ಯನ ಪ್ರವೇಶ]

ಅನಂತಯ್ಯ

ನಮಸ್ಕಾರ ರಾಯರೆ ! ಎದ್ದಿರಾ ?

ಶಾಮಣ್ಣ

(ಕೋಪದಿಂದ) ಇಲ್ಲ. ಗೊರಕೆ ಹೊಡಿತಿದ್ದೀನಿ.

ಅನಂತಯ್ಯ

(ಯಥಾರೀತಿಯ ಧ್ವನಿ) ಇಲ್ಲ ಗೊರಕೆ ಹೊಡಿತಿದ್ದೀನಿ ಅಂದಿರೇನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಯರೆ ? ಆಹ್ಹಾ, ಆಗಲೆ ಸ್ನಾನ ಕೂಡ ಆದಂತಿದೆ. ಎಲ್ಲಿಗೋ ಹೊರಟಿರಲ್ಲ ಇಷ್ಟು ಬೇಗ ?

ಶಾಮಣ್ಣ

ನಿಮ್ಮನ್ನೆ ಕಾಣಲಿಕ್ಕೆ ಹೊರಟಿದ್ದೆ...

ಅನಂತಯ್ಯ

ನಿಮ್ಮನ್ನೇ ಕಾಣಲಿಕ್ಕೆ ಹೊರಟಿದ್ದೆ ಅಂದಿರೇನು ರಾಯರೇ ? ಆಹ್ಹಾ, ನನ್ನ ಯಾಕೆ ಕಾಣಬೇಕಿತ್ತು ತಾವು ? ಏನಾದರೂ...

ಶಾಮಣ್ಣ

ಯಾತಕ್ಕೂ ಇಲ್ಲ. ಆದಿರಲಿ, ತಾವು ಏನು ದಯಮಾಡಿಸಿದ್ದು ?

ಅನಂತಯ್ಯ

ತಾವು ಏನು ದಯಮಾಡಿಸಿದ್ದು ಅಂದಿರೇನು ರಾಯರೆ ? ಆಹ್ಹಾ, ಏನೂ ಇಲ್ಲ. ಹಾಗೇ ಬಂದೆ ಅಷ್ಟೆ. ಮನೆ ಎಲ್ಲಾ ಅನುಕೂಲವಾಗಿದೆ ತಾನೇ...

ಸಾವಿತ್ರಮ್ಮ

(ಅಡುಗೆ ಮನೆಯಿಂದ ಬರುತ್ತ) ಯಾರು ಅದೂ ?...

ಅನಂತಯ್ಯ

ಆಚೆ ಮನೇನೇ ನನ್ನದು. (ಶಾಮಣ್ಣನಿಗೆ) ರಾಯರೆ! ಅಮ್ಮಾವರ ತಮಗೇನಾಗಬೇಕೋ ? ನಿಮ್ಮ ತಾಯಿಯವರು ಅಂತ ಕಾಣುತ್ತೆ. ಆದೇ... ...ಹೋಲಿಕೆ ಒಂದೇ ಇದೆ...ಆಗಲೇ...ನೀವು ಸಾಮಾನು ತರುವಾಗ ನೋಡಿದಾಗಲೇ ಅಂದ್ಕೊಂಡೆ. ಯಾಕೆ ಕೇಳಬೇಕು ಅಂತ ಕೇಳಲಿಲ್ಲ ಅಷ್ಟೆ...

ಶಾಮಣ್ಣ

ಈಗ ಮಾತ್ರ ಯಾಕೆ ಕೇಳಿದಿರಿ ?

ಸಾವಿತ್ರಮ್ಮ

ನನ್ನ ಎಜಮಾನ್ರಪ್ಪಾ ಅವರು.

ಅನಂತಯ್ಯ

ಈಗ ಮಾತ್ರ ಯಾಕೆ ಕೇಳಿದಿರಿ, ನನ್ನ ಎಜಮಾನ್ರಪ್ಪಾ ಅವರು ಅಂತ ಅಂದಿರೇನು...,ರಾಯರೆ ಮತ್ತು ಅಮ್ಮಾ ಅವರೆ ? ಆಹ್ಹಾ ! ಇಬ್ಬರಿಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದೇ ಮುಖ ಇತ್ತೊ...ಅದಕ್ಕೇ ಕೇಳಿದೆ—ರಾಯರು ಅಕ್ಕನ ಮಗಳನ್ನೇ ಮಾಡಿಕೊಂಡರೂ ಅಂತ ಕಾಣುತ್ತೆ.

ಶಾಮಣ್ಣ

ಒಂದೇ ಮುಖ ಅಲ್ಲದೆ ಎರಡು ಮುಖ ಇರ‍್ತಾವೇನ್ರೀ...ಅಕ್ಕನ ಮಗಳೂ ಅಲ್ಲ. ತಂಗೀ ಮಗಳೂ ಅಲ್ಲ. ಅದೆಲ್ಲಾ ಹಾಗಿರಲಿ......ನಿಮಗೇನು ?

ಅನಂತಯ್ಯ

ಆಹ್ಹಾ ! ನನಗೇನೂ ಇಲ್ಲ. ಸುಮ್ಮನೆ ಹಾಗೇ ಬಂದೆ ಅನ್ನಿ...... ಅಕ್ಕಪಕ್ಕದ ಮನೆಯವರು ಅಂದಮ್ಯಾಲೆ ವಿಚಾರಿಸಿಕೊಳ್ಳದೆ ಇರಲಿಕ್ಕೆ ಆಗುತ್ಯೇ ? ಎಲ್ಲಿ ರಾಯರೆ, ನಿಮ್ಮ ತಾಯಿತಂದೆ ಇಬ್ಬರೂ ಕಾಣುವುದಿಲ್ಲವಲ್ಲಾ...ಊರಲ್ಲಿಯೇ ಇದ್ದಾರೆಯೇ ?

ಶಾಮಣ್ಣ

ಅಹುದು. ಅಲ್ಲಿಗೇ ಹೋಗಿ ಅವರನ್ನು ನೋಡಿ ಬರ‍್ತೀರೇನು ?

ಅನಂತಯ್ಯ

ಅಲ್ಲಿಗೇ ಹೋಗಿ ನೋಡಿ ಬರ‍್ತೀರೇನು ಅಂತ ಅಂದಿರೇನು ರಾಯರೇ ? ಆಹ್ಹಾ ! ಹಾಗೇ ಕೇಳಿದೆ ಅನ್ನಿ...ಸಮಯ ಇದ್ರೆ ನೋಡಬಹುದು ಕೂಡಾ ಬಿಡಿ...ಯಾವ ಊರಲ್ಲಿ ಇದ್ದಾರೆಯೋ ?

ಶಾಮಣ್ಣ

ಸುಡುಗಾಡು.

ಅನಂತಯ್ಯ

ಸುಡುಗಾಡು ಅಂದರೇನು ರಾಯರೇ ? ಆಹ್ಹಾ ! ಸುಡುಗಾಡು ಅಂತ ಊರಿದೆಯೆ ? ಯಾವ ಜಿಲ್ಲೆ ಅದು ?

ಸಾವಿತ್ರಮ್ಮ

ಅವರ ಮಾತೇನು ಬಿಡ್ರಿ, ಅನಂತಯ್ಯ. ನನ್ನ ಅತ್ತೆ–ಮಾವ ಯಾರು ಇಲ್ಲ. ಅವರು ಆಗಲೇ ತೀರಿಕೊಂಡು ಬಹಳ ವರ್ಷಗಳಾದವು. ನಿಮ್ಮ ಮನೆಯಲ್ಲಿ ಯಾರ‍್ಯಾರು ಇದ್ದೀರಿ ? ನಿಮ್ಮ ಹೆಂಡತಿ...

ಅನಂತಯ್ಯ

(ನಡುವೆ ಬಾಯಿ ಹಾಕಿ) ನಿಮ್ಮ ಹೆಂಡತಿ ಅಂದರೇನು ಅಮ್ಮಯ್ಯ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಹ್ಹಾ ! ಅವಳು ಹೋಗಿ ಬಹುಕಾಲ ಆಯಿತು ಅನ್ನಿ. ಎಲ್ಲಿ ತಾಯೀ... ಮಕ್ಕಳ ಸುಳಿವೇ ಇಲ್ಲವಲ್ಲಾ...ಶಾಲೆಗೆ ಹೋದರೋ ಆಗಲೇ ?...

(ಸಾವಿತ್ರಮ್ಮ ಸರಕ್ಕನೆ ಅಡುಗೆ ಮನೆಗೆ ಹೋಗುವಳು.)

ಶಾಮಣ್ಣ

ಸ್ವಾಮೀ...ಅನಂತಯ್ಯ ! ಇಲ್ಲೆ ಬರ್ರಿ, ನಾನೆಲ್ಲಾ...ಹೇಳ್ತೀನಿ... ನನಗಿನ್ನೂ ಮಕ್ಕಳು ಆಗಿಲ್ಲ. ಮುಂದಾದರೂ ಆಗ್ತವೋ ಇಲ್ಲೋ ಗೊತ್ತಿಲ್ಲ...ಆದರೆ ಎಷ್ಟು ಆಗ್ತಾವೆ, ಅದರೊಳಗೆ ಗಂಡು ಎಷ್ಟು, ಹೆಣ್ಣು ಎಷ್ಟು, ಆ ಗಂಡುಮಕ್ಕಳು ಎಷ್ಟೆಷ್ಟು ಓತ್ತಾವೆ, ಏನೇನು ಕೆಲ್ಸ ಮಾಡ್ತವೆ, ಆ ಹುಡುಗಿಯರಿಗೆ ಎಂದೆಂದು ಲಗ್ನ, ಯಾರ್‍ಯಾರಿಗೆ, ಅವರಿಗೆ ಎಷ್ಟೆಷ್ಟು ಮಕ್ಕಳು ಇದೆಲ್ಲ ವಿಷಯ ನಿಮಗೆ ಈ ತಕ್ಷಣ ಬೇಕೇಬೇಕೇನು ?

ಅನಂತಯ್ಯ

ಇದೆಲ್ಲ ವಿಷಯ ಈ ತಕ್ಷಣ ಬೇಕೇ ಬೇಕೇನು ಎಂದಿರೇನು ರಾಯರೇ ? ಆಹ್ಹಾ ! ಇಲ್ಲಾ...ಒಳ್ಳೇ ಬಟ್ಟೆ ಹಾಕ್ತೀರಿ ಸ್ವಾಮಿ ನೀವೂನೂ...ಈ ಪ್ಯಾಂಟು ಬಹಳ ಚೆನ್ನಾಗಿದೆ...ನಿಮ್ಮದೇನಾ ಇದೂ ?

ಶಾಮಣ್ಣ

ಯಾವುದು, ಈ ಪ್ಯಾಂಟು. ತೊಟ್ಟಿರೋದೆ...ನನ್ನದೇ ಹೌದೋ ಅಲ್ಲೋ ಅಂತಾನೇ...ನೀವು ಕೇಳೋದು...ಅಲ್ಲ, ನನ್ನದಲ್ಲ – ನನ್ನ ಹೆಂಡ್ತೀದು.

ಅನಂತಯ್ಯ

ಅಲ್ಲ – ನನ್ನದಲ್ಲ – ನನ್ನ ಹೆಂಡ್ತೀದು ಅಂತ ಅಂದಿರೇನು ರಾಯರೇ ? ಆಹ್ಹಾ ! ಪಾಪ ! ಅಮ್ಮಾ ಅವರು ಏನು ಮಾಡಿಯಾರು ಪ್ಯಾಂಟು ತೆಗೆದು ಕೊಂಡು......ಈ ರೇಡಿಯೋ ಇದೆಯಲ್ಲ ಸ್ವಾಮಿ, ಇದನ್ನು ತಾವು ಕಂತಿನ ಮೇಲೆ ಕೊಂಡಿರೇನು ? ಅಥವಾ...

ಸಾವಿತ್ರಮ್ಮ

(ಒಳಗಿನಿಂದ ಬಂದು) ಇಲ್ರೆಪ್ಪಾ. ಅದು ನನ್ನ ಅಕ್ಕ ಕೊಡಿಸಿದ್ದು – ಅವರ ಸಂಬಳದಾಗಿನ ಒಂದು ದುಡ್ಡೂ ಕೊಟ್ಟಿಲ್ಲ – ಅವರು...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಂತಯ್ಯ

ಅವರ ಸಂಬಳದಾಗಿನ ಒಂದು ದುಡ್ಡೂ ಕೊಟ್ಟಿಲ್ಲ ಅವರು ಎಂದಿರೇನು ಅಮ್ಮಯ್ಯಾ? ಆಹ್ಹಾ! ಅಪುದು ಮರೆತೇಬಿಟ್ಟೆ ರಾಯರೆ, ನಿಮಗೆ ಸಂಬಳ ಎಷ್ಟು ಸಿಗುತ್ತೆ ಸ್ವಾಮಿ?

ಶಾಮಣ್ಣ

ತುಟ್ಟಿ ಭತ್ತೆ, ಮನೆ ಬಾಡಿಗೆ, ಇತರ ಎಲ್ಲಾ ಅಲೆವೆನ್ಸೂ ಸೇರಿಸಿ ಹೇಳ ಬೇಕೋ. ಮ್ಯಾಲೆ ಏನಾದ್ರೂ ಸಿಗ್ತದೋ, ಇಲ್ಲೋ, ಸಿಗೋದಾದರೆ ಎಷ್ಟು? ನೀವು ಮನಾಗೆ ಎಷ್ಟು ಕೊಡ್ತೀರಿ, ಎಲ್ಲಾನೂ ಹೆಂಡತಿಗೇ ಕೊಟ್ಟು ಆ ಮ್ಯಾಲೆ ಹಲ್ಲು ಕಿಸೀತೀರೇನು? ಇದೆಲ್ಲಾ ಸಮಾಚಾರ ಈಗಲೇ ನಿಮಗೆ ಬೇಕೇ ಬೇಕೇನು?

ಅನಂತಯ್ಯ

ಇದೆಲ್ಲಾ ಸಮಾಚಾರ ಈಗಲೇ ನಿಮಗೆ ಬೇಕೇ ಬೇಕೇನು ಅಂದಿರೇನು, ರಾಯರೇ? ಆಹ್ಹಾ! ಬೇಡ ಬೇಡ.. ಅಲ್ಲ ರೇಡಿಯೋ ಇಟ್ಟಿದೀರಲ್ಲಾಂತ... ನಿಮಗೆ ಸಂಗೀತದ ಪರಿಚಯವಿದೆಯೇ ಸಾರ್?

ಶಾಮಣ್ಣ

ಇದೆ ಅನಂತಯ್ಯ. ಕೊಂಚ, ತಕ್ಕಮಟ್ಟಿಗೆ...

ಅನಂತಯ್ಯ

ತಕ್ಕಮಟ್ಟಿಗೆ ಅಂದಿರೇನು ಸ್ವಾಮೀ? ಆಹ್ಹಾ! ಅಮ್ಮಾಅವರಿಗೆ......

ಸಾವಿತ್ರಮ್ಮ

ಏನೋ ಹೇಳ್ತಾ ಇದ್ದಾರಲ್ಲಪ್ಪ ಅನಂತಯ್ಯ, ನಾಪು ಒಳಗೆ ಇದ್ದೀನಿ ಅಂತ. ಏನಂತೆ? ನನಗೇನೂ ಸಂಗೀತ ಬರೋದಿಲ್ಲ ಅಂತ ತಾನೇ ಅವರ ದೂರು! ಕಲಿಸಿದರೇನೋ ಕೇಳು ಅವರನ್ನೇ.

ಅನಂತಯ್ಯ

ಕಲಿಸಿದರೇನೋ ಕೇಳು ಅವರನ್ನೇ ಎಂದಿರೇನು ತಾಯಿ? ಆಹ್ಹಾ! ಸಂಗೀತ ಕಲಿಯದೆ ಅದಾವ ಹೆಣ್ಣಿಗೆ ತಾನೇ ಲಗ್ನವಾಗುತ್ತಮ್ಮಾ? ಏನೂ ಇಲ್ಲ ಅಂದ್ರೂನೂ ಲಂಬೋದರ ಆದ್ರೂನೂ ಮಾಡಿಯೇ ಇರ್ತಾರೆ ಅಮ್ಮಯ್ಯ ...ಅದೇಕೆ ಸ್ವಾಮಿ, ನಿಮ್ಮ ಮನೆಯಲ್ಲಿ ಚರಖಾ ಇದ್ದಂತಿಲ್ಲವಲ್ಲಾ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಮಣ್ಣ

ಸರಿ! ಅದೊಂದೇ ಸಂಭ್ರಮ ಬಾಕಿ ನನಗೆ ಅನ್ನು ಅನಂತಯ್ಯ... ಇನ್ನೊಂದು ವಿಷಯ...

ಅನಂತಯ್ಯ

ಇನ್ನೊಂದು ವಿಷಯ ಎಂದಿರೇನು ರಾಯ್ರೇ? ಆಹ್ಹಾ? ನಾನೂ ಅದನ್ನೇ ಕೇಳಬೇಕೆಂದಿದ್ದೆ ಆಗಲೆ. ರಾಮನಕಿಂತಲೂ ಕೃಷ್ಣ ದೊಡ್ಡವನೋ ಅಥವಾ ಚಿಕ್ಕವನೋ? ಏಕೆಂದರೆ ನೋಡಿ......

ಶಾಮಣ್ಣ

ಇಲ್ಲಿ ನೋಡು ಅನಂತಯ್ಯ. ರಾಮ ದೊಡ್ಡವನೋ ಕೃಷ್ಣ ದೊಡ್ಡವನೋ ನನಗೇನೂ ಗೊತ್ತಿಲ್ಲ...ಆದರೆ ಇಷ್ಟು ಮಾತ್ರ ನಿಜ! ರಾಮ ಕೃಷ್ಣ ಇಬ್ಬರಕಿಂತಲೂ ನೀನಂತೂ ಬಹಳ ದೊಡ್ಡವನು. ಆಯಿತು— ನನಗೇ......

ಸಾವಿತ್ರಮ್ಮ

ಮತ್ತೇಕೆ ಹೊರಗೆ ಹೋಗ್ತೀರಿ? ಅಡುಗೆ ಎಲ್ಲ ಸಿದ್ಧ ಆಗಿದೆ. ಹೇಗೂ ಅನಾಯಸ ಆಚೆ ಮನೆ ಅನಂತಯ್ಯ ಕೂಡ ಬಂದಿದಾರೆ. ಇಬ್ಬರೂ ಊಟ ಮುಗಿಸೇ ಹೊರಡಿ,

ಅನಂತಯ್ಯ

(ಅಡುಗೆ ಮನೆಯಲ್ಲಿ ಕಾಲಿಕ್ಕುತ್ತ) ಊಟ ಮುಗಿಸೇ ಹೊರಡಿ ಅಂದಿರೇನು ಸಾವಿತ್ರಮ್ಮ.. ಆಹ್ಹಾ! ಇದೇನು ಅಮ್ಮಯ್ಯಾ! ಅಬ್ಬಬ್ಬಬ್ಬ ಇಷ್ಟು ಅಡುಗೆ ಮಾಡಿದೀರಾ?

ಸಾವಿತ್ರಮ್ಮ

ಇವತ್ತು ನಮ್ಮ ಮನ್ಯಾಗೆ......

ಅನಂತಯ್ಯ

ಇವತ್ತು ನಮ್ಮ ಮನೆಗೆ ಸತ್ತವರ ಶ್ರಾದ್ಧ ಅಂದಿರಾ?

ಶಾಮಣ್ಣ

(ಸಿಟ್ಟಿನಿಂದ) ಸತ್ತವರದು ಅಲ್ಲ ಅನಂತಯ್ಯ...ಇರುವವರದೇ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿತ್ರಮ್ಮ

ಬಿಡ್ತು ಅನ್ನಿ ಅನಂತಯ್ಯ, ಲಕ್ಷಣವಾಗಿ ಸತ್ಯನಾರಾಯಣ ಮಾಡಿದ್ದೇವೆ. ನಡು ಊರಲ್ಲಿ ಒಳ್ಳೆ ನೆರೆ-ಹೊರೆ ಇದ್ದ ಮನೆ ಸಿಕ್ತು ಅಂತ. ಶ್ರಾದ್ಧ ಅಂತೀರಲ್ಲಾ......

ಶಾಮಣ್ಣ

ಇದೇ ಮನೆಯಲ್ಲಿ ಇನ್ನೂ ಕೆಲವು ದಿವ್ಸ ಇದ್ರೆ...ಅದೂ ಆಗ್ತದೆ ಅಷ್ಟೆ.

(ಮಾರನೆಯ ದಿನ ಬೆಳಗಿನ ಜಾವದಲ್ಲಿ ಶಾಮಣ್ಣ–ಸಾವಿತ್ರಮ್ಮ ಗಾಡಿಗೆ ಸಾಮಾನುಗಳನ್ನು ತುಂಬುತ್ತಿದಾರೆ)

ಶಾಮಣ್ಣ

ನೋಡಿ ಬಾರೆ ಒಳಗೆಲ್ಲ...ಇನ್ನೂ ಏನಾದರೂ ಉಳಿದಿವೆಯೋ ಏನೋ......

ಸಾವಿತ್ರಮ್ಮ

ಏನೂ ಇಲ್ಲ ನಡೀರಿ......

ಅನಂತಯ್ಯ

(ಅಕಸ್ಮಾತ್ ಬಂದು) ಓಹೋ ನಮಸ್ಕಾರ! ಇದೇನು ರಾಯರೇ... ಸಾಮಾನು ಸರಂಜಾಮು ಎಲ್ಲಾ ಸಾಗಿಸುತ್ತಿದ್ದೀರಲ್ಲಾ...ಎಲ್ಲಿಗೆ?

ಸಾವಿತ್ರಮ್ಮ

ಮೊದಲಿದ್ದ ಮನೆಗೆ ಹೋಗ್ತೀವಿ ಅನಂತಯ್ಯ. ಈ ಮನೆ ಬಿಟ್ಟೆವು...

ಅನಂತಯ್ಯ

ಈ ಮನೆ ಬಿಟ್ಟೆವು ಅಂದಿರಾ ಅಮ್ಮಯ್ಯ? ಆಹ್ಹಾ! ನೆರೆಹೊರೆ ಬೇಕು ಎಂದು ಬಂದಿರಿ ಈ ಮನೆಗೆ!

ಶಾಮಣ್ಣ

ಏನು ಮಾಡಬೇಕು ಅನಂತಯ್ಯ. ನೆರೆಯೋ...ಹೊರೆಯಾಯ್ತಲ್ಲಾ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾನೇ ಧರ್ಮದೇವತೆ ಆಗಿದ್ದರೆ?

ನಾನೇ ಧರ್ಮದೇವತೆ ಆಗಿದ್ದರೆ ಏನು ಮಾಡುತ್ತಿದ್ದೆ ಗೊತ್ತೆ ? ಕಟ್ಟ ಕಡೆಯದನ್ನು ಮೊಟ್ಟಮೊದಲು ಮಾಡಿಬಿಡುತ್ತಿದ್ದೆ, ಅಷ್ಟೆ.

ಕಟ್ಟಕಡೆಯದು ಅಂದರೆ ? ಸಾಯುವುದು.

ಸಾವಿನಲ್ಲಿಯೂ ಎರಡು ಬಗೆ—ಕೊಲ್ಲಿಸಿಕೊಂಡು ಸಾಯುವುದು, ಹಾಯಾಗಿ ತಾನೇ ಕೊಂದುಕೊಳ್ಳುವುದು. ಈ ಎರಡನೆಯದನ್ನು ದಡ್ಡರು 'ಆತ್ಮಹತ್ಯೆ' ಎಂದು ಕರೆಯುತ್ತಾರೆ. ಆತ್ಮಕ್ಕೆ ಸಾವೇ ಇಲ್ಲವೆಂದು ಒಂದೇ ಸಮನೆ ಶಂಖ ಹೊಡೆದಿಲ್ಲವೇ ಶ್ರೀಕೃಷ್ಣ ಗೀತೆಯಲ್ಲಿ ? ಇನ್ನು ಆತ್ಮವು ಹತ್ಯ ವಾಗುವುದೆಲ್ಲಿ ಬಂತು ? ಕೊಲ್ಲುವುದೂ ಅದು ಅಲ್ಲ, ಕೊಲ್ಲಿಸಿಕೊಳ್ಳುವುದೂ ಅಲ್ಲ.

ಇದು ಪಾಪವಲ್ಲವೆ, ಸ್ವತಃ ಕೊಂದುಕೊಳ್ಳುವುದು ?

ಅಹುದು, ಇದು ಪಾಪ. ಅವರಿವರ ಕೈಯಿಂದ ಕೊಲ್ಲಿಸಿಕೊಳ್ಳುವುದು ಮಾತ್ರ ಮಹಾಪುಣ್ಯವೊ ? ಒಂದು ಸ್ವಂತ ಮನೆ, ಇನ್ನೊಂದು ಬಾಡಿಗೆ ಮನೆ ! ಈ ಎರಡೂ ಸರಿಯಲ್ಲ ಧರ್ಮದೇವತೆಗೆ, ಈ ಮಾತನ್ನು ತಪ್ಪದೆ ಒಪ್ಪಿ ಕೊಳ್ಳುತ್ತೇನೆ.

ಈ ಸಾವಿನಲ್ಲಿಯೂ ಒಂದು ಅದ್ಭುತ ಸ್ವಾರಸ್ಯವಿದೆ. ಜೀವನದ ಆರಂಭಕ್ಕೆ, ಅಥವಾ ಇನ್ನೆಲ್ಲಿಯೋ ಮಧ್ಯದಲ್ಲಿಯೊ ಇದನ್ನಿಡದೆ, ದೇವರು ಇದನ್ನು ಕಟ್ಟಕಡೆಗೆ ಇಟ್ಟಿರುವುದೂ ಒಂದು ಮೋಜಿನ ಸಂಗತಿಯೇ ! ಏನನ್ನುತ್ತೀರಿ ?

ಕಡೆಯ ಕಾರ್ಯಕ್ರಮವಾದ ಸಾವನ್ನು ಆರಂಭದಲ್ಲಿಯೇ ಅಪ್ಪಿಕೊಂಡರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಮೇಲೇನಿದೆ ? ಸಾವಿನ ಆಮೇಲೆ ಏನಿದೆ, ಅಥವಾ ಏನಾದರೂ ಇದೆಯೋ ಇಲ್ಲೋ ಇಲ್ಲವೊ ಎಂಬುದು ಗೊತ್ತಿಲ್ಲದುದರಿಂದಲೋ ಏನೊ, ಎಲ್ಲರೂ ಸಾವಿಗೆ ಅಂಜಿ ಸಾಯುಸ್ತಾರೆ. ಅರಿಯದಿದ್ದುದರ ಬಗ್ಗೆ ಅಂಜುವುದೇ ಒಳ್ಳೆಯದಿರ ಬಹುದು. ಹೋಗಲಿ ಬಿಡಿ, ನಮಗೇಕೆ ಬೇಕು ? ಅಥಾತೊ ಮೃತ್ಯು ಜಿಜ್ಞಾಸಃ? ಬದುಕಿರುವ ನಾವು ಬದುಕಿನ ಬಗ್ಗೆ ಚಿಂತಿಸೋಣ. ಸಾವಿನ ಬಗ್ಗೆ ಸತ್ತವರು ಯೋಚಿಸಲಿ.

ಇಂದು ನಮ್ಮಲ್ಲಿ ಅನೇಕರು ಏಕೆ ಬದುಕಿದ್ದಾರೆ ಗೊತ್ತೆ ? ಇನ್ನೂ ಸತ್ತಿಲ್ಲ ವೆಂಬುದೇ ಏಕಮಾತ್ರ ಕಾರಣ ! ಹೀಗೆ ಬದುಕಿದರೂ ಬಂತೆ ? ಧರ್ಮದೇವ ತೆಯೂ ಹೀಗೆ ಬದುಕುವುದೇ ? ಸಾಯದವರೆಲ್ಲರೂ ಬದುಕಿಯೇ ಇರುತ್ತಾರೆ. ಬದುಕಿರುವವರಲ್ಲಿ ಬಾಳಿರುವವರು ? ಹೇಗೋ ಬದುಕಿದ್ದರೇನು ಬಂತು ? ಬಾಳುವುದು ಮುಖ್ಯ. ಧರ್ಮದೇವತೆ ಬದುಕಿರಬಾರದು. ಭದ್ರವಾಗಿ ಬಾಳಬೇಕು. ಆಳಬೇಕು.

ಆದರೆ ಧರ್ಮಕ್ಕೆ 'ಸ್ವಯಂ' ಎಂಬುದೇ ಇಲ್ಲವಲ್ಲ ? ಧರ್ಮೋ ರಕ್ಷತಿ ರಕ್ಷಿತಃ ಎಂದು ಪರಾವಲಂಬನೆಯ ಮೇಲೆಯೇ ಪ್ರಾಣ ಹಿಡಿದಿದೆ—ನೀನು ನನ್ನನ್ನು ರಕ್ಷಿಸು. ನಾನು ನಿನ್ನನ್ನು ರಕ್ಷಿಸುತ್ತೇನೆ ? ವ್ಯಾಪಾರದ ಮಾತಾಯಿತು ಇದು. ಸ್ವತಂತ್ರವಾಗಿ ರಕ್ಷಣೆ ಮಾಡಿಕೊಳ್ಳಬಲ್ಲ ಮಹಾ ಪರಾಕ್ರಮಿ ಈ ಮಾತನ್ನು ಅದೇಕೆ ಆಡುತ್ತಾನೆ ? ಅದಲ್ಲ ಕಾರಣ ; ಅವರಿವರನ್ನು ರಕ್ಷಿಸ ಬೇಕೆಂಬ ಮಾನವೀ ಮೋಹ ಈ ದೇವಿಗೆ. ಇದಕ್ಕಾಗಿಯೇ ಮತ್ತೆ, ಧರ್ಮ ದೇವತೆ ಎಂದು ಹೆಸರು ಬಂದುದು—ಇಲ್ಲವಾದರೆ ಇದು ಎಂದೋ ಯಮ ಧರ್ಮ. ದೇವತೆ ಆಗಬೇಕಿತ್ತು.

ನಾನೇ ಧರ್ಮದೇವತೆ ಆಗಿದ್ದರೆ—ಸಾಯುವುದು ಸರಿಯಲ್ಲ, ಬರೀ ಬದುಕಿದ್ದರೂ ಸಾಲದು, ಸುಭದ್ರವಾಗಿ ಬಾಳಬೇಕು ಎಂಬುದನ್ನೆಲ್ಲ ಒಪ್ಪಿ ಕೊಂಡ ಮೇಲೆ—ಏನು ಮಾಡುತ್ತಿದ್ದೆ ? ಸವತಿಯಾದ ಅಧರ್ಮ ದೇವತೆ ಯೊಂದಿಗೆ ಸಹಜೀವನ—ಒನ್–ಬೈ–ಟು ಬೇಸಿಸ್ ಮೇರೆಗೆ ನಡೆಸಲಂತೂ ಸಾಧ್ಯವಿಲ್ಲವಲ್ಲ ? ಮೊಟ್ಟಮೊದಲು ಅಧರ್ಮವನ್ನು ನಿರ್ಮೂಲ ಮಾಡಬೇಕು. ಹೇಗೆ ?

ಇಂದು ನಮ್ಮ ದೇಶದಲ್ಲಿಯ ಬಡತನವೆಲ್ಲವನ್ನೂ ನಿರ್ಮೂಲ ಮಾಡಲು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

‘ಆತ್ಮಕ್ಕೆ ಸಾವೇ ಇಲ್ಲ’

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರುವುದು ಒಂದೇ ಉಪಾಯ—ಎಲ್ಲ ಬಡವರನ್ನು ಹಿಡಿದು ಸಾಲಾಗಿ ಕೊಲ್ಲ ಬೇಕು! ಈ ಬಡವರೇ ಅಲ್ಲವೆ, ಬಡತನವಿರುವುದಕ್ಕೆ ಕಾರಣ? ಬಾಲವೇ ಇದ್ದಿರದಿದ್ದರೆ ನಾಯಿ ಎಲ್ಲಿರುತ್ತಿತ್ತು? ಈ ಲಾಂಗೂಲ-ಶುನಕನ್ಯಾಯ ತತ್ವದ ಪ್ರಕಾರ ಅಧರ್ಮಿಗಳೆಲ್ಲರನ್ನೂ ಮುಗಿಸಿಬಿಟ್ಟರೆ ಉಳಿಯುವುದು ಧರ್ಮವು ಒಂದೇ. ಆದರೆ ಇಲ್ಲಿ ಒಂದೇ ಒಂದು ತೊಡಕು, ಇದು ಧರ್ಮವೇ? ಧರ್ಮದ ಹೆಸರಿನಲ್ಲಿ ಇನ್ನೊಬ್ಬನನ್ನು ಕೊಲ್ಲುವವನು ಮೊದಲು ಧರ್ಮವನ್ನೆ ಕೊಲ್ಲು ತ್ತಾನೆ ಎಂದು ಎಲ್ಲಿಯೋ ನಾನೇ ಬರೆದಂತೆ ನೆನಪಿದೆ. ಈ ಧರ್ಮ ಸಂಕಟ ಗಳಿಂದ ಪಾರಾಗಲು ಗೊತ್ತಿಲ್ಲವೆಂದೇ ನಾನು ಒಪ್ಪಲಿಲ್ಲ ಧರ್ಮದೇವತೆ ಯಾಗಲು.

ಈಗ ಹಾಲಿ ಧರ್ಮದೇವತೆಯಾಗಿರುವ ಪ್ರಾಣಿಯ ಗತಿ ಏನಾಗಿದೆ? ಪಾಪ ಪಾಪ! ಅದೇ ಧರ್ಮದೇವತೆ ಮೊನ್ನೆ ತಾನೆ ತಿಂಮನಿಗೆ ಬರೆದಿರುವ ಈ ಪತ್ರವನ್ನು ಓದಿ ನೋಡಿ; ಧರ್ಮಾಧರ್ಮಗಳನ್ನು ಚೆನ್ನಾಗಿ ಅರಿತು, ಅಭ್ಯಸಿಸಿ, ಆಚರಿಸಿದ ಪ್ರಭುಗಳು ತಾವು!..

ಪ್ರಿಯಾಧರ್ಮಿ ತಿಂಮಾ!

ನನ್ನ ಐದಾರು ಪತ್ರಗಳಿಗೂ ನಿನ್ನಿಂದ ಒಂದೂ ಉತ್ತರವಿಲ್ಲ. ಇದು ಧರ್ಮವೇ? ಖಟ್ಟಾ ಮತ್ತು ಹುಟ್ಟಾ ಅಧರ್ಮಿಯಾದ ನಿನ್ನಿಂದ ಧರ್ಮವನ್ನು ಅಪೇಕ್ಷಿಸುವುದು ಧರ್ಮದೇವತೆಯಾದ ನನಗೇ ಧರ್ಮವಲ್ಲ. ಹೋಗಲಿ ಬಿಡು, ಅದು ನನ್ನ ಕರ್ಮ.

ಈ ಧರ್ಮದೇವತೆಯ ಪಟ್ಟವು ಬೇಕೆಂದು ನಾನೇನು ಕೇಳಿಕೊಂಡೆನೆ? ಅರ್ಜಿ ಗುಜರಾಯಿಸಿದ್ದೆನೆ? ಆ, ಈ ಪುಂಡ ಪೋಕರಿಗಳಿಂದ ಹೇಳಿಸಿದೆನೆ? ನಿನ್ನ ಮಾತಿಗೆ ಮರುಳಾಗಿ ಮೋಸ ಹೋಗಿ ನಿಜವಾಗಿಯೂ ಕೆಟ್ಟೆ.

ನೀನೇ ಧರ್ಮದೇವತೆಯಾಗೆಂದು ನಾನು ಅದೆಷ್ಟೊ ಆಗ್ರಹ ಮಾಡಿದೆ. ಆದರೆ ನೀನದಕ್ಕೆ ಒಪ್ಪಲಿಲ್ಲ. ನನಗೆ ಆ ಕೆಲಸವಿದೆ ಈ ಕೆಲಸವಿದೆ, ಅಲ್ಲಿಗೆ ಹೋಗಿ ಇದನ್ನು ಮಾಡಬೇಕು—ಇಲ್ಲಿಗೆ ಬಂದು ಅದನ್ನು ಮಾಡಬೇಕು, ಲಂಗು—ಲಟ್ಟು ಎಂದು ಏನೇನನ್ನೊ ಹೇಳಿಕೊಂಡು ಸುಖವಾಗಿ ಜಾರಿ, ನನ್ನನ್ನು ಮಾತ್ರ ಈ ಧರ್ಮಕೂಪದಲ್ಲಿ ದೂಡಿದಿ.

ನಿನ್ನಂತೆ ನಾನೂ ಒಲ್ಲೆ ಅಂದೆ. 'ಇದು ಪ್ರಜಾಪ್ರಭುತ್ವದ ಯುಗ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ವರು ಸೇರಿ ಒಪ್ಪಿ ಮಾಡಿದುದನ್ನು ಐದನೆಯವನು ಮಾಡಿಸಿಕೊಳ್ಳುವುದು ಧರ್ಮ' ಎಂದು ಹೇಳಿ, ನನ್ನಿಂದ ಹೂಂ ಅನ್ನಿಸಿದಿ. ಈಗ ? ಅದೇ ನಾಲ್ಕು ಮಂದಿ ನನ್ನನ್ನು ಕಟ್ಟಿ ಹೊತ್ತೊಯ್ಯುತ್ತಿದ್ದಾರೆ. ನೀನು ಮಾತ್ರ ಹಾಯಾಗಿ ಬೆಂಗಳೂರಿನಲ್ಲಿ ಕುಳಿತಿರುವಿ, ಕಾದಂಬರಿಗಳನ್ನು ಹೊಸೆಯುತ್ತ. ಇದು ನಿನಗೆ ಧರ್ಮವೇನಯ್ಯ ? ಅಹುದು ಮರೆತೆ, ನಿನಗೂ ಧರ್ಮಕ್ಕೂ ದೂರ ದೂರ !

ನನ್ನ ಗತಿ ಏನಾಗಿದೆ ನೋಡು. ನನಗೆಲ್ಲವೂ ಉಂಟು—ಇಷ್ಟುದ್ದದ ಹೆಸರು, ಕೀರ್ತಿ, ಗೌರವ, ಪದವಿ. ಧರ್ಮದೇವತೆ ! ಇರಲು ಮಾತ್ರ ಒಂದು ಚದುರಂಗುಲವೂ ಎಡೆ ಇಲ್ಲದಾಗಿದೆ. ಎಲ್ಲಿರಲಿ, ನೀನೇ ಹೇಳು.

ರಾಜಕಾರಣದಲ್ಲಿರಲೆ ? ಅಲ್ಲಿಯ ಆ ಹೊಗೆಯೇ ಸಾಕು. ಉಸಿರಾಡಲು ಆಸ್ಪದ ಕೊಡದೆ ಕೊಲ್ಲುತ್ತದೆ. ಅಧಿಕಾರ ? ಸರಿ, ಆಗದವರ ಮನೆಗೆ ಕರೆಯಿಸಿ ಕೊಳ್ಳದೆ ಹೋದವರ ಗತಿಯೇ ನನಗೂ. ಗುಡಿ, ಗುಂಡಾರ ? ಗೂಂಡಾಗಳು ಗುಡಿಯಲ್ಲಿ, ದೇವನೇ ಪರಾರಿ. ದೇವರನ್ನು ಹುಡುಕುವವನು ಮೊದಲು ಗುಡಿಯಿಂದ ಹೊರಬೀಳಲಿ ಎಂದದಾರೋ ಹೇಳಿರಲಿಲ್ಲವೆ ? ನೀನೇ ಹೇಳಿದ್ದೆಯೋ ? ಆ ಮಾತು ಅಕ್ಷರಶಃ ನಿಜವಾಗಿದೆ ಈಗ ; ನನಗೆಲ್ಲಿಯೂ ಸ್ಥಳವಿಲ್ಲವೆಂಬುದು ಮನದಟ್ಟಾಗಿ ಧರ್ಮದೇವತೆಯಾದ ನಾನು ಧರ್ಮಛತ್ರಕ್ಕೆ ಬಂದೆ ಕಟ್ಟಕಡೆಗೆ. ಅಲ್ಲಿಯೂ ಅಷ್ಟೇ-ಧರ್ಮದ ಹೊರತು ಬೇರೆಲ್ಲವೂ ಇದೆ. ಧರ್ಮಛತ್ರದಲ್ಲಿ ಧರ್ಮವೇಕೆ ಇರಬೇಕು ? ಮೈಸೂರು ಬೋಂಡಾದಲ್ಲಿ ಮೈಸೂರು ಇದೆಯೆ ? ಬೊಂಬಾಯಿ ಚಟ್ಟಣಿಯಲ್ಲಿ ಬೊಂಬಾಯಿ ಇದೆ ಏನು ? ಆದ ಕಾರಣ ಧರ್ಮಛತ್ರವೂ ಬೇಡೆಂದು ಅಲ್ಲಿಂದಲೂ ಹೊರಟು ನಿನ್ನಲ್ಲಿ ಮೊರೆ ಇಡಲು ಬಂದಿದ್ದೇನೆ.

ಇದರ ಅರ್ಥ ನಿನ್ನಲ್ಲಿ ಇರುತ್ತೇನೆಂದಲ್ಲ, ಅಯ್ಯಯ್ಯೊ ! ನೀನು ನನಗೆ ಗಳಿಗೆಯಲ್ಲಿಯೇ ವಿಷಪ್ರಾಶನ ಮಾಡಿಸಿ ಮುಗಿಸಿಯೇ ಬಿಡುತ್ತೀ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಆದರೆ ನಿನ್ನಿಂದ ನನಗೊಂದು ಉಪಕಾರವಾಗ ಬೇಕಾಗಿದೆ.

ಮೊನ್ನೆ ಆದಾರೊ ಕೈಯಲ್ಲಿ ಕಂಡೆ, ನಿನ್ನ ತಿರುವು ಮುರುವು ಅಕ್ಷರಗಳ ತಿವ್ಮಿಕ್‌ಷ್ನರಿ—ತಿಂಮ ರಸಾಯನ ! ಧರ್ಮಕ್ಕೆ ಸಿಕ್ಕಿತೆಂದು ಓದಿದೆ—ಧರ್ಮ ದೇವತೆಯಲ್ಲವೆ ? ಹಾಗೆಯೇ ನಾಲ್ಕಾರು ಪುಟಗಳನ್ನು ನೋಡಿದೆ. ಆಹಾಹಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನ್ನ ತಲೆಯಂತೆಯೇ ಇದೆ ಅದೂ! ಧರ್ಮ ಎನ್ನುವ ಶಬ್ದಕ್ಕೆ ಏನಿದೆ ನಿನ್ನ ವಿವರಣೆ ?

ಧರ್ಮಕ್ಕಾಗಿ ಸಾಯುವವರು ಧಾರಾಳವಾಗಿ ಇದ್ದಾರೆ. ಧರ್ಮದಿಂದ ಬಾಳುವವರು ಬೇಕು! ಬಹು ಚೆನ್ನಾಗಿದೆ ಈ ಮಾತು.

ಧರ್ಮದೇವತೆಯಾದ ನಾನು ಈ ಲೋಕದಲ್ಲಿಯೂ ನಿಲ್ಲಲು ಎಡೆ ಇಲ್ಲದೆ ನಿನ್ನಲ್ಲಿ ಬಂದಿದ್ದೇನೆ, 'ಪಾಹಿ ಮಾಂ ಪಾಹಿ' ಎಂದು. ನನಗೆ ನೀನೇ ಗತಿ—ಅಲ್ಲ ಅಲ್ಲ. ನಿನ್ನ ತಿಮ್ಮಿಘಂಟೆ ಗತಿ!

ಅಯ್ಯಾ! ಧರ್ಮಾತೀತನಾದ ತಿಂಪಮನೆ! ತಲೆಕೆಳಗಾದ ಆ ನಿನ್ನ ಗ್ರಂಥ ವಲ್ಲಿ ನನಗಿಷ್ಟು ಸ್ಥಳವನ್ನು ಕೊಟ್ಟು ಉಪಕರಿಸು. ಧರ್ಮದೇವತೆ ಎನ್ನುವ ಶಬ್ದಕ್ಕೆ ಎಲ್ಲಿಯೂ ಇರಲು ಎಡೆಯಿಲ್ಲದೆ ಇಲ್ಲಿ ಬಂದು ಸೇರಿಕೊಂಡು ಜೀವ ಹಿಡಿದಿರುವ ಬಡ ಮತ್ತು ಎಬಡ ಪ್ರಾಣಿ ಎಂದು ಸರಿಯಾದ ಅಪಾರ್ಥವನ್ನು ಬರಿ. ಆಯಿತು ನನ್ನ ಕಥೆ. ಇದೇ ನನ್ನ ಕಡೆ ಕಾಗದ!

ಇಂತು
ಶತ್ರುವಿಗೆ ಶರಣಾಗತವಾಗಿರುವ
ಧರ್ಮದೇವತೆ

ಈ ಪತ್ರವನ್ನೋದಿದ ತಿಂಪಮನೇ ಧರ್ಮದೇವತೆ ಆಗಿದ್ದರೆ ಕಟ್ಟ ಕಡೆಯ ದನ್ನು ಮೊಟ್ಟಮೊದಲು ಮಾಡದೆ ಮತ್ತೇನು ಮಾಡುತ್ತಿದ್ದ ?

ಧರ್ಮಕ್ಕೆ ಸಾವಿಲ್ಲ ನಿಜ—ಆಗಾಗ ಕಾಯಿಲೆ ಆಗಬಹುದಲ್ಲ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವೆ

ತುರಿ, ನವೆ, ತಿಂಡಿ, ಕೆರೆಯೋದು, ಇನ್ನೂ ಏನೇನೋ ಅನ್ನುತ್ತಾರೆ ಈ ಸುಖಕ್ಕೆ. ಏನಂದರೇನು, ನಾಚಿಕೆ ಇದ್ದರೆ ತಾನೇ ಅದಕ್ಕೆ ?

ಆರಂಭವಾದರಾಯಿತು, ಪರಚಿಗೊಳ್ಳುವುದಷ್ಟೇ ಆ ಪ್ರಾಣಿಯ ಕೆಲಸ. ಸ್ಥಳ, ಸಮಯ, ಸಂದರ್ಭ ಒಂದರ ಪರಿವೆಯೂ ಇಲ್ಲ. ಕೆರೆದುಕೊಳ್ಳುವುದೊಂದೆ ಧರ್ಮ ಆಗ. ಉರಿಯುವುದು ಆಮೇಲಲ್ಲವೆ ? ಆದಾವಾಗಲೋ ಆಗುವ ಉರಿಯ ನೆನಪು ಈಗ ಕೆರೆದುಕೊಳ್ಳುವಾಗ ಆದೇಕೆ ಆಗಬೇಕು ? ಕೆರೆದುಕೊಳ್ಳುವುದೇ ಸುಖ. ಅನೇಕ ಸುಖಗಳಂತೆ ಇದೂ ದುಃಖಾಂತವಿರಬಹುದು ; ಇರಲಿ.

ಕೆರೆಯುವುದೊಂದೆ ಯಮ್ಮಯ ಧರ್ಮ
ಉರಿಯುವುದೊಂದೆ ಚರ್ಮದ ಕರ್ಮ
ನವೆಗೇ ಗೊತ್ತು ನವೆಯ ಮರ್ಮ
ನವೆಯುವದಿಲ್ಲ ಕೆರೆ ಕೆರೆ ತಿಂಮ ॥

ಈ ತಿಂಮೋಕ್ತಿ, ಕೇವಲ ದೇಹದ ನವೆಗಷ್ಟೆ ಅಲ್ಲ. ಮನದ ನವೆಗೂ ಅಷ್ಟೇ ಅನ್ವಯಿಸುತ್ತದೆ.

ಮೈಗಾಗುವ ನವೆಗೆ ನೂರೆಂಟು ಔಷಧಿಗಳಿವೆ. ಏಕೆಂದರೆ ಡಾಕ್ಟರುಗಳಿದ್ದಾರೆ ನಮ್ಮ ಪ್ರಾಣಕ್ಕೆ.

"ಇತರರ ಅಂಗಡಿಗೆ ಹೋಗಿ ಮೋಸ ಹೋಗಬೇಡಿರಿ, ನಮ್ಮಲ್ಲಿಗೇ ಬನ್ನಿ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ 'ನಾವೇ ಮೋಸ ಮಾಡುತ್ತೇವೆ' ಎಂದು ಪರ್ಯಾಯವಾಗಿ ಹೇಳುವ ವ್ಯಾಪಾರಿಯಂತೆ ಡಾಕ್ಟರನೂ ಹೇಳುತ್ತಾನೆ

"ಕೆರೆದು ಗಾಯಮಾಡಿಕೊಳ್ಳಬೇಡಿ. ನಮ್ಮಿಂದ ಚುಚ್ಚಿಸಿಗೊಳ್ಳಿ," ಎಂದು.

ಆಯಿತಪ್ಪ, ದೇಹದ ನವೆಯ ಸಮಾಚಾರ. ಮನಸ್ಸಿನ ನವೆ ?

ಮನದ ನವೆಯಿಂದ ಪಾರಾಗಲು ಒಂದೇ ಒಂದು ಮದ್ದಿದೆ-ಕೆರೆದು ಕೊಂಡು ಬಿಡುವುದು !

ಉನ್ಮತ್ತ ಆಂಗ್ಲ ಕವಿ ಆಸ್ಕರ್‌ವೈಲ್ಡ್ ಹೇಳಿದ್ದ : "ಚಾಪಲ್ಯವನ್ನು ಗೆಲ್ಲಲು ಒಂದೇ ಉಪಾಯ—ಅದಕ್ಕೆ ವಶನಾಗಿ ಬಿಡು"

ಎಷ್ಟು ಚೆನ್ನಾಗಿದೆ ಈ ಉಪಾಯ !

ಮನದ ನವೆಗಳಲ್ಲಿಯೂ ಅನೇಕಾನೇಕ ರಕಮ್‌ಗಳಿವೆ. ಎಲ್ಲರಿಗೂ ಒಂದೇ ಬಗೆಯದು ಗಂಟು ಬಿದ್ದಿದ್ದರೆ ಗತಿ ಏನಿತ್ತು ? ಆ ಸರ್ವಸಕ್ತನಾದ ಪರಮಾತ್ಮನ ಸೃಷ್ಟಿಯಲ್ಲಿ ವೈವಿಧ್ಯತೆಗೆ ಕೊರತೆಯೆ ?

ಇಪ್ಪತ್ತೈದು ಗಂಟೆಗಳೂ ಸಿಲೋನ್ ರೇಡಿಯೋ ಕೇಳಬೇಕೆಂಬ ನವೆ ಕೆಲವರಿಗೆ. ಅಷ್ಟೇಕೆ ? ಅದಾವುದೋ ಊರಲ್ಲಿ ಈರ್ವರು ಗೂಟಗಳನ್ನು ಬಡಿದುಕೊಂಡು ಕ್ರಿಕೆಟ್ ಚೆಂಡಾಟ ಆಡುತ್ತಿದ್ದರೆ, ದೂರದ ಊರುಗಳಲ್ಲಿ ತಂತಮ್ಮ ಮನೆಯಲ್ಲಿ ಕುಳಿತು ಆಕಾಶವಾಣಿಯಿಂದ ಆಟದ ವರದಿಯನ್ನು ಕೇಳಿ ಕೂಗಿ ಕೂಗಿ ಆನಂದಪಡುವ ಆತ್ಮಾರಾಮರು ಇಲ್ಲವೆ ? "ಸೆಟ್" ದೋಸೆ ಗಳನ್ನು ತಿನ್ನುವುದಕ್ಕಾಗಿಯೇ ರವಿವಾರಕ್ಕಾಗಿ ಆರು ದಿನಗಳಿಂದ ಕಾಯುವವರೂ ಇದ್ದಾರೆ ; ಆ ಮೇಲೆ ಸೋಡಾ ಕುಡಿಯುತ್ತಾರೆ—ಅದು ಉಪನವೆ. ಇಡೀ ಜನ್ಮದಲ್ಲಿ, ಒಂದು ದಿನವೂ, ಒಂದು ಆಟವೂ ಗೆಲ್ಲದಿದ್ದರೂ "ಕರ್ಮಣ್ಯೇ ವಾಧಿಕಾರಸ್ತೇ........." ಎಂಬ ಗೀತೋಕ್ತಿಯಂತೆ, ಭಕ್ತಿಯಿಂದ, ಶ್ರದ್ಧೆಯಿಂದ ಕೇವಲ ಕರ್ಮಯೋಗಿಯಂತೆ ನಿತ್ಯವೂ ಕ್ಲಬ್ಬಿಗೆ ಹೋಗಿ ಇಸ್ಪೀಟು ಕಂದಾಯ ವನ್ನು ಸಲ್ಲಿಸಿ ಬರುವ ಭಕ್ತ ಬಕರಾಗಳಿಗೆ ಕೊರತೆ ಇದೆಯೆ? ಅವರವರ ಮಕ್ಕಳು ಅವರವರಿಗೆ ಚೆನ್ನ; ನವೆಗಳು ಮಕ್ಕಳಿದ್ದಂತೆ. ಅವರವರ ನವೆ ಅವರಿಗೇ ಚೆನ್ನ. ಒಂದೂ ನವೆ ಇಲ್ಲದ ಮನುಷ್ಯನೇ ಇಲ್ಲ. ಇದ್ದಾನೆ ನಮ್ಮೂರಲ್ಲಿ ಎಂದಾರಾದರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿದರೆ, "ಅಂತಹನ ಬಗ್ಗೆ ಕೊಂಚ ಹುಷಾರಿ" ಎಂದು ಎಚ್ಚರಿಸುವುದು ಜಾಣನ ಕರ್ತವ್ಯ.

ಹಾಗಾದರೆ ನಿಮ್ಮ ತಿಂಮನಿಗೆ ಅದಾವ ನವೆ ಇದೆ ಸ್ವಾಮಿ ?

ಇದೆ ಅಲ್ಲ, ಇವೆ. ಒಂದಲ್ಲ ಎಷ್ಟೋ ಇವೆ. ಅವುಗಳೆಲ್ಲ ಮುಖ್ಯವಾದು ವಲ್ಲವಾದರೂ, ನೂರೆಂಟಂ ನವೆಗಳುಳ್ಳ ಸಾರ್ವಜನಿಕರಲ್ಲಿ ಧೈರ್ಯದಿಂದ ಒಪ್ಪಿಗೊಳ್ಳುವಂತಹುದು ಇದು—ಭಾಷಣದ ನವೆ.

ಕುರುಬಾಂಗ್ಲ ಹಾಸ್ಟೆಲ್‌ನಲ್ಲಿ ಗೀತಾಜಯಂತಿ, ತಿಂಮನ ಭಾಷಣ: ವಿಧವಾ ಸಮಾಜದ ಜೀರ್ಣೋದ್ಧಾರ, ತಿಂಮನ ಅಧ್ಯಕ್ಷತೆ. ಹರಿಜನ ಬಾಲಿಕಾಶ್ರಮದ ಹಿಂದಿನ ಗೋಡೆಯ ಉದ್ಘಾಟನೆ—ತಿಂಮನ ಅಮೃತ ಹಸ್ತದಿಂದ. ಸೆಯಿಂಟ್ ಮಾರೆಮ್ಮನ ಕನ್ನಡ ಕಾನ್ವೆಂಟ್ ಶಾಲೆಯಲ್ಲಿ "ಅಂಬರ ಚರಖಾ ಮತ್ತು ಏಕಾದಶೀ ಮಹಾತ್ಮೆಯ ಪ್ರಚಾರ ಸಭೆ – ತಿಂಮ ಮುಖ್ಯ ಅತಿಥಿ." "ಹಿಂದಿಯಿಂದ ಮುಂದೇನಾದೀತು ?" ಎಂಬ ವಿಷಯದ ಮೇಲೆ ಚರ್ಚಾಕೂಟ—ನಡು ರಾತ್ರಿ ಸಭೆ, ಪ್ರತ್ಯೇಕ ಸ್ಥಳದ ಏರ್ಪಾಟು ಆಕಸ್ಮಾತ್ (ಬರುವ) ಕುಲೀನ ಸ್ತ್ರೀಯರಿಗೆ—ಆರಂಭ ಭಾಷಣ, ಮಧ್ಯ ಭಾಷಣ ಮತ್ತು ಕೊನೆಯ ಭಾಷಣ ನಮ್ಮ ತಿಂಮನಿಂದ.

ಈ ತಿಂಮ ಬಿಟ್ಟಾನೆಯೇ ಪರ ಊರಿನಿಂದ ತತ್ರಾಪಿ ಪರದೇಶದಿಂದ ಕರೆ ಬಂದರೆ ? ತಾಯಲಂಡ್‌ನಲ್ಲಿ ಮೂರು ಕೋಟಿ ಜನ ಕನ್ನಡಿಗರಿದ್ದಾರೆ. ಅದು ಮೊದಲು ತಾಯಿನಾಡು—ಈಸ್ಟ್ ಇಂಡಿಯಾ ಕಂಪೆನಿಯ ಹಾವಳಿಯಲ್ಲಿ ಅದು ತಾಯಲಂಡ್ ಆಯಿತು. ಈಗ ಹಾಲಿ ಮೂರು ಕರ್ನಾಟಕ ಸಂಘಗಳು ಇಲ್ಲಿವೆ. ಕನ್ನಡ ಸೇವೆಗಾಗಿ ಕದ್ದ ಬಂಕಣ—ಅಲ್ಲ, ಬದ್ಧ ಬಂಕಣ—ನಾಗಿ ನಿಂತಿದ್ದಾನೆ ತಿಂಮ. ಎದ್ದೇ ನಿಂತ. ಕನ್ನಡಮ್ಮನ ಸೇವೆಗಾಗಿ ತಾಯಲಂಡ್‌ಗೆ ಹೊರಡಲು.

ಕನ್ನಡದ ಸೇವೆ ಎಂದರೆ ನೆನಪಾಯಿತು. ಕನ್ನಡದ ಸೇವೆ ಮಾಡುವವನು ಈ ತಿಂಮನೇ ಒಬ್ಬನೇನು ಬೋಳಪ್ಪ ? ಎಂದು ಕೇಳುವವರೂ ಇದ್ದಾರೆ. ಅಹುದು; ಅದೇಕೆ ಕೇಳಬಾರದು ?

"ಈ ಮೂವತ್ತೆರಡು ವರ್ಷಗಳಿಂದ ನಾವು ಕನ್ನಡದ ಸೇವೆಗೈಯ್ಯು ತ್ತಿದ್ದೇವೆ, ಸ್ವಾಮೀ. ನಮ್ಮನ್ನು ಕೇಳುವ ಮಗನೇ ಇಲ್ಲ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ನಮ್ಮ ಮಿಟ್ಟಿ ಮಠದ ಲಕ್ಕುಂಡಿ ಗುರುಕರಿಬಸವಶಾಸ್ತ್ರಿಗಳು ಕಂಡವರ ಮುಂದೆಲ್ಲವೂ ಹೇಳುತ್ತಿದ್ದರು, ಕಾಣದವರನ್ನೂ ಹುಡುಕಿಕೊಂಡು ಹೋಗಿ ಹೇಳಿಬರುತ್ತಿದ್ದರು, ಪಾಪ!

ಒಂದು ಸಂಜೆ ದೊಡ್ಡ ಸಭೆಯು ಮುಗಿದ ನಂತರ ಸಂಧಿಸಿದರು ಆ ಮಿಟ್ಟಿ ಮಠದ ಲಕ್ಕುಂಡಿ ಗುರುಕರಿಬಸವಶಾಸ್ತ್ರಿಗಳು. ಸಹಜವಾದ ಸಹಾನುಭೂತಿ ಯಿಂದ ಕೇಳಿದ ತಿಂಮ, ಅನೇಕರ ಇದಿರಿನಲ್ಲಿಯೇ.

"ಆರೋಗ್ಯವೇನು ಶಾಸ್ತ್ರಿಗಳೆ ?"

ಹುಲಿಯಂತೆ ಮೈಮೇಲೆಯೇ ಹಾರಿಬಂದರು!

"ನಮ್ಮ ಹಾರೋಗ್ಯದಿಂದ ನಿನ್ನಗೇನಯ್ಯ ?.........ನಾವು ಹಿದ್ದರೇನು ಓದರೇನು ನಿಂಗೆ ? ನಿನ್ನ ಪ್ರತಿಷ್ಟೆ ಹಾಯಿತೋ ಹಿಲ್ಲವೋ ?........."

ಕಕ್ಕಾಬಿಕ್ಕಿಯಾದ ತಿಂಮ. ಕೂಡಲೆ ನೆನಪಾಯಿತು ಅವನಿಗೆ, ಅಂದು ಬೆಳಿಗ್ಗೆ ಆ ಸುಡುಗಾಡು ನಿತ್ಯ ಭವಿಷ್ಯದಲ್ಲಿ ಓದಿದುದು—ಅನವಶ್ಯಕ ಕಲಹ, ಮನಃಕ್ಲೇಶ.

ತೆಪ್ಪಗಾದ ಮರುತ್ತರ ಕೊಡಲು ತೋಚದೆ.

ಆದಾರೋ ಮಧ್ಯೆ ಮಾತನಾಡಿದರು.

"ಅದೇಕೆ ಸ್ವಾಮಿ, ಶಾಸ್ತ್ರಿಗಳೇ ? ಅವನ ಮೇಲೆ ಹಾಗೆ ಹರಿ ಹಾಯುತ್ತೀರಿ ? ಅವನೇನು ಅಂತಹದನ್ನು ಮಾಡಿದ ?"

"ಹಿನ್ನೇನು ಮಾಢಬೇಕು ? ಕನ್ನಡಿಗರಿಗೆ ಭುದ್ದಿ ಇದೆಯೇ ? ಸನ್ಮಾನ, ಸಮಾರಂಭ. ಆರ, ಥುರಾಯಿಗಳ ಗುತ್ತಿಗೆ ಈ ತಿಂಮನೊಬ್ಬನಿಗೇನಾ ? ನಾವು ಹಿಲ್ಲವೇ ? ಸತ್ತಿದ್ದೇವೆಯೇ ? ಈ ಮೂವತ್ತೆರಡು ವರ್ಷಗಳಿಂದ ಕನ್ನಡಮ್ಮನ ಸೇವೆ ಮಾಡುತ್ತಿದ್ದೇವೆ ನಾವೂ..."

ತಿಂಮ ಆಶ್ಚರ್ಯ ಚಕಿತನಾದ, ಕೇಳಿದ.

"ಏನು ಮಾಡುತ್ತಿದ್ದೀರಿ ಸ್ವಾಮೀ, ಕನ್ನಡಮ್ಮನ ಸೇವೆ ? ಏನಾದರೂ ಕಾದಂಬರಿ...."

"ನಿನ್ನ ಕೋತಂಬರಿಯ ಸಮಾಧಿಯಾಯಿತು. ಅಂದೂಂದೇ ಏನಯ್ಯ ಘೂರ್ಗ್, ಕನ್ನಡಮ್ಮನ ಸೇವೆ ಗೈಯಲು ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹೇಳಿ ಸ್ವಾಮಿ, ತಾವು ಮಾಡುತ್ತಿರುವುದು ಏನೆಂಬುದನ್ನು. ನನಗೂ ಗೊತ್ತಿಲ್ಲ."

ಆ ಇನ್ನೊಬ್ಬರು ಕೇಳಿದರು. ಪಾಪ! ಸಹೃದಯತೆ ಇದ್ದಿತು ಆ ಧ್ವನಿಯಲ್ಲಿ. ಆದರೆ ಶಾಸ್ತ್ರಿಗಳು ಅದನ್ನು ಗುರುತಿಸಿದರೋ ?

ಅತ್ಯದ್ಭುತ ಆವೇಶದಿಂದ ಸುರುವಾಯಿತು ಮಿಃಟ್ಟಿ ಮಠದ ಲಕ್ಕುಂಡಿ ಗುರುಬಸವ ಶಾಸ್ತ್ರಿಗಳ "ಭಾಕರ ಭೀಷಣ"

"ನಮ್ಮನ್ನು ಹೇನೆಂದು ತಿಳಿದಿ ? ನಾವು ಯಾರು ಗೊತ್ತೇನು ನಿನಗೆ ? ನಾವು ಗೈಯುತ್ತಿರುವ ಕಾರ್ಯವೇನು, ಹೆಷ್ಟು, ಹೆಲ್ಲಿ ಗೊತ್ತಿದೆಯೋ ?..."

ಒಬ್ಬ ಕಿರಿಯ ಗೇಲಿ ದನಿಯಲ್ಲಿ ನುಡಿದ.

"ಗೊತ್ತು ಬಿಡಿ, ಸಬ್ ರಿಜಿಸ್ಟ್ರಾರ್ ಆಫೀಸಿನ ಕಟ್ಟೆಯ ಮೇಲೆ ಕೂಡುತ್ತೀರಿ ಇಡೀ ದಿನವೂ"

ಶಾಸ್ತ್ರಿಗಳಿಗೆ ಕೋಪವು ಬರಲಿಲ್ಲ-ಶಿವನ ಮಾಯೆ !

"ಭೇಷ್, ರೈಟ್ ! ಚುರುಕಾಗಿದ್ದೀಯಯ್ಯ ನೀನು. ಒಳ್ಳೆಯ ಜಾಣ ಕಾಣುತ್ತಿ"

ಅವನ ಬೆನ್ನು ಚಪ್ಪರಿಸಿ ತಿಂಮನ ಕಡೆ ನೋಡುತ್ತ ಮುಂದುವರಿಸಿದರು.

"ಚಿಕ್ಕವನಾದರೂ ಚಿಂತೆ ಇಲ್ಲ. ಇವನಿಗೆ ಗೊತ್ತಿದೆ ನೋಡಿ. ನೋಡಿದ್ದಾನೆ ಈ ಉಡುಗ. ಮೂವತ್ತೆರಡು ವರ್ಷಗಳಿಂದ ನಾವು ಅದೇ ಸಬ್ ರಿಜಿಸ್ಟರ್ ರಾಯನ ಆಫೀಸಿನ ಕಟ್ಟೆಯ ಮೇಲೆ ಖೂಡುತ್ತೇವೆ, ಬೆಳಗಿನಿಂದ ಸಂಝೆವರೆಗೂ..."

"ಕುಳಿತು ?"

"ಅವಸರ ಮಾಢಬೇಡ ಕಣಯ್ಯಾ. ಮುಂದಕ್ಕೆ ಏಳುತ್ತೇವಿ, ಕೇಳು. ಆ ಕಟ್ಟೆಯ ಮೇಲೆ ಖೂತು ಏನು ಮಾಡುತ್ತೇವೆ ನಾವು ? ಪ್ರತಿ ನಿಥ್ಯವೂ ನೂರೆಂಟು ಪತ್ರಗಳನ್ನು-ದಸ್ತಾವೇಜುಗಳನ್ನು ಬರೆಯುತ್ತೇವೆ..."

"ಬರೆದು ?"

"ಬರೆದು ಸುಢುತ್ತೇವೆ !"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದುರುಗುಟ್ಟಿ ನೋಡಿದರು ಶಾಸ್ತ್ರಿಗಳು, ಮಧ್ಯೆ ಮಧ್ಯೆ ಈ ಏಕ ಪ್ರಶ್ನೆ ಪ್ರಯೋಗವನ್ನು ಮಾಡುತ್ತಿದ್ದ ಅಧಿಕ ಪ್ರಸಂಗಿಯ ಕಡೆ.

ಅನಂತರ ವಿವರಿಸುತ್ತಾ ಹೇಳಿದರು, ತಾವೇ ಸಮಾಧಾನ ಮಾಡಿ ಕೊಂಡು.

"ದಸ್ತಾವೇಜುಗಳನ್ನು ಏನು ಮಾಡುತ್ತಾರಯ್ಯ ? ಸಬ್ ರಿಜಿಸ್ಟರ್ ರಾಯನ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸುತ್ತೇವೆ."

ಆ ಇನ್ನೊಬ್ಬ ಮೆತ್ತಗೆ ತಲೆ ಹಾಕಿದ.

"ಅದೆಲ್ಲ ಸರೆ ಶಾಸ್ತ್ರಿಗಳೇ. ತಮ್ಮ ಕನ್ನಡಮ್ಮನ ಸೇವೆ ಯಾವುದು ? ಅದನ್ನೇ ಹೇಳಲು ಮರೆತಿರಲ್ಲ ?"

"ಅದೇ ಕಣಯ್ಯ, ಏಳಿದೆನಲ್ಲ ?...ಆ ನೂರೆಂಟು ಪತ್ರಗಳನ್ನೆಲ್ಲ ಖನ್ನಡದಲ್ಲಿಯೇ ಬರೆಯುತ್ತೇವಯ್ಯ. ಅಧೇನು ಸಾಮಾನ್ಯ ಸೇವೆಯೇ ?"

ಇದಿರಿನಲ್ಲಿಯೇ ನಕ್ಕು ಬಿಟ್ಟರೆ ಆ ಕ್ರ್ಯಾಕ್ ಶಾಸ್ತ್ರಿಗಳು ಕೆನ್ನೆಗೆ ಕೊಟ್ಟಾರೆಂಬ ಅಂಜಿಕೆಯಿಂದ ತಿಂಮ ಬಾಯಿಗೆ ಬಟ್ಟೆ ಇಟ್ಟುಕೊಂಡು ಹೊರಗೆ ಓಡಿದ ; ಹುಚ್ಚನಂತೆ ಅಲ್ಲಿ ನಿಂತು ಹೊಟ್ಟೆ ತುಂಬ ನಕ್ಕ.

ತಿಂಮನಿಗೆ ನಗುವ ನವೆ—ನಮ್ಮ ಲಕ್ಕುಂಡಿ ಶಾಸ್ತ್ರಿಗಳಿಗೆ ಸನ್ಮಾನ ಸಮಾರಂಭಗಳ ನವೆ : ಇನ್ನೊಂದೂ ಇದೆ—ಮಹಾಪ್ರಾಣ ಅಲ್ಪಪ್ರಾಣದ ನವೆ.

ಕೆಲವರಿಗೆ ಬರೆಯುವ ನವೆ, ಹಲವರಿಗೆ ಓದುವ ನವೆ. ಓದುವ ನವೆಯೇ ಬರೆಯುವ ನವೆಯವರಿಗೆ ಅನ್ನ. ಅಂತೂ ಅವರವರಿಗೆ ಅವರವರ ನವೆ.

ನಿಮಗೆ ?

ಏನು ! ಒಂದೂ ಇಲ್ಲವೆ ?

ಆ ದೇವನಿಗೇ ಇದೆ ದೊಡ್ಡೊಂದು ನವೆ—ಈ ಸೃಷ್ಟಿ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬುಡುಬುಡುಕ್ ಬುಡುಬುಡುಕ್

ಬಾಯಿಮಾತ್ರ ಇದ್ದವರ ಬಾಯಲ್ಲಿ ಮಾತ್ರವೇ ಅಲ್ಲ, ತಲೆ ಇದ್ದವರ ಬಾಯಲ್ಲಿಯೂ ಇದೇ ಪ್ರಶ್ನೆ—ಪ್ರಾಂತವೇನೊ ಆಯಿತು. ಮುಂದೇನು ?

ಒಬ್ಬೊಬ್ಬರದು ಒಂದೊಂದು ಕರಾರು, ಮತ್ತೊಬ್ಬರದು ಬರೀ ತಕರಾರು. ಹೊಸದಾಗಿ ಹುಟ್ಟಿರುವ ಮಗುವಿನ ಪೋಷಣೆ, ವಿದ್ಯಾಭ್ಯಾಸ, ಮುಂಜಿ, ಮದುವೆಗಳ ಮಾತು ಮೂಲೆ ಹಿಡಿಯಿತು. ಆದರ ಹೆಸರಿನ ಬಗ್ಗೆಯೇ ಮಹಾಯುದ್ಧ. ಹಳೆ ಮೈಸೂರನ್ನೊಳಗೊಂಡ ಈ ಹೊಸ ಪ್ರಾಂತದ ಹೆಸರೇನು ? ಕೇಳಬೇಕೇಕೆ, ಮೇಲೆಯೇ ಇದೆಯಲ್ಲ "ಕರ್ನಾಟಕ" ಎಂದು. ನಮ್ಮೂರಲ್ಲಿ "ಕರ್ನಾಟಕ ಸೀಗೇಕಾಯಿ ಪುಡಿ ಕಂಪನಿ, ಲಿ.." ಇದೆ. ಅಲ್ಲಿ "ದಿ ಕರ್ನಾಟಕ ಟೇಲರಿಂಗ್ ಹೌಸ್" ಇದೆ. ಇನ್ನೊಂದು ಊರಲ್ಲಿಯೂ "ಬೀಡಿ ಸೇದುವ ಕರ್ನಾಟಕ ಕಿರಿ ವಿದ್ಯಾರ್ಥಿಗಳ ಸಂಘ" ಇದೆ. ಇದರ ಕಟ್ಟಡದ ಶಂಕು ಸ್ಥಾಪನೆ ಆಗಬೇಕು ಯಾರಿಂದ ? "ಕರೆಯುವಲೆ ಬರುವವರ ಕರ್ನಾಟಕ ಸಿಂಡಿಕೇಟ್ ಅನ್ ಲಿಮಿಟೆಡ್" ಅಂತೂ ಎಲ್ಲರಿಗೂ ಗೊತ್ತು. ಈ ಎಲ್ಲ ಕಾರಣಗಳಿಂದ ನಮ್ಮ ನೂತನ ಪ್ರಾಂತದ ಹೆಸರು ಕರ್ನಾಟಕ ಎಂದು ಅಗಲೇ ಬೇಕು. ತಥಾಸ್ತು !

ಗಟ್ಟಿಯಾಗಿ ಮಾತನಾಡುವ ಉತ್ತರ ಭೂಪರ ಮಾತೇ ಸರಿಯೆಂದು ಒಪ್ಪಿದರೆ ಬೇರಿನ್ನೇನು ಅನಾಹುತಗಳು ಆಗಿ ಹೋಗುತ್ತವೋ ಎಂಬ ಅಂಜಿಕೆ ಹಳೆ ಮೈಸೂರಿನ ಜಿಂಕೆಗಳಿಗೆ. 'ಮೈಸೂರು ಸ್ಯಾಂಡಲ್‌ವುಡ್ ಸೋಪ್'ದ ಸುವಾಸನೆ ಕಡಿಮೆಯಾಗಿ, ದುರ್ವಾಸನೆ ಹೆಚ್ಚಾಗಿ 'ಕರ್ನಾಟಕ ಗಂಧದ ಕಟ್ಟಿಗೆ ಸ್ನಾಬಳೂನ' ಆದರೆ ಏನು ಗತಿ ? 'ನಯಾ ಮೈಸೂರ ಕೆಫೆ' 'ನವ ಕರ್ನಾಟಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಫೆ' ಆದರೆ ಅಲ್ಲಿಯ ಅತ್ಯುತ್ತಮ ಕಾಫಿಗೂ ಚಹಾದ ವಾಸನೆ ಬಂದರೆ? 'ಮೈಸೂರ ಅಗರಬತ್ತಿ' ಹೋಗಿ 'ಕರ್ನಾಟಕ ದೇವರ ಬೀಡಿ' ಆಗುವದಿಲ್ಲವೆ? 'ಮೈಸೂರ್ ನೈಸ್ ಹೇರ್ ಕಟಿಂಗ್ ಸಲೂನ್' ಬದಲು 'ಕರ್ನಾಟಕ ಕರ ಕರ ಕೆರೆಯುವ ಹೇಅರ ಕಟಿಂಗ ವ ಮುಖಕ್ಷೌರ ಮಾರಾಟದ ಅಂಗಡಿ ದುಕಾನು ಆದರೆ? ಇವೆಲ್ಲವೂ ಅಲ್ಲದೆ ಇನ್ನೊಂದು ಅತಿ ಮುಖ್ಯವಾದ ಅಪಾಯವೂ ಇದೆ. 'ಮೈಸೂರ್ ಪಾಕ್' ಸಪ್ಪೆಯಾಗಿ ನಂತರ ಕಹಿಯಾಗಿ 'ಕರ್ನಾಟಕ ಸಾಕ್' ಆಗಿ ಬಿಟ್ಟರೆ ದೇವರೇ ಗತಿ! ಯಾವುದೋ ಒಂದು ಆದರಾಯಿತು, ಹೆಸರಿನಲ್ಲೇನಿದೆ ಎನ್ನುವ ಮಾತನ್ನಂತೂ ಯಾವ ತಲೆ ಉಳ್ಳ ಪ್ರಾಣಿಯೂ ಹೇಳಲಾರದು. ಇದನ್ನು ಅಂದವನ ತಲೆಯನ್ನು ತಲೆ ಇಲ್ಲದವರು ಮತ್ತು ಬರೀ ತಲೆ ಉಳ್ಳವರು ಕೂಡಿಯೇ ಒಡೆಯುತ್ತಾರೆ—ಇದು ಮಾತ್ರ ಗ್ಯಾರಂಟಿ.

ಇದಾಯಿತು, ಇನ್ನೇನು ಬೇಕು? ಕೊಡುವ ಮಗ ಯಾವನು? ಈ ಪ್ರಶ್ನೆ ಪ್ರಜೆಗಳದಲ್ಲ. ಹಾಡಿಲ್ಲವೆ ದಾಸರು, "ಕೊಡುವ ಕರ್ತ ಬ್ಯಾರೇ ಇರುತಿರೆ, ಬಿಡು ಬಿಡು ಚಿಂತೆಯನು" ಎಂದು? ಬೇಡುವುದು ನಮ್ಮ ಕೆಲಸ. ಕೊಡುವದು (ವಚನವನ್ನು) ಅವನ ಕೆಲಸ. ನೋಡುವದೊಂದೆ ತಿಂಮನ ಕೆಲಸ. ಹೂಂ; ದೋಣಿ ಸಾಗಲಿ ತಾರಿನ ರಸ್ತೆಯ ಮೇಲೆ. ಅಗೋ ಬಂದೇ ಬಿಟ್ಟನಲ್ಲ, ಬೇಡುವ ಮುನ್ನವೆ ಕಾಡಿಕಾಡಿ ಕೊಡುವ ಬುಡುಬುಡಿಕೆ!

ಬುಡುಬುಡುಕ್ ಬುಡುಬುಡುಕ್, ಬಲಾಚಾರ ಬರತೈತೆ ಸಾಮೀ ಬಲಾಚಾರ ಬರತೈತೆ. ಬುಡುಬುಡುಕ್ ಬುಡುಬಡುಕ್. ಕಾಡುವ ಬೇಡುವ ಕಾರಣವಿಲ್ಲಾ, ಕೇಳದೆ ಕೊಡುವ ಕಾಲವು ಎಲ್ಲಾ. ಏನೇನ್ ಬೇಕು? ಯಾರ‍್ಯಾರ‍್ಗೆ ಬೇಕು ಎಲ್ಲಾ ಗೊತ್ತಾಗೈತೆ ಸಾಮೀ. ತಾನೇ ಬರತೈತೆ ಸಾಮೀ. ಒಲ್ಲೆಂದರೆ ಬಿಡೋಹಂಗಿಲ್ಲ ಸಾಮಿ. ಜುಲುಮೆಯಿಂದ ಬಲಾಚಾರ ಬಂದೈತೆ ಸಾಮಿ. ಬುಡುಬುಡುಕ್ ಬುಡುಬುಡುಕ್!

ಒಂದೇ ಒಂದು ಐದಾಗಿತ್ತು ಸಾಮಿ, ಹರಿದು ಹಂಚಿ ಹೋಗಿತ್ತು ಸಾಮೀ. ತುಂಡು ತುಂಡಾಗಿತ್ತು ಸಾಮೀ. ಮುಂಬಯಿ ತುಂಡು, ಮದ್ರಾಸ ತುಂಡು, ರಾಜರ ತುಂಡು, ನಿಜಾಮರ ತುಂಡು, ಕೊಡಗಿನದೊಂದು ಕಡೆಯ ತುಂಡು. ಒಂದೇ ಹೋಗಿ ಐದಾಗಿತ್ತು, ಐದೂ ಸೇರಿ ಒಂದೇ ಆಯ್ತು. ಆ ಥಫ್ಪಾನ್ನಾರು ಲಫಂಗರ ಕಾಲ ಹೋಯ್ತು. ಭಪ್ಪರೆ ಭಳಿರೆಂದು ಸದ್ದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಡೆಯುವ ಶೂರ ಎಂಮೆಲೆಗಳ ಕಾಲ ತಾನೇ ಬಂತು, ಬುಡುಬುಡುಕ್ ಬುಡುಬುಡುಕ್ !

ಕೇಳದೆ ಕೊಡುವ ಕಲ್ಪವೃಕ್ಷ ಬಂದೈತೆ ಸಾಮಿ, ಕಾಡದೆ ಕೊಡುವ ಕಾಮಧೇನು ಬಂದೈತೆ ಸಾಮೀ. ಬೇಡೆಂದರು ಬಿಡೂಹಂಗಿಲ್ಲ ಸಾಮೀ, ಸಾಕೆಂದರೂ ಇಲ್ಲ, ನೂಕಿಕೊಂಡು ಬಂದೈತೆ ಬಲಾಚಾರ ಸಾಮೀ. ಬುಡು ಬುಡುಕ್ ಬುಡುಬುಡುಕ್!

ಆಗೋ ನೋಡಿರಿ ಬಂದೇ ಬಂತು, ಈಗೋ ನೋಡಿರಿ ಬಂದೇ ಬಂತು– ಏನು ಬಂತು ? ಏನು ಬಂತು ? ಏನು ತಂತು ? ಅಲ್ಲಿ ನೋಡಿರಿ ಬಂದೇ ಬಂತು. ನೀರಿಲ್ಲದ ಬಳ್ಳಾರಿಗೆ ಬಂದರು ಬಂತು, ಬಸ್‌ಸ್ಟ್ಯಾಂಡ್ ತುಂಬ ಹಡಗ ನಿಂತು. ಜನರ ಬೇಡಿಕೆ ಹುಡುಗಾಟಲ್ಲ, ಬುಡುಬುಡುಕ್;ಬುಡುಬುಡುಕ್ !

ಬಲಾಚಾರ ಬಂದೈತೆ ಸಾಮಿ, ಬಲಾಚಾರ. ಗೋಳಗುಮ್ಮಟ ಬಿಜಾಪುರಕ್ಕೇಕೆ ? ಬಾಗಿಲಕೋಟೆಗೆ ಅದು ಬೇಡೇಕೆ ? ಹೂಂ, ಹಂಗೇ ಆಗಲಿ, ಆಗೇ ಹೋಗಲಿ. ವಾರದಾಗೆರಡು ಬಾರಿ ಗೋಳಗುಮ್ಮಟ ಬಾಗಿಲಕೋಟೆ ಯಲ್ಲಿ, ಉಳಿದಂತೆಲ್ಲ ವಿಜಾಪುರದಲ್ಲಿ. ಜನರ ಬೇಡಿಕೆ ಹುಡುಗಾಟಲ್ಲ. ಬುಡು ಬುಡುಕ್ ಬುಡುಬುಡುಕ್ !

ಬಲಾಚಾರ ಬಂದೈತೆ ಸಾಮಿ, ಬಲಾಚಾರ. ಹೆರಿಗೆ ಆಸ್ಪತ್ರೆ ಹೆಂಣಗೇ ಏಕೆ ? ಗಂಡಿಗೆ ಮಾತ್ರ ಬೇಡ ಏಕೆ ? ಹೂಂ, ಹಂಗೇ ಆಗಲಿ, ಆಗೇ ಹೋಗಲಿ. ಪುರಷರ ಪ್ರತ್ಯೇಕ ಪ್ರಸೂತಿಗೃಹ ಬಂದೇ ಬಿಟ್ಟಿತು. ಜನರ ಬೇಡಿಕೆ ಹುಡುಗಾಟಲ್ಲ, ಬುಡುಬುಡುಕ್ ಬುಡುಬುಡುಕ್ !

ಬಲಾಚಾರ ಬಂದೈತೆ ನಮ್ಮ ಬಲಾಚಾರ.

ಬೆಂಗಳೂರಿಗೆ ಧಾರವಾಡಕ್ಕೆ ಎರಡೇ ಸಾಕೆ ರೇಡಿಯೊ ಸ್ಟೇಶನ್. ಮನೆ ಮನೆಗೊಂದು ಗುಡಿಸಲಿಗೊಂದು ಹಳ್ಳಕೊಳ್ಳಕ್ಕೊಂದು ಹೋಟಲಿಗೊಂದು ಸಲೂನಿಗೊಂದು, ಬಂದೇ ಬಂತು, ಬಂದೇ ಬಂತು ರೇಡಿಯೋ ಸ್ಟೇಶನ್, ಕಿವುಡರಿಗೊಂದೆ ರೇಡಿಯೊ ಸಾಕು, ಉಳಿದವರಿಗೆಲ್ಲ ರೇಡಿಯೊ ಸ್ಟೇಶನ್ ಬೇಕೇ ಬೇಕು. ಜನರ ಬೇಡಿಕೆ ಹುಡುಗಾಟಲ್ಲ ಬುಡುಬುಡುಕ್ ಬುಡುಬುಡಕ್ !

ಬಲಾಚಾರ ಬಂದೈತೆ ಸ್ವಾಮಿ, ಬಲಾಚಾರ.

ಇಷ್ಟು ದೊಡ್ಡ ಪ್ರಾಂತ ನಮ್ಮದೂ, ಇಷ್ಟು ದಡ್ಡ ಪ್ರಾಂತ ನಮ್ಮದೂ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡೇ ಸಾಕೆ ಹುಚ್ಚಾಸ್ಪತ್ರೆ ? ಧಾರವಾಡ ಬೆಂಗಳೂರಿಗೇ ಸಾಕೇ ? ನಮಗೂ ಬೇಕು, ನಿಮಗೂ ಬೇಕು. ಮನೆಮನೆಗೊಂದು ಹುಚ್ಚಾಸ್ಪತ್ರೆ ಬೇಕು. ಹೌದು, ಪ್ರತಿಯೊಂದು ಮನೆಯೂ ಹುಚ್ಚಾಸ್ಪತ್ರೆ ಆಗಲೇಬೇಕು. ನೀತಿ ಕೆಟ್ಟರೂ ಜಾತಿ ಉಳಿಯಬೇಕು, ಉಳಿಯಬೇಕು.

ಹಾರವರಿಗೊಂದು ಹುಚ್ಚಾಸ್ಪತ್ರೆ
ಹರಿಜನರಿಗೊಂದು, ಕುರುಬರಿಗೊಂದು
ಲಿಂಗಾಯಿತರಿಗೆ ಮತ್ತೊಂದು, ಒಕ್ಕಲಿಗರಿಗೆ ಇನ್ನೊಂದು
ಕುಲೀನ ಎಂಮೆಲೆಗಳಿಗೆ ಬೇರೆ ಒಂದು
ಬಂದೇ ಬಿಟ್ಟಿತು ಬಂದೇ ಬಿಟ್ಟಿತು
ಜನರ ಬೇಡಿಕೆ ಹುಡುಗಾಟಲ್ಲ ಬುಡುಬುಡಕ್ ಬುಡುಬುಡುಕ್ !

ಬಲಾಚಾರ ಬಂದ್ಯೆತೆ ಸಾಮಿ, ಬಲಾಚಾರ. ಬೆಳಗಾವಿಗೆ ಬಿಸಿಲು ಬಂತು. ಬಿಜಾಪುರಕ್ಕೆ ಮಳೆ ಬಂತು, ಧಾರವಾಡ ಸಾಹಿತಿಗಳಲ್ಲಿ ಸ್ನೇಹ ಬಂತು, ಬೆಂಗಳೂರವರಲ್ಲಿ ಸೌಹಾರ್ದ ಬಂತು. ಸಾಹಿತ್ಯ ಪರಿಷತ್ತು ಸಾಹಿತಿಗಳ ಕೈಗೇ ಬಂತು. ಊಟಕ್ಕೊಂದೆ ಬಾಯಿ ತೆರೆಯುವ ಎಂಮೆಲೆಗಳಿಗೆ ನಾಲಗೆ ಬಂತು. ಬರೀ ಮಾತಿನ ಎಂಮೆಲೆಗಳಿಗೆ ವಿವೇಕ ಬಂತು. ಹಳಿ ಇಲ್ಲದಲ್ಲೆಲ್ಲ ರೈಲು ಬಂತು. ಮಕ್ಕಳಿಲ್ಲದಲ್ಲೆಲ್ಲ ಸ್ಕೂಲು ಬಂತು, ಬೆಳಕು ಇದ್ದಲ್ಲೇ ದೀಪ ಬಂತು. ಇಲ್ಲದಲ್ಲೆಲ್ಲ ಕತ್ತಲು ಬಂತು.

ನಡು ಊರಲ್ಲಿ ಹೊಲಗದ್ದೆ ಬಂತು
ಬಡವರಿಗೆಲ್ಲ ಬಡತನ ಬಂತು
ಕುರುಡರಿಗೆಲ್ಲ ಕಾಲು ಬಂತು
ಕುಂಟರಿಗೆಲ್ಲ ಕಿವಿ ಬಂತು
ಕಿವುಡರಿಗೆಲ್ಲ ಕೋಲು ಬಂತು.

ಬಾಲದ ಮಾತು ನಾಯಿ ಕೇಳಿತು—ಎಂಮೆಲೆ ಮಾತು ಜನ ಕೇಳಿತು. ಜನರ ಬೇಡಿಕೆ ಹುಡುಗಾಟಲ್ಲ ಬುಡುಬುಡಕ್ ಬುಡುಬಡಕ್ !

ಬಲಾಚಾರ ಬಂದ್ಯೆತೆ ಸಾಮಿ, ಬಲಾಚಾರ.

ಬಡ ಬುಡುಬುಡಿಕಿಗೆ ಒಂದು ಅಂಗೀ ಕೊಡಿರಿ, ಹರಕ ಗಿರಕ ಕೊಡಿರೀ ಸಾಮೀ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದು ಮಾತ್ರ ಸಾನೊಲ್ಲೆ ಸಾಮಿ, ಖಾದೀ ಗೀದಿ ನಾನೊಲ್ಲೆ ಸಾಮಿ, ಓಟು ಬೇಡಲು ಬಂದಿಲ್ಲ ಸಾಮೀ. ಬುಡುಬುಡುಕ್ ಬುಡುಬುಡುಕ್ !

ನಾಳೆ ಬಾ, ಈಗ ಹೋಗೆಂದನಾ ದಾನಶೂರ ತಿಂಮ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಂಮ ಬೋಧಾಮೃತ

ತಾತ ಗಾಂಧಿಯಂ ನಮಿಸಿ, ಗತ ಸರದಾರನಂ ಸ್ಮರಿಸಿ, ಜವಾಹರನಂ ನುತಿಗೈದು, ಮಾನ್ಯ ಮೂರ್ಖ ತಿಂಮನಂ ಧ್ಯಾನಿಸಿ, ದೊಡ್ಡ ಪ್ರಪಂಚದ ಪಾಟೀಲ ಪುಟ್ಟಪ್ಪನಂ ನೆನಪಿನೊಳಿಟ್ಟು, ತಿಂಮ ಮಹರ್ಷಿಯಿಂದ ವಿರಚಿತ ಮಾದ, ಹೊಲಸು ಹೂಬಳ್ಳಿಯೋಳ್ ಗುಳಕವ್ವನ ಕೆರೆಯ ಬಳಿ ಅರ್ಥಾತ್ ನೆಹ್ರೂ ಮೈದಾನದ ಹತ್ತಿರ, ಗತಕಾಲದೋಳ್ ರಾರಾಜಿಸುತ್ತಿದ್ದ ಅಂದರೆ ವಿರಾಜಮಾನವಾಗಿದ್ದ ಅಂದರೆ ವಿಜೃಂಭಣೆಯೋಳಿದ್ದ ರೆಕ್ಸ್ ಹೋಟಲಿನ ನೆಲಮಾಳಿಗೆಯ ಅರ್ಥಾತ್ ಅಂಡರ್‌ಗ್ರೌಂಡ್ ರೂಮಿನೋಳ್, ಪಂಡಿತ ರೋಳ್ ಪಾಮರರಾಗಿಯೂ ಪಾಮರರೋಳ್ ಪಂಡಿತರಾಗಿಯೂ ಖ್ಯಾತಿ ವೆತ್ತು, ತಿಂಮಬ್ರಹ್ಮರೆಂದು ಇಂದು ಇಡೀ ಕರ್ನಾಟಕದೋಳ್—ಅಂದರೆ ಮೈಸೂರು ಸಹಿತ ಕರ್ನಾಟಕದೋಳ್—ಪ್ರಸಿದ್ಧರಾಗಿರುವ ಬೀಚಿಗಳು ಮತ್ತು ಈ "ಪ್ರಪಂಚ"ವಂ ಅಂದು ಶಿರೋಗರ್ಭದೋಳ್ ಧರಿಸಿದ್ದ ಕಿರಿ ಗೆಳೆಯ ಪಾಟೀಲ ಪುಟ್ಟಪ್ಪಂಗೆ, ಅಂದರೆ ಸಾಕ್ಷಾತ್ ತಿಂಮನೇ, ಸರ್ವ ಪ್ರಾಪಂಚಿಕರಿಗೆ ಸಂವಾದ ಮಾಡಿದ, ಅಂದರೆ ಹಲವರಿಗೆ ಮೋಕ್ಷ ಯಾನೆ ಕೈಲಾಸ ಸಾಧನವಾದ ಗುಪ್ತ ಅರ್ಥಾತ್ ರಹಸ್ಯ ವಿಷಯಗಳನ್ನೂ ತಿಳಿಯುವ ಹಾಗೆ ಅಂದರೆ ಅರ್ಥವು ಕೂಡ ಆಗುವ ಹಾಗೆ ಮತ್ತು ಸದಾ ಸರ್ವದಾ ಜ್ಞಾಪಕವಿರುವ ಹಾಗೆ ಮತ್ತು ಎಂದಿಗೂ ಮರೆಯದ ಹಾಗೆ, ಅತಿ ಸುಲಭವಾಗಿಯೂ, ಅತ್ಯಂತ ರಮಣೀಯ ಮಾಗಿಯೂ, ಶೃಂಗಾರ ರಸಭರಿತವಾಗಿಯೂ ಪಾಪ ವಿನಾಶಕರವಾಗಿಯೂ, ಅತಿ ವಿಚಿತ್ರವಾಗಿಯೂ, ನಡು ಕನ್ನಡ ಮತ್ತು ನಡು ಸತ್ತ ಕನ್ನಡ ಶೈಲಿ ಯುಳ್ಳದ್ದಾಗಿಯೂ, ಸವಿ ನುಡಿಗಳುಳ್ಳದ್ದಾಗಿಯೂ, ಸರ್ವ ರಹಸ್ಯಸಾರವನ್ನೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೃಂಗಾರಾದ್ಭುತಗಳನ್ನೂ ಪ್ರಯೋಗಿಸಿ ಅಥವಾ ಅದ್ಭುತ ಶೃಂಗಾರವನ್ನು ಉಪಯೋಗಿಸಿ, ಬರೀ ನವರಸಗಳಷ್ಟೇ ಅಲ್ಲದೆ ಇಂದಿನ ನಾನಾ ಕಿರಿ ಕವಿಗಳು, ನರ ಕವಿಗಳು, ಅನೇಕ ಅನುವಾದಕರೂ ಸೇರಿ ಸಾಹಿತ್ಯ ಕ್ಷೇತ್ರದಲ್ಲಿ ಅತಿ ಶ್ರಮಪಟ್ಟು, ಓದುಗರಿಗೆ ಅದರ ದಶಕದಷ್ಟು ಅಥವಾ ಶತಕದಷ್ಟು ಶ್ರಮ ಕೊಟ್ಟು ಸೃಷ್ಟಿಸಿರುವ ಹತ್ತನೆಯ ರಸವಾದ 'ನೀರಸ'ಯುಕ್ತವಾಗಿ, ಶ್ರೀ ತಿಂಮ ಬೋಧಾಮೃತ ಸಾರವೆಂಬೀ ಮಹಾ ನಿರುಪಯುಕ್ತಮಾದ ಗ್ರಂಥವನ್ನು ವಿರಚಿಸುತ್ತಿರುವೆನ್ನೈ—

ಬೆಸಗೊಂಬುವಾತನೇ ಕೇಳುವಂಥಾತ್ತನಾಗು, ನಾಂ ಪೇಳುವಂಥಾತ್ತ ನಾಗುತ್ತೇನೆ. ನೀನು ಮಾತ್ರ ಕೇಳಿದ ಮರುಕ್ಷಣವೇ ಪೇಳುವಂಥಾತ್ತ ನಾಗಬೇಡಾ. ಗುಣೈಕದರ್ಶಿಗಳಾದ ಮಹನೀಯರು ಈ ಮಹಾ ಹಿಮಾಲಯ ದಂತಹ (ಅಂದರೆ ಪ್ರಮಾಣ ಯೋಗ್ಯತೆಗಳಲ್ಲಿ ದೊಡ್ಡದು ಅಂತಲೇ ಅರ್ಥ ಮಾಡಬೇಕಾಗಲಿ, ಮಂಜಿನಂತೆ ಥಂಣನದು ಎಂವಾವ ಮೂರ್ಖರೂ ಅರ್ಥ ಮಾಡಬಾರದೆಂದು ವಿನಂತಿ) ಸದ್ಗ್ರಂಥವನ್ನು ಅರ್ಥಾತ್ ಪುರಾಣವನ್ನು ಅಥವಾ ಪುಣ್ಯಕಥಾವನ್ನು ಆಮೂಲಾಗ್ರವಾಗಿ ಪರಿಶೋಧಿಸಿ ಹಳೇ ಹಂಸ ಪಕ್ಷಿಯಂತೆ ಹೊಸ ಯೋಗ್ಯತೆಯಿಂದ ಗುಣವನ್ನೇ ಅಂದರೆ ಸುಗುಣವನ್ನೇ ಗ್ರಹಿಸಿ, ದುರ್ಗುಣವನ್ನು ತ್ಯಜಿಸಿ, ನಿರ್ಗುಣವನ್ನು ನಿರಾಕರಿಸಿ ಪಂಡಿತ ಪಾಮರನಾದ ತಿಂಮ ಮೂರ್ಖನಿಗೆ ಶಭಾಸ್ ಕೊಡುವರೆಂದಾಶಯವು.

ಎಲ್ಲೈ ಪಾಪುವೇ ! ಲಾಲಿಸು. ಹಾಗೇಕೆ ತೂಕಡಿಸುತ್ತೀ, ರಾಮಾಯಣ ವನ್ನು ಕೇಳುತ್ತಿದ್ದ ಜನಮೇಜಯರಾಯನಂತೆ ? ನಾನು ಪ್ರತಿಜ್ಞೆಯಂ ಮಾಡಿ ಕೊಂಡು ಬಂದಿರುವೆನು. ಇಂದು ರಾತ್ರಿ ಈ ಪುರಾಣವು ಅರ್ಥಾತ್ ಪುಣ್ಯ ಕಥೆಯು ಅರ್ಥಾತ್ ಕಾಲಕ್ಷೇಪವು, ಅರ್ಥಾತ್ ವೃಥಾಕಾಲಕ್ಷೇಪವು ಸಂಪೂರ್ಣ ವಾಗಿ ಪೂರ್ಣವಾಗುವವರೆಗೂ—ಒಂದಲ್ಲದೆ ಹತ್ತು ಕಪ್ಪು ಚಿನ್ನಪ್ಪನ ಚಾ ಮುಗಿದರೂ ಚಿಂತೆ ಇಲ್ಲ—ನೀ ಮಾತ್ರ ನಿದ್ರಾದೇವತೆಯ ಸನ್ನಿಧಿಗೆ ಸೇರ ಲಾಗದು. ಕಂಣಿಗೆ ಕಂಣು ಹಚ್ಚಲು ಯತ್ನಿಸಬೇಡಾ ; ಏಕೆಂದರೆ ಅದು ಎಂವೆಂದಿಗೂ ಸಾಧ್ಯವಿಲ್ಲ, ಏಕೆಂದರೆ ನಡುವೆ ಮೂಗು ಇದೆ. ಸರಿಯಾಗಿ ಛೇರಾರೂಢನಾಗಿ ಸೆಟೆದು ಕುಳಿತು ಲಾಲಿಸುವಂಥಾತ್ತನಾಗಯ್ಯಾ, ಪಾಟೀಲ ಪುಟ್ಟಪ್ಪನೇ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕಲಾ ಮಿಸ್ಟರ್ ಕೃಷ್ಣನು ಏಂ ಗೈಯುತ್ತಿದ್ದನೆಂಬುದನ್ನು ಬಲ್ಲಿಯಾ ತನ್ನ ಜಹಗೀರಾದ ವೈಕುಂಠದೋಳ್ ? ಗತಕಾಲದ ಕವಿ ಪುಂಗವರು, ವರ್ಣಿಸಿ ದಂಥಾ ಆ ಹಳೇ ಪೀತಾಂಬರವಂ ಬಿಚ್ಚಿಸೆದು, ವೈಶ್ಯನಂತೆ ಕಂಠಾಭರಣವಾಗಿ ಧರಿಸಿದ್ದ ಮುತ್ತು ರತ್ನದ ಮಾಲೆಗಳಂ ಮೂಲೆಗೆ ಬಿಸುಟು, ಲಕ್ಸ್ ಸೋಪು ಹಾಕಿ ತನ್ನ ನೀಲವರ್ಣದ ಗಲೀಜು ಮೈಯಂ ಬಿಳಿಯಾಗುವಷ್ಟು ತಿಕ್ಕಿ ತಿಕ್ಕಿ ಉಜ್ಜಿ ಉಜ್ಜಿ ತೊಳೆದು, ಮಹಾಲಕ್ಷ್ಮಿ ಹೇರಕಟಿಂಗ್ ಸೆಲೂನಿನ ಮಾಲಿಕ ನಾದ ಸುಬ್ಬಯ್ಯನ ಕೈಯೋಳ್ ತಲೆಯಂ ಕೊಟ್ಟು ಒಳ್ಳೆಯ ಸ್ಟೈಲಿನೋಳ್ ಕ್ರಾಪಂ ಕತ್ತರಿಸಿ, ಡ್ಯಾಗರ್‌ಕಟ್ ಮೀಸೆಯಿಂದ ಮುಖಕ್ಕೆ ಕಳೆ ತುಂಬಿಸಿ, ಸ್ನೋ ಪೌಡರುಗಳಿಂದ ಅಲಂಕರಿಸಿಗೊಂಡು, ಕಾಲಕ್ಕೆ ತಕ್ಕಂತೆ ಉಡುಪುಗಳಂ ರೆಡಿಮೇಡ್ ಕ್ಲಾಥ ಮರ್ಚೆಂಟ್ ಶಾಪಿನಂಗಡಿಯಲ್ಲಿ ಉದ್ದರಿ ತಂದು, ಒಂದು ಉತ್ತಮವಾದ ಬುಶ್ ಶರಟನ್ನೂ, ಬೇರೆ ಬಣ್ಣದ ಉಣ್ಣೆಯ ಪ್ಯಾಂಟನ್ನೂ ಧರಿಸಿಕೊಂಡು ಸರ್ವಾಂಗ ಸುಂದರನಾಗಿದ್ದಂಥಾ ಭಗವಾನ್ ಕೃಷ್ಣದೇವನು, ಗೋವಾದಲ್ಲಿ ಕೊಂಡು ಕದ್ದು ತಂದಿದ್ದ ಉತ್ತಮವಾದ ರೋಲೆಕ್ಸ್ ವಾಚನ್ನು ಕೈಗೆ ಕಟ್ಟಿ, ಪಾರ್ಕರ್ (ಚಿನ್ನದ ಟೊಪ್ಪಿಗೆಯುದು) ಪೇನಾವನ್ನು ಎಡಕಿಸೆಯಲ್ಲಿ ಸಿಕ್ಕಿಸಿಕೊಂಡು, ಕಂಸ ಮುಂತಾದ ರಾಕ್ಷಸಾಧಮರ ಚರ್ಮದಿಂ ಚೆನ್ನಾಗಿ ಟ್ಯಾನಿಸಿ ತಯಾರಿಸಿದ ಬೂಟುಗಳನ್ನು ಕಾಲಲ್ಲಿ ಧರಿಸಿ ತನ್ನ ಡ್ರೆಸಿಂಗ್ ಖೋಲಿ ಯಲ್ಲಿದ್ದ ನಿಲುಗನ್ನಡಿಯ ಮುಂದೆ ನಿಂತು ಆನಂದಿಸುತ್ತಾನೆ.

ಪುನಃ ತೂಕಡಿಸಬೇಡಪ್ಪಾ ನಿದ್ರಾಪ್ರಿಯನಾದಂಥಾ ಪಾಟೀಲಪುಟ್ಟಪ್ಪನೇ! ಒಬ್ಬರು ಮಾತನಾಡುವಾಗಲೇ ನಿದ್ರಿಸುವ ಚಟವುಳ್ಳ ನೀನು ಮುಂದಿನ ಜನ್ಮದಲ್ಲಿ ತಪ್ಪದೆ ಎಂಮೆಲೆ ಆಗು ಎಂದು ನಾನು ಶಪಿಸಬೇಕಾದೀತು, ಹೆಚ್ಚರಿಕೆ! ವಿದ್ಯಾವಂತನಾದರೂ ಬುದ್ಧಿವಂತನಾಗಿರುವಿ, ಬುದ್ಧಿವಂತನಾದರೂ ಗುಣಶೀಲ ನಾಗಿರುವಿ, ಗುಣಶೀಲನಾಗಿದ್ದರೂ ಜಯಶೀಲನಾಗಿರುವಿ. ಇಂಥಾ ನಿನಗೆ ಎಂಮೆಲೆ ಆಗುವ ದುರ್ಗತಿ ಬರಕೂಡದೆಂದೇ ನನ್ನ ಆಶಯು. ಅದಕ್ಕಾಗಿಯೇ ನಿನಗೆ ಈ ಹುಷಾರಿಯಂ ಪೇಳಿರುವೆ ಎಂಬುದಂ ಲಕ್ಷ್ಯದಲ್ಲಿಡು. ಮುಂದಿನ ಕಥಾಭಾಗವಂ ಕೇಳುವಂಥಾತ್ತನಾಗು, ಏಕೈಕಚಿತ್ತನಾಗಿ ಏಕಲವ್ಯನಂತೆ; ಕೊಡು ಬೇಗ ನಿನ್ನಯ ಎರಡೂ ಕರ್ಣಗಳಂ ನನ್ನ ಕೈಯಲ್ಲಿ.

ಆ ಅತಿ ಪತ್ನೀ ದುರಂಧರನಾದಂಥಾ ಶ್ರೀ ಕೃಷ್ಣನ ಯುಗದಲ್ಲಿ ರಾಮುನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲದಲ್ಲಿದ್ದಂತೆಯಾಗಲಿ ಅಥವಾ ಈ ಸ್ವತಂತ್ರ ಭಾರತದ ಶಾಸನಕಾರ ಮರಿಗಳು ಕಾಯಿದೆ ಮಾಡಿ ಕೊಡುತ್ತಿರುವ ಈ ಒನ್–ವೇ–ಟ್ರಾಫಿಕ್ ಅಂದರೆ— ತಿಳಿಯಿತೋ ಇಲ್ಲವೋ ?—ಏಕಪತ್ನೀತ್ವದ ಹಿಂಸೆ ಇರಲಿಲ್ಲ. ಇಂದು ಮುಸಲ್ಮಾನರಿಗೆ ಮಾತ್ರವೇ ಇರುವಂತೆ ಅಂದು ಎಲ್ಲ ಜಾತಿಯವರಿಗೂ ಬೇಕಾದಷ್ಟು ಪತ್ನಿಯರನ್ನು ಕರ ಹಿಡಿಯುವ ಅಧಿಕಾರವು ಇದ್ದಿರಲೇಬೇಕು ಎಂದು ಶಾಸ್ತ್ರಜ್ಞರು ಊಹಿಸಿ ಸಿದ್ಧಾಂತ ಮಾಡತಕ್ಕದ್ದು. ಏಕೆ ಅಂದರೆ–ಏಕೆ ಎಂದು ಅನ್ನದಿದ್ದರೂ ಕೂಡ–ಸಾಕ್ಷಾತ್ ಕೃಷ್ಣನಿಗೇ, ನಮಗೆ ನಿಮಗೆಲ್ಲರಿಗೂ ಗೊತ್ತಿರುವಂತೆ ರುಕ್ಮಿಣಿ ಸತ್ಯಭಾಮರೆಂಬ ಇಬ್ಬರು ಮನೆಯ ಹೆಂಡಂದಿರಂತೂ ಇದ್ದೇ ಇದ್ದರಲ್ಲವೇ ? ಅವರವರ ಅಂತಃಪುರಗಳಲ್ಲಿ ಆ ಇಬ್ಬರು ಗರತಿಯರು, ಸವತಿಯರು, ಏನು ಮಾಡುವಂಥತ್ತರಾಗಿದ್ದರೆಂಬುದನ್ನು ವಿಶದವಾಗಿಯೂ ವಿವರವಾಗಿಯೂ ವರ್ಣಿಸುತ್ತೇನೆ ಲಾಲಿಸುವಂಥಾತ್ತನಾಗಯ್ಯಾ ಪಾಟೀಲ ಪುಟ್ಟಪ್ಪಾ !

ಸಾಕಾರಧ್ಯಾನಗಳುಳ್ಳ ಜರಾಮರಣಗಳುಳ್ಳ ಮನುಜ ಮಾತ್ರರಾದ ನಮ್ಮೀ ಇಹಲೋಕದ ಸ್ತ್ರೀಯರುಗಳೇ ಇಡೀ ಪುರುಷಜಾತಿಗೇ ಕಂಣು ಕುಕ್ಕಿ ಮತಿಭ್ರಮೆಯಾಗಿ ಸೆರಗ ಹಿಡಿದು ಹಿಂದೆ ಓಡಾಡುವ ಹಾಗೆ ಶೃಂಗಾರಾಲಂಕೃತರಾಗುತ್ತಿರುವಾಗ, ಸಾಕ್ಷಾತ್ ಲಕ್ಷ್ಮೀರಮಣನ ಅರ್ಧಾಂಗಿಯಾದ ರುಕ್ಮಿಣಿಗೇನು ಕೊರತೆ ? ರಾಸಿರಾಸಿಯಾಗಿ ಬಿದ್ದಿವೆ ಅತ್ಯುತ್ತಮ ಡಿಜೈನಿನ ಸೀರೆ ಮುಂತಾದ ವಸ್ತ್ರಾದಿಗಳು. ಅಂದು ಅಕ್ಷಯವಾಗಿದ್ದ ದ್ರೌಪದಿಯ ಜಗದುದ್ದದ ಸೀರೆಗಳನ್ನು, ಗೋಪಿಕಾಸ್ತ್ರೀಯರಿಂದ ಕದ್ದು ಅಪಹರಿಸಿ ಚೋರಿ ಮಾಡಿ ಪೋಲೀಸರ ಕೈಗೆ ಸಿಗದಂತೆ ಪಾರಾಗಿ ಮನೆಗೆ ತಂದಿದ್ದ ಸರ್ವ ಸೀರೆಗಳ ರಾಸಿಗಳನ್ನು ರುಕ್ಮಿಣಿಯ ಕೋಣೆಯಲ್ಲಿ ಬಚ್ಚಿಟ್ಟಿದ್ದಾನೆ ಭಗವಾನ್ ವಸ್ತ್ರಚೋರ. ರುಕ್ಮಿಣಿದೇವಿಯರ ದುಗುಡ ದುಪ್ಪಟ್ಟಾಗಿದೆ. "ಇಷ್ಟು ಸೀರೆಗಳಿದ್ದರೂ ಒಂದಾದರೂ ಚೆನ್ನಾಗಿಲ್ಲ"ವೆಂದು ಮಾಮೂಲಿ ಸ್ತ್ರೀಯರಂತೆ ಸಿಡಿಪಿಡಿ ಮಾಡುತ್ತಾ ಆ ಎಲ್ಲ ಹಳೆ ಫ್ಯಾಶನ್ನಿನ ಸೀರೆಗಳನ್ನು ಕೆಲಸದವಳಿಗೆ ಬಿಸುಟು ಕೇವಲ ಮೂವತ್ತೆ ರೂಪಾಯಿಯ ಆರೇ ಮೊಳದುದ್ದದ ನೈಲಾನ್ ಸೀರೆಯುಂ ಉಟ್ಟು, ಟಿವಿನೆಯ ಮಾಡಲಿನ ಚೌಲಿಯುಂ ತೊಟ್ಟು, ಎರಡು ಕನ್ನಡಿಗಳ ಮುಂದೆ ನಿಂತು ಕುಲುಕುತ್ತಿದ್ದಾಳಯ್ಯಾ, ಕೇಳುವಂಥಾತ್ತನಾಗಯ್ಯಾ, ಪತ್ರಿಕಾಪುಂಗವಾ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮಹಾಸತಿಯ ನಾಶಿಕ ಕರ್ಣಂಗಳು ಥಳಥಳಿಸುತ್ತಿವೆ ವಜ್ರದೋಲೆ ಮೂಗುಬೊಟ್ಟುಗಳಿಂದ. ಒಂದೇ ಕೈಯಲ್ಲಿ ಗಲಗಲ ನಾದವಂಗೈವ ಬಳೆಗಳು ತಾಂಡವಾಡುತ್ತಿವೆ. ಅತಿ ಚಿಕ್ಕದಾದ ಸ್ತ್ರೀ ಗಡಿಯಾರವು ಇನ್ನೊಂದು ಕೈಯಲ್ಲಿ ರಾರಾಜಿಸುತ್ತಿದೆ. ಆ ಪದ್ಮಿನಿ ಜಾತಿಯ ಹರಿಣಾಕ್ಷಿಯು ತನ್ನ ಅದ್ಭುತವಾದ ಕೇಶರಾಶಿಯಂ ವಿಂಗಡಿಸಿ ದೋಣಿ ಮಾಡಿ (ದೊ+ವೇಣಿ), ಅಂದರೆ ಎರಡು ಜಡೆಗಳು ಮಾಡಿ ಪುನರಪಿ ಅವುಗಳ ಸೇರಿಸಿ ಒಂದುಗೈದು ಸಾಕ್ಷಾತ್ ಶೇಷನ ಅಂದರೆ ಸರ್ಪದ ಅಂದರೆ ಹಾವಿನ ಹೆಡೆಯ ಆಕಾರವಂ ಮಾಡಿ, ಮೇಲೆ ಕಟ್ಟಿ ಹಿಂದೆ ಮುಂದೆ ನಿಂತಿದ್ದ ನಿಲುಗನ್ನಡಿಗಳಲ್ಲಿ ತನ್ನ ಸುರೂಪವನ್ನೇ ನೋಡಿ ನೋಡಿ ತಾನೇ ಮೋಹಿತಳಾಗಿದ್ದಾಳೆ. ಸುಪ್ರಸಿದ್ಧ ವ್ಯಭಿಚಾರಿ ಪತಿಯುಳ್ಳ ರುಕ್ಮಿಣಿದೇವಿಯವರಿಗೆ ಸಾಲದುದಕ್ಕೆ ಸವತಿ ಸತ್ಯಭಾಮೆಯ ಸ್ಮರಣೆ ಬೇರೆ ಯಾಗುವಂತಹುದಾಗಿದೆ. ಅದೇ ಸಮಯದಲ್ಲಿ ಅಸೂಯಾ ಜ್ವಾಲೆಯಿಂದ ಆವರಿಸಲ್ಪಟ್ಟ ಆ ಹಿರಿ ಹೆಂಡತಿ ಯೋಗ್ಯತೆ ಮೀರಿ ಅಲಂಕೃತಳಾಗುತ್ತಿದ್ದಾಳೆ, ಪತಿವಶೀಕರಣಾಕಾಂಕ್ಷೆಯಿಂದ.

ಇದೇನಯ್ಯಾ ಅನ್ಯಾಯ! ಸ್ತ್ರೀವರ್ಣನೆ ಹೇಳುವಾಗಲಾಗಲಿ ಶೃಂಗಾರ ಭಾವ ಬಂದ ಸಂದರ್ಭದಲ್ಲಿಯಾಗಲಿ ತೂಕಡಿಸುವ ನಿಮ್ಮಂತಹ ಯುವಕರನ್ನು ಏನುಮಾಡಬೇಕೋ, ಸರ್ವಜ್ಞನಾದ ನನಗೇ ತಿಳಿಯದಾಗಿದೆ. ಆಗಲಿ, ಜನಮೇಜರಾಯನಿಗೆ ಮಾಡಿದ ಉಪಾಯವನ್ನೇ ನಿನಗೂ ಮಾಡುತ್ತೇನೆ. ಮುಖಸ್ತುತಿಗೆ ಬಲಿಬೀಳದ ನರನಂ ನಾ ಕಂಡಿಲ್ಲ. ಕೇಳಯ್ಯಾ, ವಿಶಾಲ ಕರ್ನಾಟಕದ ಪ್ರಪ್ರಥಮ ಸಂಪಾದಕನೇ ಕೇಳು. ಅಲ್ಲದೆ ಅದರ ಸಂಸ್ಥಾಪಕ ಸಂಪಾದಕನೇ ಕೇಳು, ಏಳು, ಚಾ ಕುಡಿದು ಕೇಳು. ಮಧ್ಯೆ ಮಧ್ಯೆ ಚಾ ಸಮರ್ಪಯಾಮಿ ಆಗಲಿ. ಗರಂ ಚಾ ಕುಡಿ ಏಳು, ಗರಂ ಚಾ ಅಂದರೆ ಏನೆಂದು ತಿಳಿದಿ ? ನನ್ನ ಗುರುವಾಣಿಯು ಏನೆಂದು ಪೇಳಿದೆ ಬಲ್ಲಿಯಾ ?

ಆಕಾಶಾತ್ ಪತಿತಂ ತೋಯಂ
ಯಥಾ ಗಚ್ಛತಿ ಚಾ — ಗರಂ

ಹಾಂ! ಎಚ್ಚರವಾಯಿತೇ ? ಯನ್ನಯ ವಚನವಂ ಆಲಿಸು, ಪಾಲಿಸಯ್ಯ, ಸಂಪಾದಕಾಧಿಪನೇ! ಬೀದರ ಕಲಾವಿದನ ಬೆಳ್ಳಿಯ ಕುಸುರಿನಿಂದ ಭೇಷ್ ಆಗಿರುವ ವೆಲ್ವೆಟ್ ಬೂಟಂ ಧರಿಸಿ, ವಾಮಕರದೋಳ್ ವ್ಯಾನಿಟಿ ಬ್ಯಾಗಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಿಡಿದು, ಡ್ರಾಯಿಂಗ್‌ರೂಮಿಗೆ ಎಲ್ಲರಕಿಂತಲೂ ಜಾಗ್ರತೆಯಾಗಿ ಧಾವಿಸಿದ ಈ ನೂತನ ಆಗಂತುಕ ರಮಣೀ ಮಣಿ, ಸ್ತ್ರೀರತ್ನಗಳೋಳ್ ಮಣಿಪ್ರಾಯಳಾಗಿರುವ ಈ ಕಾಮಾಕ್ಷಿ ಯಾರೆಂದು ಅಚ್ಚರಿಗೊಂಡೆಯಾ, ಕೇಳು ಕೇಳು. ಅಂಗ, ವಂಗ, ಕಳಿಂಗ, ಮಗಧ, ಮದ್ರ, ನೇಪಾಳ, ಘೂರ್ಜರ, ಯವನ, ಸಿಂಧು, ಪಾರಸೀಕ, ಬಾರ್ಬರ, ಸೌರಾಷ್ಟ್ರ, ಪಾಕಿಸ್ತಾನ, ಅಲ್ಲದೆ ನೀಂ ಕಂಡ ಇಂಗ್ಲೆಂಡ ಅಮೇರಿಕಾ ಗಳಲ್ಲಿಯೂ ಸಹ ಇಂತಹ ಸಲಕ್ಷಣವಾದ ಸುರೂಪಿಯಾದ, ಸರ್ವಾಂಗ ಸುಂದರ ಳಾದ, ಸಾಕ್ಷಾತ್ ರತಿಯೂ ಲಾಂಛನಾಸ್ಪದವಾಗುವಂತಹ, ಸೇಕಡಾ ನೂರು ಸೌಂದರ್ಯವತಿಯಳಾದ ಈ ದಿವ್ಯ ಸ್ತ್ರೀ ಮೂರ್ತಿ ಯಾರೆಂಬುದಂ ತಿಳಿಯಲು ನಿನ್ನ ಮನವು ತವಕಪಡುತ್ತಿರುವದಲ್ಲವೇ ? ತಡೆ ತಡೆ, ಈ ಕ್ಷಣವೆ ನಿನ್ನಯ ಸಂಶಯಕ್ಕೆ ನಿವಾರಣೋಪಾಯವಂ ಗೈಯುವೆ. ಕೇಶರಾಶಿಯಂ ಬಾಬ್ ಮಾಡಿ, ಜಾರಿ ಜಾರಿ ಹೋಗುತ್ತಿರುವ ಜಾರ್ಜೆಟ್ ಶೀರೆಯಂ ಧರಿಸಿ, ಕಂಕುಳು ಕಾಣುವಂತಹ ನಾಮ್ಕಾವಾಸ್ತೆ ಒಂದು ಚಿಕ್ಕ ಜಾಕೆಟ್ ತೊಟ್ಟು, ಕಾಲಲ್ಲಿ ಹೈ ಹೀಳ್ಡ್ ಶ್ಯೂ, ಟೆನ್ನಿಸ್ ರ್‍ಯಾಕೆಟ್ಟಂ ಕಂಕುಳಲ್ಲಿಕ್ಕಿ ಈಗ ತಾನೇ ಗಮಗಮಿಸುತ್ತ ಪುನುಗಿನ ಬೆಕ್ಕಿನಂತೆ ಬಂದಿರುವ ಈ ಸತೀರತ್ನವೇ ರುಕ್ಮಿಣಿಯ ಸವತಿ, ಅರ್ಥಾತ್ ಶ್ರೀ ಕೃಷ್ಣನ ಜೂನಿಯರ್ ಡಾರ್ಲಿಂಗ್ ಆದ, ಸತ್ಯಭಾಮಾ ಎಂದು ತಿಳಿಯಯ್ಯಾ ಗೆಳೆಯ.

ಅದೇಕಯ್ಯಾ ಮಿತ್ರಾ ! ಮುಖವನ್ನು ಹೀಗೆ ಕಿವುಚುತ್ತಿ ? ಸಿನೇಮಾ ಸ್ಟಾರ್‌ನಂತೆ ತತ್ರಾಪಿ ಹಾಲಿವುಡ್ಡಿನ ಸ್ಟಾರ್‌ನಂತೆ ಸತ್ಯಭಾಮೆ ಇದ್ದಾಳೆ ಎಂದ ಮಾತ್ರಕ್ಕೆ ನಿನ್ನಯ ಮನದೋಳ್ ಅದೇಕೆ ವಿವಂಚನೆಯಾಗಬೇಕು ? ಕಲೆ ಬೆಳೆಯದಿದ್ದ ಕಾಲದಲ್ಲಿ, ಅಭಿರುಚಿ ಇನ್ನೂ ಅಷ್ಟಕ್ಕಷ್ಟೇ ಇದ್ದ ದಿನಗಳಲ್ಲಿ ಆ ರವಿವರ್ಮನು ಸ್ವೇಚ್ಛೆಯಾಗಿ ಬಂಣಗಳಂ ಬಳಿದು ತೋರಿದ ನಿರ್ಜೀವ ಬೊಂಬೆ ಗಳು ಮಾತ್ರವೇ ಸರಿ ಎಂದು ತಿಳಿದೆಯಾ ? ಮಾನವನನ್ನು ದೇವನು ಸೃಷ್ಟಿಸಿ ದ್ದಾನೋ ಇಲ್ಲವೋ ಎಂಬುದು ಇನ್ನೂ ಸಿದ್ಧಾಂತವಾಗಿಲ್ಲ. ಆಗುವದೂ ಇಲ್ಲವಾದರೂ, ನಾವು ಪೂಜಿಸುವ ಆರಾಧಿಸುವ ದೇವನನ್ನಂತೂ ಕೇವಲ ನನ್ನ ನಿನ್ನಂತಹ ಮಾನವನೇ ಸೃಷ್ಟಿಸಿದ್ದಾನೆಂಬ ಸತ್ಯದ ಬಗ್ಗೆಯಂತೂ ನಿನಗಾವ ಸಂಶಯವೂ ಬೇಡ. ಅಂದ ಮೇಲೆ ಮಾನವನಲ್ಲಿ ಸೌಂದರ್ಯದ ಕಲ್ಪನೆ ಕಾಲಕ್ರಮೇಣ ಬದಲಾದಂತೆಲ್ಲ ಅವನು ದೇವರುಗಳಿಗೆ ಮತ್ತು ಅವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಟುಂಬಗಳಿಗೆ ಕೊಡುವ ಸ್ವರೂಪವೂ ಕೂಡ ಬದಲಾಗಲೇ ಬೇಕು. ಇದಕ್ಕೇ ಪ್ರಗತಿಯೆನ್ನಬೇಕು ತಿಳಿಯಿತೇ ? ಆದಕಾರಣ ಈ ಷೋಕಿನ ಪೋಷಾಕುಗಳ ಬಗ್ಗೆ ಆದಾವ ದುರಭಿಪ್ರಾಯಗಳನ್ನೂ ಪಡದೆ ಮುಂದಿನ ಕಥಾಭಾಗವನ್ನು ಕಿವಿ ನಿಗುರಿಸಿ ಕೇಳುವಂಥಾತ್ತನಾಗಯ್ಯಾ, ಪಾಟೀಲ ಪುಟ್ಟಪ್ಪಾ !

"ಓ ! ಪ್ರಾಣಕಾಂತಳೇ, ಮನೋವಲ್ಲಭೆ, ನೀನಿಂದು ಕ್ಲಬ್ಬಿಗೆ ಹೋಗ ಬೇಡ, ಚಿನ್ನಾ"

ಎಂದು ಆದೇ ಒಳಬಂದ ಸರ್ವವ್ಯಾಪಕನಾದ ಶ್ರೀ ಕೃಷ್ಣ ಪರಮಾತ್ಮನು ಸತ್ಯಭಾಮೆಯ ಕಪೋಲಗಳಂ ಕರದೋಳ್ ಪಿಡಿದು ಯಾಚಿಸುವಂಥಾತ್ತ ನಾಗುತ್ತಾನೆ, ಸರ್ವವಂ ತಿಳಿದ ಶ್ರೀ ಕೃಷ್ಣ.

"ಏಕೆಂದರೆ ಇಂದು ಕೃಷ್ಣ ವರ್ಣದ ಮೇಘರಾಜನು ಶೀತಲ ವಾಯು ರಾಜನಂ ಸಂಧಿಸಿ ಆಣೇಕಲ್ಲಿನ ವರ್ಷವಂ ಸ್ವಾಗತಿಸುತ್ತಾನೆ, ನಿನ್ನ ಟೆನ್ನಿಸ್ ಆಟಕ್ಕೆ ಅನಾನುಕೂಲವೆನ್ನುವಂಥಾದ್ದು ಒದುಗುವದೆನ್ನುವಂಥಾದ್ದು ಅಕ್ಷರಶಃ ನಿಜ. ಅದು ಅಲ್ಲದೆ ನನ್ನ ಕಾರಿನ ಡ್ರೈವರನು ರಜೆ ಅನ್ನುವಂಥಾದ್ದನ್ನು ಪಡೆದು ಮ್ಯಾಟಿನಿ ಅವಲೋಕಿಸಲು ನಿಷ್ಕ್ರಮಣ ಮಾಡುವಂಥಾತ್ತನಾಗಿದ್ದಾನೆ. ಆದ ಕಾರಣ..."

ಸತ್ಯಭಾಮಾದೇವಿಗೆ ನಾಶಿಕಾಗ್ರದಲ್ಲಿಯೇ ಕೋಪಗ್ರಹವಿದ್ದ ಕಾರಣ ನಯನಂಗಳಂ ರಕ್ತವರ್ಣಗೈದು ಸಿಡಿಲಿನಂತೆ ಸಿಡಿಪಿಡಿಯಂ ಗೈದು ಪತಿಯಂ ದಂಡಿಸುವಂಥಾಕಿಯಾದಳು.

"ಯನ್ನಂ ಕೇಳದೆ ಆ ಸಾರಥಿಗೆ ರಜೆ ಏಂಕೊಟ್ಟೆ, ಕೃಷ್ಣದೇವಾ ? ಇದನೆಲ್ಲವಂ ನಾಂ ಅರಿಯನೇಂ ? ಆ ರುಕ್ಮಿಣಿಯ ಕೈವಾಡವಿದೆ ಇದರಲ್ಲಿ ? ಸರಿ ಸರಿ ನೀನೇ ಬಾ, ಕಾರಿನ ಸಾರಥಿಯಾಗಿ"

"ನಿನ್ನಾಣೆ ನನ್ನಾಣೆ ನಾನರಿಯೆ ಕಾರಿನ ಸಾರಥಿ ಕೆಲಸವಂ. ಮನ್ನಿಸು ಮನದನ್ನೆ, ಚಿನ್ನಾರ, ಚಕೋರ ಚಂಚಲಾಕ್ಷಿ"

"ಬಿಡು ಬಿಡು ನಾಂ ಬಲ್ಲೆ ನಿನ್ನಯ ಚಾಣಾಕ್ಷತನವಂ. ಪೊಸತಲ್ಲ ಇದು ಎಲ್ಲ. ಆ ನಿನ್ನ ಭಾವಮೈದುನ ಅರ್ಜುನಂಗೆ ಡ್ರಾಯವರನಾಗಿ ಮಿಲಿಟರಿ ಜೀಪು ನಡೆಸಿದುದ ಮರೆತೆಯಾ ? ಬಾ, ಕೃಷ್ಣ..."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಇಲ್ಲ ಭಾಮಾ ಇಲ್ಲ. ಆ ಕಾರು ಎಂದಿನದೊ, ಹಳೆಯ ಮಾಡಲಿನದು ಓಬೀರಾಯನ ಕಾಲದ್ದು. ಇದನಂ ನಾ ಓಡಿಸಲು ನಾನರಿಯೆ ಚತುರೇ."

ಇಂತು ಸತಿ ಪತಿಯರುಗಳ ಸಂವಾದ ಸಂಧಿಸಲು ಏನಾಯಿತೆಂಬುದಂ ಬಲ್ಲೆಯಾ ಪುಟ್ಟಪ್ಪ? ಅತಿ ಭಕ್ತಿ ವಿನಯುಗಳಿಂ ಕೇಳು, ಇದು ಸಾಕ್ಷಾತ್ ದೇವರ ಕಥೆ. ಒಳಗಿನಿಂದ ಬಂದಳಾ ಪಿರಿ ಗೃಹಿಣಿ ರುಕ್ಮಿಣಿ. ಪಾರಾದೆನೆಂಬಂತೆ ನೋಡಿದಾ ದೇವನಾಗ.

"ಬನ್ನಿರೈ ಮಡದಿಯರೆ, ಎನ್ನ ಹೃದಯದ ಎರಡು ಕಂಗಳು ನೀವು. ಯಾರ ಬಿಟ್ಟು ಯಾರೊಡನಿರಲಿ ನಾಂ? ಅಲ್ಲಿಲ್ಲಿ ಪೋಪುದೇ ಬೇಡೆಮಗೆ. ನಾವಾಯ್ತು ನಮ್ಮ ಬಂಗಲೆಯಾಯ್ತು, ಏನಾದರಾಡುವ."

ರುಕ್ಮಿಣೀದೇವಿಯ ಕಂಗಳಲ್ಲಿ ಕಾಂತಿ ಎನ್ನುವಂಥಾದ್ದು ಮಿನುಗಿತು.

"ಪಗಡಿಯಾಡೋಣವೇ, ಶ್ರೀ ಕೃಷ್ಣ"

ನುಡಿದು ನಿಂತಳು, ಮುಂದಿನಾ ಮಾತನ್ನು ತಡೆದು ನಿಂತಳು.

ರುಕ್ಮಿಣೀದೇವಿಯ ವಾಣಿಯಂ ಆಲಿಸಿದ ತಕ್ಷಣವೇ ಸೆಕೆಂಡ್ ಹೆಂಡತಿ ಸತೀಸವತಿ ಸತ್ಯಭಾಮಾ ದೇವಿಯವರ ಕರ್ಣದೊಳ್ ಶೀಸವಂ ಕಾಸಿ ಸುರಿದಂತಾಯಿತೋ, ಸಾಲಗೆಗೆ ಕೆಂಪಿರಿಬಿ ಕಡಿದಂತಾಯಿತೋ, ಮೊಣಕಾಲ ಎಲುಬಿಗೆ ಟೇಬಲ್ಲು ಬಡಿದಂತಾಯಿತೋ, ಏನಾಯಿತೋ ಯಾರು ಬಲ್ಲರಯ್ಯಾ? ಈ ಸತೀಮಣಿಗಳು ಪರಸ್ಪರವಾಗಿ ಎಷ್ಟು ಪ್ರೀತಿಸುತ್ತಿದ್ದರೆಂಬುದನ್ನು ಶಬ್ದಹೀನ ಸಾಹಿತಿಯಾದ ನಾನು-ಅಂದರೆ ತಿಂಮ-ವರ್ಣಿಸಲು, ಬಣ್ಣಿಸಲು, ಉಪಮಾನ ಉಪಮೇಯುಗಳಿಂದ ಹೇಳಿದ್ದನ್ನೇ ಹೇಳಲು, ಸಾವಿರ ಸುಳ್ಳುಗಳಂ ಬಳಸಿ ತಿಳಿಸಲು ನಾನೇನು ನಿನ್ನಂತೆ ಸಾಹಿತಿಯೇ ? ಆದರೂ ಅಂಜದೆ, ಹೆದರದೆ, ಭಯಪಡದೆ, ಭೀತಿ ಇಲ್ಲದೆ, ಪೇಳುವಂಥಾತ್ತನಾಗುತ್ತೇನೆ, ಚಿತ್ತವಿಟ್ಟು ಕೇಳುವಂಥಾತ್ತನಾಗಯ್ಯಾ, ಪಾಟೀಲ ಪುಟ್ಟಪ್ಪನೇ.

ಇದೇನನ್ಯಾಯ, ಪುನಃ ತೂಕಡಿಸುತ್ತಿರುವಿ! ಆಕಳಿಸುತ್ತಿರುವಿ, ಬಾಯಿಯ ಮುಂದೆ ಕೈ ಬೆರಳಿಂದ ಚಿಟಕಿ ಹೊಡೆಯುತ್ತಿರುವಿ ? ಆಗಲಿ ಈ ಕ್ಷಣವೇ ಬಿಡುತ್ತೇನೆ ನೋಡು ನನ್ನ ಮುಖಸ್ತುತಿ ಅಸ್ತ್ರವನ್ನು. ಎಲೈ, ಕೇಳು ಜನಮೇಜಯ ರಾತ್ರಿಪಾಲ...ಅಲ್ಲಅಲ್ಲ...ಪರಪಾಟು ಅನ್ನುವಂಥಾದ್ದಾಯಿತು. ಸ್ವತಃ ನನಗೇ, ತೂಕಡಿಕೆ ಬರುತ್ತಿತ್ತಲ್ಲಾ...ಕೇಳು ಪಾಟೀಲ ಪುಟ್ಟಪ್ಪನೇ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ಕು ವರ್ಷದ ಕಾಲೇಜ್ ಕೋರ್ಸನ್ನು ನಾಲ್ಕು ವರ್ಷಗಳಲ್ಲಿಯೇ ಮುಗಿಸಿದಂಥಾ ಪಾಟೀಲ ಪುಟ್ಟಪ್ಪನೇ, ಆಲಿಸುವಂಥಾತ್ತನಾಗು. ಎಲ್. ಎಲ್. ಬಿ. ಮಾಡಿಯೂ ವಕೀಲಿಮಾಡಲು ಇಳಿಯದಂಥಾ ಪ್ರಾಮಾಣಿಕನೇ...ಇಂಗ್ಲೆಂಡ್ ಅಮೇರಿಕಾ ಮುಂತಾದ ಊರುಗಳನ್ನು ಕಂಡುಬಂದಿರುವ ಗೆಳೆಯನೇ, ಕೇಳುವಂಥಾತ್ತನಾಗು ?

ಏನು ಹೇಳುತ್ತಿದ್ದೆ, ಮರೆತೇ ಹೋಯಿತಲ್ಲ ? ಹಾ ! ಜ್ಞಾಪಕವನ್ನುವಂಥಾದ್ದು ಅಗೋಣವಾಯಿತು. ಭಗವಾನ್ ಶ್ರೀಕಷ್ಣನ ಡಬ್ಬಲ್ ಬ್ಯಾರೆಲ್ ಗನ್ನಿನಂತಿದ್ದಂಥಾ ರುಕ್ಮಿಣೀ ಸತ್ಯಭಾಮೆಯರು ಒಬ್ಬರನ್ನೊಬ್ಬರು ಅದೆಷ್ಟು ಪ್ರೀತಿಸುತ್ತಿದ್ದರೆಂಬುದನ್ನು ಪೇಳುವಂಥಾತ್ತನಾಗುತ್ತೇನೆ. ಕೇಳುವಂಥಾತ್ತನಾಗು. ಮೂಷಿಕ ಮಾರ್ಜಾಲೋಪಾದಿಯಾಗಿಯೂ, ಕೀರ (ಮುಂಗಲಿ) ಸರ್ಪೋಪಾದಿಯಾಗಿಯೂ, ಉರಗ ಮಂಡೂಕೋಪಾದಿಯಾಗಿಯೂ, ವೃಕ ಬಕರಾ ಉಪಾದಿಯಾಗಿಯೂ, ಚೋರ ಪೋಲೀಸೋಪಾದಿಯಾಗಿಯೂ, ಬಳ್ಳಾರಿಯ ಆಂಧ್ರ ಕನ್ನಡ ಮೂರ್ಖ ಮುಖಂಡರೋಪಾದಿಯಾಗಿಯೂ, ಅಮೇರಿಕಾ ರಸಿಯೋಪಾದಿಯಾಗಿಯೂ, ಅವಿವೇಕಿ ಬ್ರಾಹ್ಮಣ ಅಜ್ಞಾನಿ ವೀರಶೈವರೋಪಾದಿಯಾಗಿಯೂ, ರುಕ್ಮಿಣಿ–ಸತ್ಯಭಾಮೆಯರು ಪರಸ್ಪರವಾಗಿ ಪ್ರೀತಿಸುತ್ತಿದ್ದಾರಯ್ಯೊ, ಕೇಳುವಂಥಾತ್ತನಾಗು.

'ಪಗಡಿಯಾಡೋಣವೇ?' ಎಂಬ ಶಬ್ದಶ್ರೇಣಿಯು ಆ ಓಲ್ಡ್ ಮಾಡಲ್ ವೈಫ್ ಆದಂಥಾ ರುಕ್ಮಿಣೀದೇವಿಯ ವಾಕ್ಕಿನಿಂದ ಬಂದಕೂಡಲೆ ಬಣ್ಣಹಚ್ಚಿದ ತುಟಿಯನ್ನು ಕಡಿಯುವಂಥಾಕ್ಕಿಯಾಗುತ್ತಾಳೆ ಕರೆಂಟ್ ವೈಫ್ ಆದಂಥಾ ಲೇಡಿ ಸತ್ಯಭಾಮೆ. ಕುದಿಯುವ ಸುಣ್ಣದಂತಾಗಿದೆ ಆಕೆಯ ಮುಖಕಮಲ ಅನ್ನುವಂಥಾದ್ದು, ಆ ಸತೀಮಣಿಯು ಗುಡುಗಿದಾಗ ನೋಡಬೇಕಿತ್ತು ಆಕೆಯ ಗಂಡನಾದಂಥಾ ಶ್ರೀ ಸ್ರೀ ಕಷ್ಣನ ಮುಖವನ್ನು.

"ಅಜ್ಜಿಯ ಕಾಲದ ಆಟವಾದಂಥಾ ಆ ಪಗಡಿಯನ್ನೇ ಆಡುವದಾದರೆ ನೀವೂ ಅಗತ್ಯವಾಗಿ ಆ ಮುದುಕಿ ರುಕ್ಮಿಣಿಯೊಡನೆ ಆಡಬಹುದು..."

ಇನ್ನೂ ಏನೇನನ್ನೋ ಗಂಟಲದಲ್ಲಿಯೇ ವಟಗುಟ್ಟುತ್ತ, ಬೂಟು ಅಪ್ಪಳಿಸುತ್ತ, ಬಾಬ್ಸ್ ಕೂದಲಂ ಕೆದರಿಕೊಂಡು, ಆ ಸುಂದರ ನಯನದ್ವಯಗಳಿಂದ ಪ್ರಜ್ವಲಿತಮಾದಂಥಾ ಕೆಂಡವಂ ಹಾರಿಸುತ್ತ, ಪತಿಯಂ ಫಜೀತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿಹೋಗುವಂಥಾವಳಾದಳು. ಕೂಡಲೇ ತನ್ನ ಪ್ರೈವೇಟ್ ಕೋಣೆಯಲ್ಲಿ ಬಾಗಿಲಂ ಹಾಕಿಕೊಂಡು, ಚಿಲಕವಂ ಭದ್ರಮಾಡಿಕೊಂಡು ಸುಳ್ಳು ಸುಳ್ಳೇ ಅಳಲು ಪ್ರಯತ್ನವಂ ಗೈಯುತ್ತಿದ್ದಾಳೆ. ಸರ್ವ ವ್ಯಾಪಕನಾದಂಥಾ ಪರಮಾತ್ಮನು ಆ ಕೋಣೆಯ ಒಳಗೆ ಹೇಗಾದರೂ ಬರಬೇಕೆಂದು ವ್ಯರ್ಥವಾಗಿ ಪ್ರಯತ್ನವಂ ಗೈದು ಕೈಯಲ್ಲಿದ್ದ ಶಂಖವಂ ಹೊಡೆದು ಕಟ್ಟ ಕಡೆಗೆ ಕಿಟಿಕಿಯಿಂದ ಪ್ರವೇಶವಂ ಮಾಡಿ, ವೃದ್ಧಪತಿಯು ಕಿರಿಸತಿಯ ಬಳಿ ಆಗಮಿಸುವಂತೆ ಆಗಮಿಸಿದ್ದಾನೆ. ಅದೆಂತೆನೆ (ನಾಲ್ಕೂ) ಕರಗಳಂ ಜೋಡಿಸಿ, ಸಕಿರೀಟವಾದಂಥಾ ಶಿರವಂ ಬಾಗಿಸಿ, ವದನವಂ ಅತಿ ಸಪ್ಪಗೆ ಗೈದು, ಸೊಂಟ ಬಾಗಿಸಿ ಸನಿಯ ನಿಲ್ಲುವಂಥಾತ್ತನಾಗಿದ್ದಾನೆ. 'ಸ್ತ್ರೀಣಾಂ ರೋದನಂ ಬಲಂ' ಎಂಬ ಪುರಾತನೋಕ್ತಿಗೆ ಒಪ್ಪುವಂಥಾ ರೀತಿಯಲ್ಲಿ ರೆಡಿಮೇಡ್ ಕಂಣೀರುಳ್ಳ ಆ ಸ್ತ್ರೀರತ್ನವಂ ಸಂತಯಿಸಲು ಅಶಕ್ತನಾಗಿದ್ದಾನೆ ಸರ್ವಶಕ್ತನಾದಂಥಾ ಶ್ರೀಕೃಷ್ಣ. 'ಸೂಕ್ಷ್ಮ ಬುದ್ಧಿ ಸ್ತ್ರೀಣಾಂಚೈವ' ಎಂಬುದನ್ನರಿತಿದ್ದ ಪರಮಾತ್ಮನು ಕ್ಷಣಾರ್ಧದಲ್ಲಿಯೇ ಸತ್ಯಭಾಮಾದೇವಿಯವರನ್ನು ಕುಲುಕುಲು ನಗುವಂತೆ ಮಾಡುವಂಥಾತ್ತನಾಗಿದ್ದಾನೆ. ಅರವಿಂದರ ದರ್ಶನದ ನೆರವಿನಿಂದ ಅಂದು ಪಾಂಡಿಚೇರಿಗೆ ಹೋದಾಗ ತಂದಿದ್ದ, ಹೊಸ ನಮೂನೆಯ ಮತ್ತು ಬತ್ತಲೆ ಬೊಂಬೆಗಳಿಂದ ಅಲಂಕೃತವಾಗಿದ್ದಂಥಾ ಪ್ಲಾಸ್ಟಿಕ್ ಇಸ್ಪೀಟು ಪ್ಯಾಕನ್ನು ಹೊರತೆಗೆದಿದ್ದಾನೆ. ಆಗ ಮೂವರು—ಅಂದರೆ ಒಂದು ಗಂಡು ಎರಡು ಹೆಂಡಂದಿರುಗಳು—ಚಿಕ್ಕ ಟೇಬಲ ಮುಂದೆ ಕುಳಿತು ಕಟ್ ಥ್ರೋಟ್ ಬ್ರಿಜ್ ಆಟದಲ್ಲಿ ಮಗ್ನರಾಗಿ ಮುಗುಳು ನಗೆಯಿಂದ ಆನಂದಿಸುತ್ತಿದ್ದಾರಯ್ಯಾ, ಪಾಟೀಲ ಪುಟ್ಟಪ್ಪನೇ !

ತೂಕಡಿಕೆ ಹೋಯಿತೇನಪ್ಪಾ? ಮಧ್ಯೆ ಮಧ್ಯೆ ಧೂಪಂ ಸಮರ್ಪಯಾಮಿ. ಮರೆತೇ ಬಿಟ್ಟಿದ್ದೆ, ಹಚ್ಚಯ್ಯಾ ಈ ಸಿಗರೇಟಂ. ಏಕೆ 'ಒಲ್ಲೆಯಾ' ಬಿಡುವಂಥಾತ್ತನಾಗು. ಅಮೇರಿಕಗೆ ಹೋಗಿಯೂ ಕೂಡ ಇಂತಹ ದುರಭ್ಯಾಸವನ್ನು ಸಹ ಕಲಿಯದೆ ಬಂದೆಯಾ ? ಇದ್ದ ಗೇಣಗಲದ ಹಳ್ಳಿಯಲ್ಲಿಯೇ ಏನೇನೋ ಕಲಿಯುವವರಿದ್ದಾರೆ. ಇರಲಿಬಿಡು. ಪುರಾಣವೂ ಸಹ ಮುಗಿಯುತ್ತಾ ಬಂದಿತು, ಜಾಗರೂಕನಾಗಿ ಮೈಯೆಲ್ಲವೂ ಕಿವಿಯಾಗಿ ಆಲಿಸುವಂಥಾತ್ತನಾಗು.

ಇಸ್ಪೀಟು ಆಟ ಅನ್ನುವಂಥಾದ್ದು ಒಳ್ಳೆಯ ಭರಾಟೆಯಲ್ಲಿ ಸಾಗುವಂಥಾದ್ದಾಗಿದೆ, ಅರ್ಥಾತ್ ಡೌನ್‌ನಲ್ಲಿ ಎಸ್. ಟಿ. ಗಾಡಿ ಓಡುವಂತೆ ಅಸದೃಶವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೋರಿನಲ್ಲಿ ಓಟ ಬಿಟ್ಟಿದೆ. ಥಟ್ಟನೆ ವ್ಯಾಕ್ಯೂಮ್ ಬ್ರೇಕು ಹಾಕಿದಂತಾಯಿತು! ಇದ್ದಕ್ಕಿದ್ದಂತೆ ಕೈಯಲ್ಲಿದ್ದ ಎಲೆಗಳನ್ನು ಕೆಳಗೆಸೆದು ಹೊರ ಹೊರಡಲು ಎದ್ದು ನಿಂತಿದ್ದಾನೆ ಭಗವಾನ್ ಶ್ರೀ ಕೃಷ್ಣ. ರುಕ್ಮಿಣೀ ಸತ್ಯಭಾಮೆಯರಿಬ್ಬರೂ ಅವಾಕ್ಕಾಗಿ ತಲೆಯೆತ್ತಿ ಮೇಲೆ ನೋಡುತ್ತಿದ್ದಾರೆ. ಸೂಕ್ಷ್ಮಗ್ರಾಹಿಯೂ ದುರಾಗ್ರಹಿಯೂ ಆದಂಥಾ ಸತ್ಯಭಾಮಾದೇವಿಯ ಹುಬ್ಬುಗಳು ಅನ್ನುವಂಥ ವನ್ನು ಗಂಟುಹಾಕಿ ಪತಿದೇವನ ಬುಶ್‌ಶರಟಿನ ಚುಂಗನ್ನು ಬಲಗೈಯಿಂದ ಗಟ್ಟಿ ಯಾಗಿ ಹಿಡಿದು ಕೋಪ ಸಂತಾಪಗಳಿಂದ ಕೂಡಿದಂಥಾ ಧ್ವನಿಯಲ್ಲಿ ಪಶ್ನೆ ಅನ್ನು ವಂಥಾದ್ದನು ಮಾಡುವಂಥಾಕಿಯಾಗಿದ್ದಾಳೆ.

"ಎಲ್ಲಿಗೆ ಪತಿದೇವಾ, ಹೊರಟಿರಿ ? ನಿಮ್ಮನ್ನು ಈಗ ಎಲ್ಲಿಗೂ ಹೋಗ ಗೊಡುವುದಿಲ್ಲ"

ಎಂದು ಮುಂತಾಗಿ ನುಡಿಯುತ್ತ ಅಡ್ಡಗಟ್ಟಿ ನಿಲ್ಲುವಂಥಾಕಿಯಾಗಿದ್ದಾಳೆ. ಅದೇ ಸಮಯದಲ್ಲಿ ರುಕ್ಮಿಣೀದೇವಿಯವರೂ ಕೂಡ ಸವತಿಯೊಡನೆ ಸಹಕರಿಸಿ ಪತಿಯ ನಿರ್ಗಮನಕ್ಕೆ ಪ್ರತಿಬಂಧ ಅನ್ನುವಂಥಾದ್ದನ್ನು ಮಾಡುವಂಥಾಕಿ ಯಾಗಿದ್ದಾಳೆ.

"ಇಲ್ಲ ಇಲ್ಲ, ನಾನು ಈ ತಕ್ಷಣವೇ ಹೋಗಲೇಬೇಕು. ನನ್ನನ್ನು ತಡೆ ಗಟ್ಟಬೇಡಿರಿ. ನನ್ನ ಭೂಲೋಕದ ಭಕ್ತನೊಬ್ಬನು ಮಹಾಸಂಕಟದಲ್ಲಿ ಸಿಕ್ಕು ಮರಣಪ್ರಾಯವಾದಂಥಾ ವಿಪತ್ತಿಗೆ ತುತ್ತಾಗಿದ್ದಾನೆ. ಅರೆಕ್ಷಣವೂ ವಿಳಂಬವಾಗಕೂಡದು..."

ಈ ರೀತಿಯಾದಂಥಾ ಉದ್ಗಾರವೆನ್ನುವಂಥಾದ್ದನ್ನು ತೆಗೆದಂಥಾ ಪರ ಮಾತ್ಮನನ್ನು ನಿಂದಿಸಲು ಆರಂಭಿಸಿದ್ದಾಳೆ ಸತಿ ಸತ್ಯಭಾಮಾ.

"ನಿನಗೆ ಅನುಗಾಲವೂ ಭಕ್ತರ ಚಿಂತೆಯೇ ಚಿಂತೆ. ಗಜನನ್ನು ಮೊಸಳೆ ಹಿಡಿದರೆ ಅದನ್ನು ಬಿಡಿಸಲು ಅಂದು ಓಡಿದಿ. ಅದರ ಸಹಜವಾದಂಥಾ ಆಹಾರ ವನ್ನು ಕಸಿದುಕೊಳ್ಳುವುದರಲ್ಲಿ ನಿನ್ನ ಯಾವ ಧರ್ಮದೃಷ್ಟಿಯನ್ನೂ ನಾನು ಕಾಣಲಾರೆ. ಮಾರ್ಜಾಲನ ಬಾಯಿಂದ ಮೂಷಿಕನನ್ನು ಬಿಡಿಸುವದೂ, ಸರ್ಪದ ಬಾಯಿಂದ ಮಂಡೂಕನನ್ನು ತಪ್ಪಿಸುವದೂ, ಬ್ರಾಹ್ಮಣನ ಬಾಯಿಂದ ಅನ್ನವನ್ನು ಕಿತ್ತಿಕೊಳ್ಳುವದೂ, ತಿನ್ನುವವನ ಬಾಯಿಂದ ಆಮೆಲೆಟ್ ಅಥವಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಟ್‌ಲೆಟ್ ಕಸಿದುಕೊಳ್ಳುವದೂ, ಇದೇ ಏನು ದೇವರಾದ ನೀನು ಮಾಡ ಬೇಕಾದಂಥಾ ಮಹಾ ಕಾರ್ಯ...?"

ಬಳಿಕಲಾ ಸತೀಮಣಿ ಹೀಯಾಳಿಸುವ ಶಬ್ದಗಳಿಂದ ಅಪಹೇಳನ ಅನ್ನುವಂಥಾದ್ದನ್ನು ಮಾಡುತ್ತಿರುವಾಗಲೇ ಇದ್ದಕ್ಕಿದ್ದಂತೆ ಭಕ್ತಪರಾಧೀನನೂ, ಭಕ್ತ ಪರಿಪಾಲಕನೂ, ಸದಾ ಭಕ್ತಪ್ರಿಯನೂ ಆಗಿದ್ದಂಥಾ ಚೈತನ್ಯ ಸ್ವರೂಪನಾದ ಪರಮಾತ್ಮ ಅಂದರೆ ವಿಷ್ಣುವು, ಅಂದರೆ ಶ್ರೀ ಕೃಷ್ಣನು ಮಾಯವಾಗಿ ಬಿಟ್ಟಿದ್ದಾನಯ್ಯಾ ಆ ಕೋಣೆಯಿಂದ. ಹಾಕಿದ ಬಾಗಿಲು ಹಾಕಿಯೇ ಇದೆ. ಅದ್ಭುತಾಶ್ಚರ್ಯದಿಂದ ಅಕ್ಕ ತಂಗಿಯರು ಪರಸ್ಪರ ಮುಖಗಳನ್ನು ನೋಡಿ ಕೊಳ್ಳುವಂಥವರಾಗಿದ್ದಾರೆ.

ಬಳಿಕಲಾ ರುಕ್ಮಿಣಿಯು ಸತ್ಯಭಾಮೆಯನ್ನು 'ಹೇ ತಂಗೀ!' ಎಂದು ಸಂಬೋಧಿಸಿ ದುಃಖೋಪಶಮನವನ್ನುವಂಥಾದ್ದನ್ನು ಗೈಯ್ಯುತ್ತಾಳೆ.

"ಆತನ ಲೀಲೆ ಅನ್ನುವಂಥಾದ್ದು ಅತ್ಯದ್ಭುತವಾದದ್ದು. ನಮ್ಮಂತಹ ಹುಲು ಮಾನವ ಪ್ರಾಣಿಗಳಿಗೆ ಆತನು ವಶ ಅನ್ನುವಂಥಾದ್ದು ಆಗಲಾರ. ಸರ್ವ ನಾಟಕ ಸೂತ್ರಧಾರಿಯೂ, ಸರ್ವವ್ಯಾಪಕನೂ ಆದಂಥಾ ಅವನನ್ನು..."

ಇನ್ನೂ ಏನೇನನ್ನೋ ರುಕ್ಮಿಣೀ ವಾಣಿಯು ಇನ್ನೂ ಉಸಿರುತ್ತಿರು ವಾಗಲೇ ಸಾಕ್ಷಾತ್ ಶ್ರೀ ಕೃಷ್ಣನೇ ಪ್ರತ್ಯಕ್ಷನಾಗಿ ಅವರು ಕುಳಿತ ಖೋಲಿ ಯಲ್ಲಿಯೇ ದರ್ಶನವಂ ಕೊಟ್ಟುಬಿಟ್ಟಿದ್ದಾನೆ.

ಈ ಮಹಿಳಾ ಮಣಿಯರಿಗೆ ಆಶ್ಚರ್ಯವನ್ನುವಂಥಾದ್ದು ನೂರು ಪಾಲು ಆನಂದವೆನ್ನುವಂಥಾದ್ದು ಸಹಸ್ರಪಾಲು ಆಗಿದೆ. ಚೇತರಿಸಿಗೊಂಡಂಥಾ ಸತ್ಯ ಭಾಮಾ ಪ್ರಶ್ನೆಮಾಡಿದ್ದಾಳೆ ಪತಿದೇವನಂ ಕುರಿತು,

"ಎಲೈ ಸಾಕ್ಷಾತ್ ದೇವನೇ ಆಹಾ! ಇಷ್ಟು ಬೇಗ ಭೂಲೋಕಕ್ಕೆ ತೆರಳಿ ಭಕ್ತನಂ ಉದ್ಧರಿಸಿ ಅದು ಹೇಗೆ ಬಂದೆ? ನಿನ್ನಯ ಲೀಲಾ ಅನ್ನುವಂಥಾದ್ದು ಅಗಾಧವಾಗಿದೆ. ನಿನ್ನಯ ವೃತ್ತಾಂತವಂ ಪೇಳು"

ಎಂದು ಆ ಸತೀಮಣಿಯು ನಿಗರ್ವಿಯಾಗಿ ನುಡಿದಾಗ ಹಸನ್ಮುಖಿಯಾದ ಕೃಷ್ಣನು ಅಪ್ಪಣೆ ಕೊಡಿಸುವಂಥಾತ್ತನಾಗಿದ್ದಾನೆ ಇಬ್ಬರನ್ನೂ ಕುರಿತು.

"ಎಲೈ! ಯನ್ನಯ ನಯನದ್ವಯಂಗಳೇ, ಬೆಸಗೊಳ್ಳುವಂಥವರಾಗಿರಿ. ನನ್ನ ಇಂದಿನ ವೃತ್ತಾಂತದಲ್ಲಿ ಅದ್ಭುತವಾದುದೂ ಇಲ್ಲ, ಅಗಾಧವಾದುದೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲ, ಆಶ್ಚರ್ಯದಾಯಕವಾದುದೂ ಇಲ್ಲ. ಮುಖ್ಯವಾಗಿ ನಾನು ಹೋಗ ಬೇಕಾದ ಅವಶ್ಯಕತೆಯೇ ಇರಲಿಲ್ಲ. ನಾನು ಹೋಗುತ್ತಲೂ ಇರಲಿಲ್ಲ ಮುಂಚಿತವಾಗಿಯೇ ಯನಗೆ ತಿಳಿದಿದ್ದರೆ...ಏಕೆಂದರೆ ನಾನು ಹೋಗಿ ಭೂಲೋಕವನ್ನು ಸೇರುವವಳಗಾಗಿಯೇ, ಗಂಡಾಂತರಕ್ಕೀಡಾಗಿದ್ದ ನನ್ನಭಕ್ತನು ದ್ವಾಪರಾಯುಗದ ದ್ರೌಪದಿ, ಧ್ರುವ, ಪ್ರಹ್ಲಾದ, ಗಜೇಂದ್ರ ಮುಂತಾದವರಂತೆ ನನ್ನ ಹಾದಿಯನ್ನೇ ಕಾಯುತ್ತ ಕೂಡದೆ, ಸ್ವತಃ ತಾನೇ, ಕೇವಲ ಸ್ವಯಂ ಪ್ರಯತ್ನದಿಂದಲೇ, ಅಲ್ಲದೆ ನನ್ನ ಅದಾವ ಸಹಾಯವು ತೃಣಮಾತ್ರವೂ ಲವಲೇಶವೂ ಇಲ್ಲದೆ, ತಾನೇ ಆಗಲೇ ಪಾರಾಗಿಬಿಟ್ಟಿದ್ದ. ಇದೇ ನೋಡಿರಿ ಕಲಿಯುಗದ ಭಕ್ತರ ಮಹಿಮೆ."

ಇಷ್ಟರೊಳಾ ವಿಷಯವಂ ಗ್ರಹಿಸುವ ಕುತೂಹಲ ಅನ್ನುವಂಥಾದ್ದು ಈರ್ವರಲ್ಲಿಯೂ ಉಕ್ಕೇರಿ ಬರುವಂಥಾದ್ದಾಗಿದೆ. ಬಹುಪ್ರಕಾರವಾಗಿ ದೇವನಂ ಕೊಂಡಾಡಿ ಪತಿದೇವನಲ್ಲಿ ಅರಿಕೆ ಅನ್ನುವಂಥಾದ್ದನ್ನು ಮಾಡಿಕೊಂಡಿದ್ದಾರೆ. ಆ ಭಕ್ತನ ವೃತ್ತಾಂತವಂ ಸಂಪೂರ್ಣವಾಗಿ ಪೇಳೆಂದು.

"ಎಲೈ, ನನ್ನ ಅರ್ಧಾಂಗಿಯರೆ...ಅಲ್ಲ ಅಲ್ಲ...ಕಾಲಾಂಗಿಯರೇ ! ಕೇಳು ವಂಥಾವರಾಗಿರಿ. ಈ ಕಲಿಯುಗದ ಭಕ್ತರ ಕತೆಗಳು ಕೇಳುವಂಥವು ಇರುತ್ತವೆ. ಹೇಳುವಂಥವೂ ಇರುತ್ತವೆ. ಸಂಕಷ್ಟದಲ್ಲಿ ಬಿದ್ದಿದ್ದಂಥಾ ಆ ನನ್ನ ಭಕ್ತನು ಯಾರೆಂಬುದನ್ನು ಬಲ್ಲಿರಾ ? ಅವನೊಬ್ಬ ದರೋಡೆಕಾರ, ದುಡಿದು ತಿನ್ನಲಾರದವನು ಅಷ್ಟೇ ಅಲ್ಲ ಸಾತ್ವಿಕರಿಗೆ ವಂಚನೆ ತೊಂದರೆಗಳನ್ನು ಕೊಟ್ಟು ರಾಕ್ಷಸ ರೀತಿಯಲ್ಲಿ ಬಾಳುವವನು"

ಮಧ್ಯೆ ಮಧ್ಯೆ ಪ್ರಶ್ನಾವಳಿ ಸುರುವಾಯಿತು ಸತ್ಯಭಾಮಮ್ಮನವರಿಂದ.

"ಅಂತಹ ಅಯೋಗ್ಯನಿಗೆ ನೀವೇಕೆ ಸಹಾಯ ಮಾಡಬೇಕೊ ! ಅಲ್ಲದೆ ಅವನಿಗೆ ಅದಾವ ಗಂಡವು ಬಂದಿತ್ತು ? ಅದೂ ಅಲ್ಲದೆ ಅವನು ನಿಸ್ಸಹಾಯ ಶೂರನಂತೆ ಹೇಗೆ ಪಾರಾದ ? ಇವೆಲ್ಲವಂ ತಿಳಿಯಲು ಯನ್ನ ಮತ್ತು ರುಕ್ಮಿಣಿಯ ಮನಂಗಳು ತವಕಪಡುತ್ತಿವೆ."

"ಆಲಿಸುವಂಥವರಾಗಿ ಪತ್ನಿದ್ವಯರೇ, ಆ ಮಹಾ ಚಾಂಡಾಲನ ಆತ್ಮ ಚರಿತ್ರೆಯನ್ನು. ಅವನು ರಾಕ್ಷಸ ರೀತಿಯಲ್ಲಿ ಬಾಳಿ ಸಾತ್ವಿಕರಿಗೆ ಹಿಂಸೆ ಕೊಟ್ಟ ಮಾತ್ರದಿಂದ ಅವನು ನನ್ನ ಭಕ್ತನಲ್ಲವೇ ? ಅವನ ಬೆಂಗಾವಲಿಗೆ ನಿಂತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನನ್ನು ಪಾರುಮಾಡುವುದು ನನ್ನ ಪ್ರಪ್ರಥಮ ಕರ್ತವ್ಯ. ಇನ್ನು ಅವನಿಗೆ ಅದಾವ ಗಂಡಾಂತರವು ಘಟಿಸಿದ್ದಿತೆಂದು ತಿಳಿಯಲೆಳೆಸುವಿರಾ ? ದರೋಡೆ ಮಾಡಿದವರಿಗೆ ಬೇರಾವ ಗಂಡಾಂತರವಿದೆ ? ಪೋಲೀಸರ ಕೈಯಲ್ಲಿ ಸಂಪೂರ್ಣ ವಾಗಿ ಸಿಕ್ಕಿಬಿದ್ದಿದ್ದ."

ನಡುವೇ ಬಾಯಿ ಹಾಕಿದಳು ಸಾಧ್ವೀ ರುಕ್ಮಿಣಿ.

"ಅಲ್ಲ ಪತಿದೇವಾ ? ಪೋಲೀಸರ ದವಡೆಯಲ್ಲಿ ಸಿಕ್ಕಿದ್ದ ಆ ನಿನ್ನ ಭಕ್ತನಾದ ದರೋಡೆಕಾರನು ಅದು ಹೇಗೆ ತಾನೇ ಪಾರಾದ, ನಿನ್ನ ಸಹಾಯವೂ ಇಲ್ಲದಲೆ ?"

"ರಾಜಕೀಯದಲ್ಲಿ ಧುಮುಕಿಬಿಟ್ಟಾ, ಪುಢಾರಿಯಾಗಿ ಪಾರಾಗಿಬಿಟ್ಟಾ !"

ಎಂದನು ಕೃಷ್ಣ ಪರಮಾತ್ಮ.

ಕೇಳುವಂಥಾತ್ತನಾಗಪ್ಪಾ ಪಾಟೀಲ ಪುಟ್ಟಪ್ಪಾ, ಮುಂದೇನಾಯಿತೆಂದು ಮಾತ್ರ ಕೇಳಬೇಡಾ. ಆಗ ಆದದ್ದನ್ನು ಹೇಳಲು ನನ್ನಲ್ಲಿ ಸಾಕಷ್ಟು ಸಾಹಿತ್ಯವೂ ಇಲ್ಲ. ಶೈಲಿಯಂತೂ ಮೊದಲೇ ಇಲ್ಲ. ಆಗ ಆದದ್ದು ಇಷ್ಟೇ ಎಂದು ಮಾತ್ರ ಹೇಳಬಲ್ಲೆ—ಮೂವ್ವರೂ ಹಣೆ ಹಣೆ ಬಡಿದುಕೊಂಡು ಕುಳಿತುಬಿಟ್ಟರು.

ಇತಿ ಶ್ರೀ ತಿಂಪಲೀಲಾ ಬೋಧಾಮೃತಸಾರ ಮಂಜರೀ ಬೀಚಿ—ಪಾಪು ಸಂವಾದೇ ಸಮಾಪ್ತಿಃ

ತಿಂಮಾಯ ತಸ್ಮೈ ನಮಃ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಸ್ತಿಕ ಮಹಾರಾಜ

ನಮ್ಮೂರಿನ ಭದ್ರಾಚಾರಿಯ ಮಗ ಕಾಳಾಚಾರಿ ಆಸ್ತಿಕ ಮಹಾರಾಜ ಆದುದೇ ನನಗೆ ಗೊತ್ತಿರಲಿಲ್ಲ.

ಆ ಕಾಳ ನನಗೆ ಗೊತ್ತಿಲ್ಲವೆ ? ನಮ್ಮೂರಿನ ಹುಡುಗ. ನಮ್ಮ ಕಂಣು ಮುಂದೇ ಹುಟ್ಟಿ ಬೆಳೆದ—ಅಲ್ಲ, ಹುಟ್ಟಿದ್ದು ಪ್ರಾಯಶಃ ಸೂಲಗಿತ್ತಿಯ ಕಂಣ ಮುಂದು, ನಮ್ಮ ಕಂಣ ಮುಂದು ಬೆಳೆದ ಮಾತ್ರ.

ಜೋಡೆಲುಬಿನ ಮೈ, ವಯಸ್ಸಿಗೆ ಮೀರಿ ಬಲಿತ ದೇಹ ಅವನದು. ಆಳು ಕುಳ್ಳು, ಮೈ ಬಂಣ ಸರೇ ಸರೆ. ಆ ಚುರುಕು ಮತಿ, ಮತ್ತು ಈ ಗಟ್ಟಿ ಬಂಣ ಎರಡೂ ಅವರಿಗಾಗಿ ಮೀಸಲು.

ಕ್ರಾಪಿನ ಕಾಲವಲ್ಲ ಅದು. ಬಹು ಕೀಳು ಜನ, ಹಗಲಿನಲ್ಲೇ ಹೆಂಡ ಕುಡಿದು ತಪ್ಪಟಿ ಬಾರಿಸುತ್ತ ಕೇಕೆ ಹಾಕುತ್ತ ಹೋಳಿ ಹಬ್ಬದ ಇನಾಂ ಕೇಳಲು ಬರುತ್ತಿದ್ದ ದುರುಗ. ಶೇಷನಂತಹರಷ್ಟೆ ಆಗೆಲ್ಲ ತಲೆ ತುಂಬ ಕೂದಲಿಟ್ಟು ಕ್ರಾಪು ಕತ್ತರಿಸಿಕೊಳ್ಳುತ್ತಿದ್ದರು. ಬೇರೆಲ್ಲರೂ ನುಂಣಗೆ ತಲೆ ಬೋಳಿಸುವುದು. ಉತ್ತಮ ಜಾತಿಯವರೆಂದು ತಿಳಿದುಕೊಂಡವರು ತಲೆಯಲ್ಲಿ ಜುಟ್ಟು ಧರಿಸುತ್ತಿದ್ದರು. ಭದ್ರಾಚಾರಿಯ ಮಗ ಕಾಳಾಚಾರಿಯ ತಲೆಯಲ್ಲಿ ಜುಟ್ಟಿತ್ತು.

ತುಂಬು ಕಂಣು, ವಿಶಾಲವಾದ ಹಣೆ, ಹುಬ್ಬು ಕೊಂಚ ದಪ್ಪ. ಆರ್ಯರ ಪೀಳಿಗೆಯ ಮೂಗು—ನೀಟಾಗಿ, ನೇರವಾಗಿ, ಎದ್ದು ನಿಂತಂತೆ. ಮೀಸೆ ? ಹೂಂ, ಗಂಡೆಂದ ಮೇಲೆ ಮೀಸೆ ಬಾರದಿರುತ್ತೆಯೆ ? ಮೆದುಳಿನಂತೆ ಮೀಸೆಯನ್ನೂ ಧಾರಾಳವಾಗಿಯೇ ಕೊಟ್ಟಿದ್ದ ದೇವರು. ಇವನದನ್ನು ಕತ್ತರಿಸಿ, ಏನೇನೋ ಮಾಡಿ ಇರುವೆ ಸಾಲಿನಂತೆ ಮಾಡಿಕೊಂಡಿದ್ದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ನಮ್ಮ ಕಾಳಾಚಾರಿ ಆಸ್ತಿಕ ಮಹಾರಾಜ ಆದುದು ಎಂದು ?

ಆ ವಿಷಯ ನನಗೂ ಹೊಸತು. ಒಂದು ಸಂಜೆ ಅವನ ಬಾಯಿಂದಲೇ ಕೇಳಿ ತಿಳಿದೆ.

ನಮ್ಮೂರಲ್ಲಿ ಒಂದು ರೀಡಿಂಗ್ ರೂಮ್ ಸುರುಮಾಡಿದೆವು. ಮಾಮೂಲಿ ಜನಗಳಿಗೆ ರಮ್ಮೀ. ಶ್ರೀಮಂತರು ಮೂರೆಲೆ ಆಡಿದರು. ಇದರ ಹೆಸರು ಮಾತ್ರ ರೀಡಿಂಗ್ ರೂಮು.

ಹೆಂಡದಂಗಡಿಯನ್ನು ಹೆಂಡದಂಗಡಿ ಎಂದೇ ಅನ್ನಬೇಕು. ದೇವಾಲಯ ವನ್ನು ದೇವಾಲಯವೆಂದೇ ಕರೆಯಬೇಕು. ಇದಕ್ಕೆ ಲಕ್ಷಣವಾಗಿ ಕ್ಲಬ್ ಎಂದೇ ಹೆಸರಿಡಿ ಎಂದಂದೆ ನಾನು.

ನಮ್ಮ ಡಾಕ್ಟರ್ ಒಪ್ಪಲಿಲ್ಲ. ಆಮೇಲೆ ನನಗೆ ಗುಟ್ಟಾಗಿ ಹೇಳಿದರು. ಅವರ ಯಜಮಾನಿ ಕ್ಲಬ್‌ಗೆ ಅಂದರೆ ಒಂದು ಬಿಡಿ ಕಾಸೂ ಕೊಡುವುದಿಲ್ಲವಂತೆ. ಆದಕಾರಣ ಅದರ ಹೆಸರು ಬಾಪೂಜೀ ರೀಡಿಂಗ್ ರೂಮ್ ಆಯಿತು. ಗಾಂಧೀಜಿ ಅವರ ಪಾಪಾವಶೇಷ, ಅವರ ಹೆಸರಿನಲ್ಲಿ ಏನೇನೋ ಎಂತೆಂತಹವೋ ಆಗುತ್ತವೆ, ಇದೂ ಒಂದು.

ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ—ಆ ಬಾಪೂಜೀ ರೀಡಿಂಗ್ ರೂಮ್‌ನಲ್ಲಿ ನನಗೇನು ಕೆಲಸ ? ಆದರೂ ಆಗಾಗ್ಗೆ ಹೋಗುತ್ತಿದ್ದೆ. ಇಸ್ಪೀಟು ಆಡುವವರ ಪಕ್ಕದಲ್ಲಿ ಕುಳಿತು ನೋಡುವುದು ಕ್ರಮೇಣ ಅಭ್ಯಾಸವಾಯಿತು, ಮೋಜೆನಿಸಿತು. ಸಿನೆಮಾದಲ್ಲಿ ಖಡ್ಗದ ಮೀಸೆ ನಾಯಕನನ್ನು ಆ ಚೆನ್ನಾರ ಚೆಲುವೆ ತುಂಬು ಯೌವನದ ನಾಯಕಿ ಮುತ್ತಿಕ್ಕಿದಾಗ ಸಂತೋಷದಿಂದ ಹಿರಿ ಹಿರಿ ಹಿಗ್ಗಿ ಕೋತಿಯಂತೆ ಹಲ್ಲು ಕಿರಿಯುವ ಜನ ಇಲ್ಲವೆ ? ನನ್ನದೂ ಅದೇ ಪರಿಸ್ಥಿತಿ ಪ್ರಾಯಶಃ

ರಾಮಸೆಟ್ಟರ ಕೈಯಲ್ಲಿ ಎರಡು ಎಕ್ಕಾ, ಒಂದು ಪುಡಿ, ಡಾಕ್ಟರ್ ಕೈಲಿ ಏನಿದೆಯೋ ಅವರಿಗೆ ಗೊತ್ತು, ದೇವರಿಗೆ ಗೊತ್ತು. ಉಳಿದೆಲ್ಲ ಕೈ ಸತ್ತಿವೆ. ಐದು, ಹತ್ತು ರೂಪಾಯಿ ನೋಟುಗಳು ಕಸವಾಗಿ ಬಿದ್ದವು—ಮೂರೆಲೆ ಆಟದಲ್ಲಿ ಲಕ್ಷ್ಮಿ ಕಸ, ಎಕ್ಕಾಗಳು ಲಕ್ಷ್ಮಿಯ ಗಂಡರು.

ರಾಮಸೆಟ್ಟಿ ನೂರು ರೂಪಾಯಿ ನೋಟು ಎಸೆದ.

ಡಾಕ್ಟರು ನಾಡಿ ಮುಟ್ಟಿ ನೋಡಿಕೊಂಡರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಅಯ್ಯಯ್ಯೊ! ಹಾ..."

ಇದ್ದಕ್ಕಿದ್ದಂತೆ ಚೀರಿದರು ಅದಾರೋ. ಎಲ್ಲರೂ ಧಿಡೀಲೆಂದು ಎದ್ದೆವು, ಕಸವನ್ನು ದೇವರುಗಳನ್ನು ಕೂಡ ಅಲ್ಲಿಯೇ ಎಸೆದು ಓಡಿದ ರಾಮಸೆಟ್ಟಿ. ಹೊರಬಂದು ನಿಂತೆವು.

ಒಂದು ಮಾರುದ್ದ ಇದೆ ಹಾವು!

"ಹೊಡೆಯಿರಿ ಹೊಡೆಯಿರಿ."

"ಛೆ ಛೆ! ನಾಗರಹಾವು ದೇವರದು"

"ಹಾಲು ಇಟ್ಟುಬಿಡಿ, ಕುಡಿದು ಹೋಗುತ್ತದೆ"

"ಬೇಡ ಬೇಡ, ದಿನಾಲೂ ಬರುತ್ತದೆ ಆ ಮೇಲೆ"

ಹೀಗೆಯೆ ನಾಲ್ಕು ಜನ ಸೇರಿದಲ್ಲಿ ನಾಲ್ಕು ಮಾತು.

"ಆಸ್ತಿಕ ಮಹಾರಾಜರನ್ನು ಕರೆಯಿರಿ, ಅವನು ಹಿಡಿಯುತ್ತಾನೆ"

ಒಬ್ಬ ಕಿರಿಯ ಆ ಕೂಡಲೆ ಬೈಸಿಕಲ್ ಏರಿ ನಡೆದ. ಐದೆಂದರೆ ಐದೇ ನಿಮಿಷ, ಬಂದ ಆಸ್ತಿಕ ಮಹಾರಾಜ. ಯಾರು ಈ ಆಸ್ತಿಕ ಮಹಾರಾಜ? ನಮ್ಮ ಭದ್ರಾಚಾರಿಯ ಮಗ ಕಾಳಾಚಾರಿ!

"ನಮಸ್ಕಾರ ಸ್ವಾಮೀ!"

ಎಂದಂದ ನನಗೆ, ಡಾಕ್ಟರರಿಗೆ ಕೈಮುಗಿದ. ದುಡುದುಡು ನಡೆದ ಒಳಗಡೆ. ಒಳಹೋಗುವ ಮುನ್ನ ಜೇಬಿನಿಂದ ಚಿಕ್ಕೊಂದು ಕಾಗದದ ಪೊಟ್ಟಣವನ್ನು ತೆರೆದ. ಕುಂಕುಮ ಇತ್ತು. ಭ್ರೂ ಮಧ್ಯೆ ದಪ್ಪನಾಗಿ ಹಚ್ಚಿಕೊಂಡ, ಇನ್ನು ಕೊಂಚ ಕಂಠಿಗೆ ತಾಗಿಸಿ ಕತ್ತಿಗೆ ಸವರಿದ.

"ಬಾ ನಾಗಪ್ಪಾ! ಇಲ್ಲಿ ಯಾಕೆ ಬಂದೆ ಸ್ವಾಮೀ, ನೀನು? ಬಾ, ಹೋಗೋಣ."

ಇಷ್ಟೇ ಆ ಕಾಳಾಚಾರಿ ಅಂದುದು. ಆ ಅದ್ಭುತವಾದ ಸರ್ಪ ಸಾಕಿದ ನಾಯಿಯಂತೆ ಬರಬೇಕೇ ಅವನು ನಿಂತಲ್ಲಿ? ಬೆಕ್ಕಿನ ಮರಿಯೇ ಅದು? ತಲೆ ನೇವರಿಸುತ್ತಾನೆ, ಮುಖಕ್ಕೆ ಮುದ್ದು ಮಾಡುತ್ತಾನೆ ಅದಕ್ಕೆ. ಹಾವು ಕಾಳಾಚಾರಿಯ ಪಾಲಿಗೆ ಒಂದು ಬಟ್ಟೆ, ನೀರಪಂಚೆ! ಆ ಹಾವನ್ನು ಭುಜದ ಮೇಲೆ ಹೊದ್ದು ಹಾಯಾಗಿ ನಡೆದ.

ಆ ರಾತ್ರಿ ರಾಮಸೆಟ್ಟಿಗೆ ನೂರ ಮೂರು ಡಿಗ್ರಿ ಜ್ವರವಂತೆ, ಪಾಪ!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಳಾಚಾರಿ ತಾನು ಹಿಡಿದ ಹಾವನ್ನು ಕೊಲ್ಲುವಂತಿಲ್ಲ, ಊರ ಹೊರಗಡೆ ದೂರ ಒಯಿದು ಬಿಟ್ಟುಬಿಡುತ್ತಾನಂತೆ. ಹಾವು ಹಿಡಿದುದಕ್ಕಾಗಿ ಯಾರಿಂದಲೂ ರೂಪಾಯಿ ತೆಗೆದುಕೊಳ್ಳಕೂಡದು—ಐದು ಪೈಸೆ, ಐದು ತೆಂಗಿನಕಾಯಿ, ಐದು ಮುಷ್ಟಿ ಅಕ್ಕಿ ಮಾತ್ರ ತೆಗೆದುಕೊಂಡ ನಮ್ಮಿಂದ. ಆ ದಿನ ಅದೇ ಅಕ್ಕಿ ಬೇಯಿಸಿ ತಿನ್ನಬೇಕು ಆತ, ಬೇರೇನೂ ತಿನ್ನಕೂಡದಂತೆ. ಏನೇನೋ ಕತೆ ಮಾಡಿ ಹೇಳಿದ.

"ಬಹಳ ಕಟ್ಟುನಿಟ್ಟು ವ್ರತ ಸ್ವಾಮೀ ಈತಂದು. ಕೊಂಚ ಲೋಪ ಆದರೆ ಮುಗಿಯಿತಲ್ಲಾ, ಜೀವಕ್ಕೇ ಸಂಚಕಾರ. ಸುಬ್ರಮಣ್ಯಸ್ವಾಮೀ ಸಹವಾಸ ಬಹು ಕಷ್ಟ."

"ನಿನಗ್ಯಾರೋ ಇದೆನ್ನೆಲ್ಲ ಕಲಿಸಿದರು ?"

ಎಂದು ಕೇಳಿದೆ ನಾನು.

"ಗುರುಗಳು"

ಎಂದಷ್ಟೆ ಅಂದ. ಗುರುವಿನ ಹೆಸರನ್ನು ಶಿಷ್ಯ ಬಾಯಿಂದ ಅನ್ನಕೂಡ ದಂತೆ. ಗುರು ಶಿಷ್ಯ ಪರಂಪರೆಯ ಸಂಪ್ರದಾಯ ಅದು. ಅದಾರೊ ಇನ್ನೊಬ್ಬರು ಹೇಳಿದರು ಹಾಗೆಂದು.

"ಈ ಆಸ್ತಿಕ ಮಹಾರಾಜ ಎಂಬ ಬಿರುದು ಯಾರು ಕೊಟ್ಟರಯ್ಯಾ ನಿನಗೆ ?"

ಎಂದು ಕೇಳಿದೆ.

"ಸಾಹಿತ್ಯ ಸಮ್ಮೇಳನವಾಯಿತಲ್ಲ ಸ್ವಾಮೀ ಆಗ ? ಯಾವ ಊರದೂ... ಹೊಳೆಯಾಚೆ..."

ಎಂದಾರಂಭಿಸಿ ಕಾಳಾಚಾರಿ ಇಷ್ಟುದ್ದನ ಕತೆಯನ್ನೇ ಹೇಳಿದ.

ಬಿದಿರು, ಚಾಪೆ ತಂದು ಹಾಕಿದ್ದರಂತೆ ಮಂಟಪ ಕಟ್ಟಲು. ಚಾಪೆ ಸುರುಳಿಯಿಂದ ಬುಸ್ ಎಂದೊಂದು ಹಾವು ಬಂತಂತೆ. ಅದನ್ನಿವನು ಹಿಡಿದ. ಯಾರೋ ಹತ್ತು ರೂಪಾಯಿ ಕೊಡಲು ಬಂದರೆ, ಬೇಡ ಸ್ವಾಮೀ, ಸಭೆಯಲ್ಲಿ ನನಗೊಂದು ಬಿರುದು ಕೊಡಿಸಿಬಿಡಿ ಸಾಕು ಎಂದನಂತೆ ಇವನು.

"ಅಧ್ಯಕ್ಷರು ತಮ್ಮ ಕೈಯಿಂದಲೇ ಕೊಟ್ಟಿದ್ದಾರೆ ಸ್ವಾಮೀ ಖಿಲ್ಲತ್ತು"

ಅದೇನು ಹೆಮ್ಮೆಯೋ ಕಾಳಾಚಾರಿಗೆ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊನೆಯಲ್ಲಿ ಇದನ್ನು ಹೇಳಿ ಕೈಮುಗಿದು ನಡೆದ.

"ಆದರೂ ಬಹು ಕಷ್ಟ, ಸ್ವಾಮೀ ಈ ಸಹವಾಸ. ಆತ ಬ್ರಹ್ಮಚಾರಿ ನೋಡೀ, ನಾಗರಾಜಾ ! ನಾವೂ ಆತನಂತೇ ಇರಬೇಕು."

ನಾಗರಾಜ ಬ್ರಹ್ಮಚಾರೀ ? ಎಲ್ಲೆಲ್ಲು ನೋಡಿದರೂ ಅವನ ಸಂತತಿಯೇ!

ನೆಗಡಿಯಾದಾಗಷ್ಟೆ ಮೂಗಿನ ನೆನಪು—ಹಾವು ಬಂದಾಗ ಮಾತ್ರವೆ ಆಸ್ತಿಕ ಮಹಾರಾಜ. ಐದಾರು ವರ್ಷಗಳು ಸಂದುವು. ಎಲ್ಲ ರಾಜ ಮಹಾ ರಾಜರುಗಳಂತೆ ಆಸ್ತಿಕ ಮಹಾರಾಜನೂ ಸ್ಮರಣೆಯಿಂದ ಜಾರಿಹೋದ.

ಬೇಸಿಗೆ ರಜೆ ಸ್ಕೂಲು, ಕಾಲೇಜುಗಳಿಗೆ. ಮಕ್ಕಳು ಎಲ್ಲಿಗಾದರೂ ಹೋಗಲೇಬೇಕು. ಬಂದರು ಅಲ್ಲಿಲ್ಲಿಂದ—ತಮ್ಮನ ಮೊಮ್ಮಕ್ಕಳು, ಚಿಕ್ಕಪ್ಪನ ಚಿಕ್ಕ ಪುಟ್ಟ ಮಕ್ಕಳು, ಅವರ ತಾಯಂದಿರು ಎಲ್ಲರೂ. ಮನೆ ತುಂಬಿತು, ಮನಸ್ಸೂ ತುಂಬಿತು. ಮಕ್ಕಳಿದ್ದರೆ ಮನೆ ಚೆಂದ—ಎರಡು ದಿನವಿದ್ದು ಊರಿಗೆ ಹೋಗುವ ಪರರ ಮಕ್ಕಳು ಅವು. ಅದಕ್ಕಾಗಿಯೇ ಚೆಂದ.

ಹುಣಿಮೆ ರಾತ್ರಿ ಬೆಳದಿಂಗಳೂಟದ ಕಾರ್ಯಕ್ರಮ. ಚಿಕ್ಕ ಮನೆ ಇದ್ದಷ್ಟೂ ಅಂಗಳ ದೊಡ್ಡದು. ಕೈತುತ್ತು ಊಟಕ್ಕಾಗಿ ಸುತ್ತುಕಟ್ಟಿ ಕುಳಿತವು ಮಕ್ಕಳು. ನಗು, ಅಳು, ಚಿಕ್ಕದಾಗಿ ಜಗಳ ಹೀಗೇ ಏನೇನೋ. ಇದೂ ಒಂದು ಹಬ್ಬ. ಈ ದೃಶ್ಯವನ್ನು ದೇವತೆಗಳು ಸ್ವರ್ಗದಿಂದಿಳಿದು ಬಂದು ನೋಡಬೇಕು.

ಒಳಗಡೆ ಕೋಣೆಯಲ್ಲಿ ಹಾಸಿಗೆ ಮಾಡುತ್ತಿದ್ದಳು ಮನೆ ಕೆಲಸದ ನಂಜಿ.

"ಅಪ್ಪನೋರೇ ಅಪ್ಪನೋರೇ !"

ಎಂದು ಚೀರುತ್ತ ಹೊರಕ್ಕೋಡಿ ಬಂದಳು.

ನಾನೇ ಬೆಚ್ಚಿಬಿದ್ದೆ, ಮಕ್ಕಳ ಮಾತು ಹಾಗಿರಲಿ.

ಮಂಚದಡಿ ಹಾವು !

ತುಂಬಿದ ಮನೆ, ಮಕ್ಕಳು ಮರಿ ಗುಂಪು ಗುಂಪಾಗಿ ಸೇರಿವೆ. ರಾತ್ರಿ ಸಮಯ. ಮಲಗುವ ಕೋಣೆಯಲ್ಲಿ ಹಾವು !

ಯಾರಿಗೆ ತಾನೆ ತಲೆ ಸಮವಾಗಿ ಉಳಿಯಲು ಸಾಧ್ಯ ?

"ಕೋಣೆ ಬಾಗಿಲು ಹಾಕಿಬಿಡಿ ಮೊದಲು"

"ಹಾವು ಹೊರಗೆ ಹೋಗುವುದು ಹೇಗೆ ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಯಾರನ್ನಾದರೂ ಕರೆಯಿಸಿ ಕೊಲ್ಲಿಸಿಬಿಡಿ"

"ಛೆ, ಉಂಟೆ ? ನಾಗರಹಾವಂತೇ"

"ಹೌದೇ ?"

"ನಂಜಿ ಹೇಳಲಿಲ್ಲವೆ ? ಹೆಡೆ ತೆಗೆದು ಕುಳಿತಿದೆ ಅಂತೆ."

"ಹೌದಂತೆ, ಕಂಣು ತಳತಳ ಹೊಳೆಯುತ್ತದಂತೆ"

ಎಲ್ಲರೂ ಮಾತನಾಡುವವರೇ. ಎದ್ದು ಹೋಗಿ ಬಾಗಿಲ ಸಂದಿನಿಂದ ನೋಡಿದೆ.

ಭಯಂಕರವಾಗಿದೆ ಹಾವು ! ಅಷ್ಟು ದೊಡ್ಡದಲ್ಲ — ಮಿಡಿನಾಗರ ಇರಬೇಕು. ಪುಟ್ಟ ಹೆಡೆ, ಕಂಣು ಬೆಂಕಿಯ ಕಿಡಿ. ಇನ್ನೂ ಅಲ್ಲಯೇ ಕುಳಿತಿದೆ. ಸ್ಪಷ್ಟವಾಗಿ ಹೋಯಿತು. ಕಪ್ಪೆ ತಿಂದಿದೆ. ಸಂಕಟ ಬಂದಾಗ ವೆಂಕಟರಮಣ —ಆಸ್ತಿಕ ಮಹಾರಾಜ ಸ್ಮರಣೆಗೆ ಬಂದ.

"ಭದ್ರಾಚಾರಿ ಮಗ ಇದ್ದರೆ ಕರೆಯೋ"

ಮಗನಿಗೆ ಹೇಳಿದೆ. ಓಡಿದ ಅವನು ಆ ಕೂಡಲೆ.

ಅಕ್ಕಪಕ್ಕದ ಮನೆಯವರೆಲ್ಲ ಸೇರಿದರು.

"ಈಗವನು ಅಷ್ಟಾಗಿ ಹಾವು ಹಿಡಿಯುತ್ತಿಲ್ಲವಂತೆ."

"ಹಿಡಿಯುತ್ತಾನೆ, ಆದರೆ ಮೊದಲಿನ ಆ ಮಂತ್ರಶಕ್ತಿ ಇಲ್ಲವಂತೆ ಈಗ."

"ಅದೆಲ್ಲೋ ಹೋಗಿದ್ದನಲ್ಲ ? ಇವನು ಕರೆದರೆ ಮೊದಲಿನಂತೆ ಹಾವು ಬರಲಿಲ್ಲವಂತೆ."

"ಸಾಕಿದ ನಾಯಿ ಬಂದಂತೆ ಬಂತು ನಮ್ಮ ರೀಡಿಂಗ್ ರೂಮ್‌ನಲ್ಲಿ ಆಗಾ ?"

ನಾನು ಹೇಳಿದೆ, ಕಂಣಿಂದ ಕಂಡುದನ್ನು.

"ಅಯ್ಯೊ ? ಅವನದು ದೊಡ್ಡ ಕತೆ. ಮುಂಬೈ, ಮದರಾಸು ಎಲ್ಲ ಸುತ್ತಿ ಬಂದು ಎಲ್ಲವನ್ನೂ ಕಲಿತಿದ್ದಾನೆ ಮುಂಡೇಗಂಡ."

"ಇನ್ನವನ ಮಂತ್ರ, ತಂತ್ರ, ಮಂಣು ಮುಕ್ಕಿದಂತೇನೇ."

"ಇಲ್ಲ ಇಲ್ಲ, ಹಿಡಿತಾನಂತೆ. ವಾರದ ಕೆಳಗೆ ಹಿಡಿದನಂತೇ."

ಏನೇನೋ ಅಂತೆಗಳು ಹೊರಬಂದುವು ; ನಿಜಯಾವುದೊ, ಅಲ್ಲ ಯಾವುದೊ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂದ ಬಂದ ಅಂದರು ಹುಡುಗರು.

"ಏನು ಸಾರ್, ಸ್ನೇಕೇ ?"

ಎಂದು ಕೇಳುತ್ತಾನೆ ನನ್ನ ಮುಖ ನೋಡಿ.

ತಲೆಯಲ್ಲಿ ಕ್ರಾಪು, ಮಧ್ಯೆ ಬೈತಲು. ಮೀಸೆ ಮಾಯವಾಗಿದೆ. ಬುಷ್ ಕೋಟು ಜೇಬಿನಿಂದ ಸಿಗರೇಟ್ ಪ್ಯಾಕು, ಬೆಂಕಿ ಪೆಟ್ಟಿಗೆ ಹೊರಕ್ಕೆ ಇಣುಕುತ್ತಿವೆ.

ಕೈಲಿ ವಾಚ್ ಕಟ್ಟಿದ್ದಾನೆ. ತುಂಬ ಚಿಕ್ಕದು, ಹೆಣ್ಣುಮಕ್ಕಳದಿರಬೇಕು, ಚಿನ್ನದ ಚೈನು.

ಭದ್ರಾಚಾರಿಯ ಮಗ ಕಾಳನೇ ಇವನು !

ವೇಷ ಹಾಗಿರಲಿ, ಇವನ ಭಾಷೆ ?

ಇವನಪ್ಪ ಇಂದಿಗೂ ನನ್ನನ್ನು ಕಂಡರೆ ನಮಸ್ಕಾರ ಎಂದು ಕೈ ಜೋಡಿಸುತ್ತಾನೆ. ಸ್ವಾಮೀ ಎಂದನ್ನದೆ ಮಾತಿಲ್ಲ. ಈ ಪೋರ ಏನ್ಸಾರ್ ಅನ್ನುತ್ತಾನೆ. ಈ ಇಂಗ್ಲೀಷು 'ಸ್ನೇಕೇ' ಬೇರೆ.

ಮಲಗುವ ಕೋಣೆಯಲ್ಲಿ ಹಾವು ಬಂದಿದೆ ಎಂದು ಹೇಳಿದರು.

"ಅದರಷ್ಟಕ್ಕದು ಹೋಗುತ್ತದೆ, ಹೋಗಲಿ ಬಿಡಿ, ಪಾಪ !"

ಇದನ್ನು ಹೇಳಲು ಆಸ್ತಿಕ ಮಹಾರಾಜನೇ ಬರಬೇಕಿತ್ತೆ ?

ಒಳಕ್ಕೆ ಹೋಗಿ ನೋಡಿ ಮತ್ತೆ ಈಚೆ ಬಂದ,

"ಮಿಡಿ ನಾಗರ ಸಾರ್, ಮೊಟ್ಟೆ ಇಡಲು ಬಂದಿದೆ"

"ಹೌದೇ !"

ಬೆಚ್ಚಿಬಿದ್ದು ಕೇಳಿದೆ. ಹಾವೊಂದೇ ಅಲ್ಲದೆ, ಅದರ ಹೆರಿಗೆಯೂ ನಮ್ಮ ಮನೆಯಲ್ಲಿಯೇ ಆಗಬೇಕೆ ?

"ಫಿಫ್ಟಿ ಕೊಡಬೇಕು"

ಕೂಡಲೆ ಹೊಳೆಯಲಿಲ್ಲ ನನಗೆ. ನನ್ನ ಮಗ ಭಾಷಾಂತರ ಮಾಡಿ ಹೇಳಿದ.

"ಐವತ್ತು ರೂಪಾಯಿ ಕೊಡಬೇಕಂತಣ್ಣಾ"

"ಹೌದು ಅಡ್ವಾನ್ಸಾಗಿ ಪೇ ಮಾಡಬೇಕು"

ಕಾಳನೇ ಈ ಮಾತನ್ನೆಲ್ಲ ಆಡತಿರೋದು !

ಥ್ರಾಸಿಗೆಯಲ್ಲಿ ಹಾವು ಇಟ್ಟುಕೊಂಡು ಐವತ್ತು, ನಲವತ್ತೆಂಟು ಎಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರಾದರೂ ವ್ಯಾಪಾರ ಮಾಡುತ್ತ ಕೂಡುತ್ತಾರೆಯೆ? ನನ್ನ ಅಣ್ಣನ ಅಳಿಯ ಅಲ್ಲಿಯೇ ಇದ್ದರು. ಪರ್ಸ್ ತೆಗೆದು ಐದು ನೋಟುಗಳನ್ನು ಅವನ ಕೈಗಿತ್ತರು.

ಪ್ಯಾಂಟ್ ಜೇಬಿಗೆ ಹಣ ಸೇರಿತು. ಆಮೇಲೆ ಕುಂಕುಮ ಹೊರಬಂತು. ಅಂದಿನಂತೆ ಆ ಕಾಗದ ಪೊಟ್ಟಣ ಅಲ್ಲ, ಚಿಕ್ಕ ಬೆಳ್ಳಿ ಡಬ್ಬ. ಕೊಂಚ ಹಣೆಗೆ ತಾಗಿಸಿದ, ಕೋಣೆಯ ಬಾಗಿಲಿಗೆ ನಡೆದ.

"ಆಚೆ ಕಿಟಕಿ ತೆರೆದುಬಿಡಿ ಹೋಗುವುದಾದರೆ ಹಾಗೆ ಹೋಗಲಿ"

"ಒಂದು ಉದ್ದನ ಕೋಲು ಕೊಡಿ"

ಹಾವು ಹಿಡಿಯುವ ಆಸ್ತಿಕ ಮಹಾರಾಜ ಆಡುವ ಮಾತೇ ಇದು?

ಅದೇಕೋ ಆಗಿನ ಆತ್ಮವಿಶ್ವಾಸವೇ ಇಲ್ಲ ಮಹಾರಾಜನಲ್ಲಿ. ನಮಗಿಂತಲೂ ಹೆಚ್ಚು ಅವನೇ ಅಂಜುತ್ತಿದ್ದಾನೆ!

ಏನಾದರೂ ಮಾಡಿಕೊಳ್ಳಲಿ ಎಂದು ಹೊರಬಂದು ಅಂಗಳದಲ್ಲಿ ಕುಳಿತೆ, ಎಲ್ಲರನ್ನೂ ಈಚೆಗೆ ಕರೆದೆ.

ಐದು ನಿಮಿಷ, ಆರು ನಿಮಿಷ ಆಗಿರಬೇಕು, ಅಷ್ಟೆ.

"ಅಯ್ಯೋ ಸತ್ತೆ, ಸತ್ತೆ"

ಎಂಬ ಕೂಗು, ಕೆಟ್ಟ ದನಿಯಲ್ಲಿ ಕೂಗಿದ ಮಹಾರಾಜ.

ಓಡಿದೆವು ಅಲ್ಲಿಗೆ. ಮುಂದಿನ ಕೋಣೆಯಲ್ಲಿ ಬಂದು ಆ ಉದ್ದಕ್ಕೂ ಬಿದ್ದಿದ್ದಾನೆ ಕಾಳಾಚರಿ ಪಾಪ!

"ನನ್ನ ಸೂಟ್‌ಕೇಸ್‌ನಲ್ಲಿ ಒಂದು ಮಣಿ ಇದೆ. ಹಾವಿನ ವಿಷ ಹೊಡೆಯುತ್ತದದು."

ಅವಸರದಲ್ಲಿ ಹುಡುಕಾಡಿ ಕಪ್ಪು ಮಣಿಯೊಂದನ್ನು ತಂದರು ನಮ್ಮ ಅಳಿಯ.

"ಇದರ ಹೆಸರೇ ಗರುಡಮಣಿ ಎಂದು. ಮೂರು ಜನವನ್ನು ಬದುಕಿಸಿದೆ ಇದು."

ಹಾವು ಕಚ್ಚಿದ ಸ್ಥಳದಲ್ಲಿಯೇ ಇಡಬೇಕಂತೆ ಅದನ್ನು. ಎಲ್ಲಿ ಕಚ್ಚಿದೆಯೋ? ಮುಂಗೈ ಮೇಲಿಷ್ಟು ಬೆವರು ಕಂಡಿತು, ಅಲ್ಲಿಟ್ಟರು ಮಣಿಯನ್ನು.

ಹತ್ತು ನಿಮಿಷ ಆಯಿತು. ಅರ್ಧ ಗಂಟೆ, ಒಂದು ಗಂಟೆಯೂ ಆಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ವಿಷ ಇಳಿಯಲೇ ಇಲ್ಲವಲ್ಲಾ ?"

ತಲೆ ಕೆರೆದುಕೊಂಡರು ಮುಂದೇನು ಗತಿ ಎಂದು. ಎಲ್ಲರೂ ಪೆಚ್ಚಾಗಿ ನೋಡುತ್ತ ನಿಂತೆವು.

"ಅಮ್ಮಾ ಸಿಕ್ತು"

ಮಹದಾನಂದದಲ್ಲಿ ಕೂಗುತ್ತ ಬಂತು ನಮ್ಮ ಪುಟ್ಟ ಮೊಮ್ಮಗಳು ಉಮಾ.

ಎದೆಗವಚಿಕೊಂಡಿದೆ ಮಗು. ಅದೇ ಮಿಡಿನಾಗರ—ಅವಳ ಪ್ಲಾಸ್ಟಿಕ್ ಹಾವು !

ಆ ಐವತ್ತು ಸರಿಹೋಯಿತು, ಆಸ್ತಿಕ ಮಹಾರಾಜನ ಅಂತ್ಯಕ್ರಿಯೆಗೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಂಡಿನ ಗೈಡು

ಶಂಕ್ರಯ್ಯನವರು ಮಗನನ್ನು ನೋಡುತ್ತ ನಿಂತರಾಯಿತು, ಹೆಂಣು ಕನ್ನಡಿಯ ಮುಂದು ನಿಂತಂತೆಯೇ.

ಬಾಳ ಅಂತಹ ಚೆಲುವನೇ ?

ಚೆಲುವು ಅಂದರೇನು ? ಒಂಟೆಯ ಮರಿ ಚೆಲುವು ಹೌದೋ ಇಲ್ಲವೋ ತಾಯಿ ಒಂಟೆಯನ್ನು ಕೇಳಿ ನೋಡಿ. ಯಾವ ತಂದೆ ತಾಯಿಗಳಿಗೆ ತಮ್ಮ ಮಗು ಚೆಲುವಲ್ಲ ?

ಶಂಕ್ರಯ್ಯ ಬಾಳನಿಗೆ ತಂದೆ ಹೌದು. ತಾಯಿಯೂ ಹೌದು. ಬಾಳ ಹುಟ್ಟಿದ, ಹತ್ತನೇ ದಿನವೇ ತಾಯಿಯನ್ನು ಕಬಳಿಸಿದ. ಶಂಕ್ರಯ್ಯನ ಗೋಳು ಯಾವ ಶತ್ರುವಿಗೂ ಬೇಡ, ಪಾಪ !

ಹೆಂಡತಿ ಸಾಯಬಾರದ ವಯಸ್ಸು—ಧೈರ್ಯವಾಗಿ ಇನ್ನೊಂದು ಲಗ್ನ ಮಾಡಿಕೊಳ್ಳಲು ಪ್ರಾಯ ಕೊಂಚ ಹಿಂದಾಗಿದೆ. ಹಾಯಾಗಿ ಹಾಗೆಯೇ ಇದ್ದುಬಿಡಲು ವೃದ್ಧಾಪ್ಯ ಇನ್ನೂ ಬಹು ದೂರ ಇದೆ. ತ್ರಿಶಂಕುವಾದ ಶಂಕ್ರಯ್ಯ.

ಹೆಂಣುಗಳಲ್ಲಿ ಎರಡೇ ಜಾತಿ—ಇರುವಾಗ ಮಾತ್ರವೆ ಕಾಡಿ ಸತ್ತನಂತರ ಗಂಡನಿಗೆ ಸ್ವರ್ಗಸುಖವನ್ನು ಕೊಡುವ ಜಾತಿ ಒಂದು : ಬದುಕಿರುವಾಗ ತನ್ನ ಶಕ್ತಿ ಮೀರಿ ಕಾಡಿ ತಾನು ಸತ್ತನಂತರವೂ ಇರಲೆಂದು ಗಂಡನಿಗಾಗಿ ಕಷ್ಟವನ್ನು ಕಾದಿರಿಸಿ ಹೋಗುವ ಜಾತಿ ಇನ್ನೊಂದು. ಶಂಕ್ರಯ್ಯನ ಹೆಂಡತಿ ಪ್ರಾಯಶಃ ಈ ಎರಡನೆ ವರ್ಗಕ್ಕೆ ಸೇರಿರಬೇಕು. ಹೆಂಡತಿ ಸತ್ತಳು, ಮೂರು ಪೌಂಡು ಷೈಲಾಕನ ಆ ಮಾಂಸದ ತುಣುಕು ಉಳಿಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೊಂದು ಮದುವೆ ಆಗೆಂದು ಅವರಿವರು ಒತ್ತಾಯ ಮಾಡಿದರು. ಶಂಕ್ರಯ್ಯ ಸಾಧ್ಯವಿಲ್ಲ ಎಂದು ಒಂದೇ ಹಟ ಹಿಡಿದ. ಹಿರಿಯರೊಬ್ಬರು ಆತನೊಡನೆ ಹಿತಚಿಂತನೆ ಮಾಡಿದರು.

"ಅಲ್ಲ ಶಂಕರಾ! ಮದುವೆ ಬೇಡ ಅನ್ನಲು ನಿನಗಾವ ವಯಸ್ಸು ಹೋಗಿದೆ ?"

"ಮದುವೆ ಒಲ್ಲೆ ಅನ್ನಲು ವಯಸ್ಸು ಹೋಗಿರಬೇಕಿಲ್ಲ ಸ್ವಾಮೀ! ಬುದ್ಧಿ ಬಂದಿರಬೇಕು. ತಡವಾಗಿಯಾದರೂ ಬಂದಿದೆ, ಈಗ ಬಂದಿದೆ ಬುದ್ಧಿ ನನಗೆ."

ಕಟ್ಟಿಗೆ ಮುರಿದಂತೆ ಮಾತನಾಡಿ ಮುಗಿಸಿದ ಶಂಕ್ರಯ್ಯ.

ಶಂಕ್ರಯ್ಯ ಬುದ್ಧಿವಂತ, ಒಂದೇ ಅನುಭವದಿಂದಲೇ ಇಷ್ಟು ಘನವಾದ ಪಾಠ ಕಲಿತ.

ಸಾಯುವವರೆಗೂ ಸಂನ್ಯಾಸಿ ಶಂಕ್ರಯ್ಯ; ಹೆಂಣಿನ ಸಂಪರ್ಕ ಈ ಜನ್ಮಕ್ಕಂತೂ ಇಲ್ಲ.

ಇದು ಆತನ ದೃಢ ನಿರ್ಧಾರ. ಹಾಗೆಯೇ ಬಾಳಿದ ಕೂಡ, ಪಾಪ!

ಬಾಳ, ಶಂಕ್ರಯ್ಯನವರ ಏಕಮೇವ ಸರ್ವಸ್ವ. ಅವನಿಗಾಗಿ ತಾವು ಬದುಕಿರಬೇಕು. ಬಾಳ ಚೆನ್ನಾಗಿ ಬಾಳಿ ಬದುಕಬೇಕು, ಬೇಗ ದೊಡ್ಡವನಾಗ ಬೇಕು. ಮಗುವನ್ನು ಕಂಣಲ್ಲಿಟ್ಟು ಕಾಪಾಡಿದರು.

ಹರಹರಾ ಶ್ರೀ ಚೆನ್ನ ಸೋಮೇಶ್ವರನನ್ನು ಆ ಭಕ್ತ ಕವಿ ಕೇಳಿದಂತೆ ಎಳೆಗರಂ ಎತ್ತಾಗದೇ ? ಈಶ್ವರನ ಒಲುಮೆ ಇತ್ತು—ಬಾಳ ಎತ್ತಾದ, ಎತ್ತರವೂ ಆದ. ಈಗವನು ಯೌವನದ ಹೊರ ಹೊಸ್ತಿಲಲ್ಲಿದ್ದಾನೆ. ಮೀಸೆ ಬಂದಿದೆ, ಗಡ್ಡ ಬರುತ್ತೇನೆಂದು ವಚನ ಕೊಟ್ಟಿದೆ. ಕಾಲುದ್ದನ ಆಳು ಬಾಳ, ತಂದೆಯ ಎದೆ ಎತ್ತರ ನಿಲ್ಲುತ್ತಾನೆ.

"ಕತ್ತಲಾಗುತ್ತ ಬಂತು ಬಾಳೂ, ಒಳಕ್ಕೆ ಬಂದುಬಿಡಪ್ಪಾ."

"ಮೋಡ ಆಗುವಂತಿದೆ, ಮಳೆ ಬಂದೀತು ಹೊರಗಡೆ ಹೋಗಬೇಡ ಬಾಳಾ"

"ಹವೆ ಅಷ್ಟು ಚೆನ್ನಾಗಿಲ್ಲ ಬಾಳಂಣಾ! ಕತ್ತಿಗೆ ಮಫ್ಲರ್ ಸುತ್ತಿಕೊಂಡು ಮನೆಯಲ್ಲೇ ಕೂಡು"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ರಸ್ತೆಯಲ್ಲಿ ಲಾರಿ, ಬಸ್ಸುಗಳ ಓಡಾಟ ಹೆಚ್ಚು. ಎಡಗಡೆ ಅಂಚಿನಲ್ಲೇ ಹೋಗು."

"ಕತ್ತು ನೋವಾದೀತು, ತಲೆದಿಂಬಿನ ಮೇಲೆ ತಲೆ ಇಟ್ಟು ಮಲಗಪ್ಪಾ ಬಾಳಾ"

"ಇನ್ನೊಂದು ಆರು ತಿಂಗಳಿಗೆ ಚಳಿಗಾಲ ಆರಂಭ. ಇವತ್ತಿನಿಂದಲೇ ಬಿಸಿ ನೀರು ಕುಡಿ ಬಾಳೂ."

ಈ ಆದರ, ಈ ಉಪಚಾರ, ಇಷ್ಟು ಕಾಳಜಿ, ಇಂತಹ ಮುತುವರ್ಜಿ. ತಾಯಿ ಬದುಕಿದ್ದಿದ್ದರೆ ಇದೆಲ್ಲ ದೊರೆಯುತ್ತಿದ್ದುವೇ ಬಾಳನಿಗೆ ?

ಒಂದು ದಿನ ಇದ್ದಕ್ಕಿದ್ದಂತೆ ಬಹು ದೊಡ್ಡ ಅವಾಂತರ ಶಂಕ್ರಯ್ಯನವರ ಜೀವನದಲ್ಲಿ. ಶಂಕ್ರಯ್ಯನವರು ಸತ್ತವರೂ ಅಲ್ಲ, ಬದುಕಿದವರೂ ಅಲ್ಲ. ಸೂರ್ಯ ಮುಳುಗಿ ಒಂದು, ಒಂದೂವರೆ ಗಂಟೆ ಆಯಿತು, ಮಗ ಇನ್ನೂ ಮನೆಗೇ ಬರಲಿಲ್ಲ !

'ಬಾಳಾ ಎಲ್ಲಿ ಹೋದಾ ?'

'ದಾರಿ ತಪ್ಪಿ ಎಲ್ಲಾದರೂ ನಿಂತು ಬಿಟ್ಟಿತೇ ಕೂಸು ?'

ಮೀಸೆ ಬಂದ ಕೂಸು ! ಇದ್ದೂರಲ್ಲಿ ದಾರಿ ತಪ್ಪಿಸಿಕೊಂಡು ಎಲ್ಲಿಯೊ ಅಳುತ್ತ ನಿಲ್ಲುತ್ತೆಯೆ ?

ಇದು ನಮ್ಮ ದೃಷ್ಟಿ ಆಯಿತು. ಆ ತಂದೆಯ ಕಣ್ಣಿಂದಲ್ಲವೆ ನೋಡಬೇಕು ?

'ಆಡಿ, ಆಡಿ, ದಣಿದು ಹಾಗೆಯೇ ಮಲಗಿ ಬಿಟ್ಟನೆ ಬಾಳ ?'

'ಬೈಸಿಕಲ್ ಅಡಿಯಲ್ಲೇನಾದರೂ ಬಿದ್ದನೆ ?'

'ಬಸ್ಸು ? ಲಾರಿ ? ಹೌದು, ಸೆರೆ ಕುಡಿದು ಬಸ್ಸು ನಡೆಸುತ್ತಾರೆ ಈ ಮಧ್ಯೆ.'

ಎದೆ ಧಸ್ಸೆಂದಿತು. ಇನ್ನೂ ಮನೆಯಲ್ಲಿರಲು ಶಂಕಯ್ಯನಿಂದ ಸಾಧ್ಯವಿಲ್ಲ. ಮಗನನ್ನು ಹುಡುಕಲು ಹೊರಟರು.

ಬಾಳ ಮನೆಗೆ ಬಂದಿಲ್ಲ, ಕತ್ತಲಾಗಿ ಹೋಯಿತು !

ಮಗುವನ್ನು ಹುಡುಕಬೇಕು ನಿಜ, ಆದರೆ ಎಲ್ಲಿ ಹುಡುಕುವುದು ?

ಬಾಳ ಕಾಲೇಜಿನಲ್ಲಿಲ್ಲ.

ಆಟದ ಬಯಲಲ್ಲಿ ? ಅಲ್ಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊಟದ ಹೋಟೆಲಲ್ಲಿ ? ಅಲ್ಲೂ ಇಲ್ಲ.

ಸಿನೇಮಾ ಥಿಯೇಟರ್‌ನಲ್ಲಿಲ್ಲ. ಆಂಜನೇಯನ ದೇವಸ್ಥಾನದಲ್ಲಿಲ್ಲ. ರಸ್ತೆಗಳನ್ನೆಲ್ಲ ಸುತ್ತಾಡಿದ. ಬಾಳ ಹೋಗಬಾರದಲ್ಲೆಲ್ಲ ಹುಡುಕಿದ. ಮತ್ತೆಲ್ಲಿ ಹೋದ ಬಾಳ ?

ಶಂಕ್ರಯ್ಯನಿಗೆ ಅಳು ಬಂತು, ಅತ್ತೂಬಿಟ್ಟರು.

"ಯಾಕೆ ಸ್ವಾಮೀ ? ಏನಾಯಿತು ?"

ಬೀದಿಯಲ್ಲೊಬ್ಬರು ವಿಚಾರಿಸಿದರು.

"ನನ್ನ ಮಗು ... ಮಗು...ಬಾಳ ... ತಾಯಿ ಇಲ್ಲದ ಮಗು...ಪುಟ್ಟ ಮಗು ಕಳೆದುಹೋಗಿದೆ."

ಬಿಕ್ಕಿ ಬಿಕ್ಕಿ ಅಳುತ್ತ, ಅಳುವಿನ ಮಧ್ಯೆ ಹೇಳಿದರು.

ನಡು ಬೀದಿಯಲ್ಲಿ ಅಳುತ್ತ ನಿಂತರೆ ಗುಂಪು ಸೇರದೆ ಇರುತ್ತೆಯೆ ? ನಾಲ್ವರು ಸೇರಿದರಾಯಿತು, ಎಂಟು ತರಹದ ಮಾತು.

"ಎಲ್ಲಿ ಹೋಗುತ್ತೆ, ಇಲ್ಲಿಯೆ ಎಲ್ಲಾದರೂ ಇರಬೇಕು. ಬರುತ್ತೆಬಿಡಿ."

"ಹಾಗೆ ಹೇಳುವುದಕ್ಕಾಗುವುದಿಲ್ಲ ಸ್ವಾಮೀ ! ಕಾಲ ಕೆಟ್ಟು ಹೋಗಿದೆ. ಮಕ್ಕಳನ್ನು ಕದ್ದೊಯ್ಯುತ್ತಾರಂತೆ ?"

ಗೊಳೋ ಎಂದತ್ತ ಶಂಕ್ರಯ್ಯ.

"ಏನೇ ಆಗಲಿ, ಪೊಲೀಸ್ ಸ್ಟೇಷನ್‌ನಲ್ಲಿ ತಿಳಿಸಿಬಿಡಿ."

ಈ ಸಲಹೆಯಿಂದ ಆ ಬೀದಿ ಸಭೆ ವಿಸರ್ಜನೆ ಆಯಿತು.

ತಂದೆ, ಮಗನ ಭೇಟಿ ಪೊಲೀಸ್ ಸ್ಟೇಷನ್‌ನಲ್ಲಾಯಿತು. ಮನೆಗೆ ಬಂದು ಒಂದು ಗಂಟೆ ಸಮಯವಾದರೂ ತಂದೆ ಕಾಣಲಿಲ್ಲ. ಮುದಕನಿಗೆ ಯಾರು ಏನು ಅಪಾಯ ಮಾಡಿದರೋ ಎಂದಂಜಿ ಬಾಳ ಶಂಕ್ರಯ್ಯನನ್ನು ಹುಡುಕಿ ಬೇಸತ್ತು ದೂರು ಕೊಡಲು ಪೊಲೀಸರ ಬಳಿ ಬಂದಿದ್ದ.

"ಎಲ್ಲಿ ಹೋಗಿದ್ದೆಪ್ಪಾ ಬಾಳಾ ?"

ಬಾಳ ಹೇಳಿದ. ಕ್ಲಾಸಿನ ಹುಡುಗಿಯ ಮನೆಗೆ ಹೋಗಿದ್ದ, ಗೈಡ್‌ಗಾಗಿ.

"ಹುಡುಗೀ ?"

ಅದೊಂದು ಬಗೆಯಾಗಿ ಮೂಗೆಳೆದು ಮಗನ ಮುಖ ನೋಡಿದ ಶಂಕ್ರಯ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಹೌದಪ್ಪಾ. ನಳಿನಿ ನಮ್ಮ ಕ್ಲಾಸ್‌ನಲ್ಲೇ ಇದ್ದಾಳೆ. ಅವಳ ಬಳಿ ಗೈಡ್ ಇದೆ. ಅದಕ್ಕಾಗಿ..."

'ನಳಿನೀ...ಗೈಡ್'

ಬಾಯಲ್ಲಿಯೆ ಗೊಣಗಿಕೊಂಡು ಶಂಕ್ರಯ್ಯ ಸುಮ್ಮನಾದರು.

ಬಾಯಿ ಸುಮ್ಮನಾಯಿತು, ತಲೆ ? ಶಂಕ್ರಯ್ಯನವರಿಗೆ ರಾತ್ರಿ ಎಲ್ಲವೂ ನಿದ್ರೆ ಇಲ್ಲ. ಏನೇನೋ ಆಲೋಚನೆಗಳು. ಕಟ್ಟಕಡೆಗೆ ತಮ್ಮಲ್ಲಿಯೇ ಅಂದು ಕೊಂಡರು.

"ಛೆ ಛೆ ! ಬಾಳ ಅಂಥವನಲ್ಲ."

ಮನಸ್ಸಿಗೊಂದು ಸಮಾಧಾನ ಬೇಕು, ಹೇಳಿಕೊಂಡ. ಆದರೆ ಸಮಾಧಾನ ಆಯಿತೇನು ?

ಮತ್ತೆ ಮತ್ತೆ ಅದೇ ಚರ್ವಿತಚರ್ವಣ.

"ಬೇರಾರೂ ಇಲ್ಲವೆ ಇವನ ಕ್ಲಾಸಿನವರು ?"

"ಹೆಣ್ಣು ಹುಡುಗೀ......"

ಶಂಕ್ರಯ್ಯ ಹೆಣ್ಣು ಅಂದರೆ ಹಾವು ತುಳಿದವರಂತೆ ಬೆಚ್ಚಿಬೀಳುತ್ತಿದ್ದರು. ಒಮ್ಮೆ ಕೈ ಸುಟ್ಟುಕೊಂಡಿದ್ದಾರೆ, ಪಾಪ !

ಈ ಗೈಡ್ ಸಹವಾಸವೇ ಹಾಗೆ– ಒಂದು ಬಾರಿ ಅದರ ಪರಿಚಯ ಆದ ರಾಯಿತು, ಮೇಲಿಂದ ಮೇಲೆ ಅದೇ ಬೇಕು. ಬಾಳ ಮರುದಿನ ಮನೆಗೆ ಬರುವುದು ತಡವಾಯಿತು. ಆ ಮರುದಿನವೂ ಅದೇ ಕಥೆ.

ಎಲ್ಲಿಗೆ ಹೋಗಿದ್ದ ಮಗ ಎಂಬುದಲ್ಲ ಈಗ ಶಂಕ್ರಯ್ಯನವರ ಪ್ರಶ್ನೆ. ಯಾಕೆ ಹೋಗಿದ್ದ ಎಂಬುದೂ ಅಲ್ಲ– ಈ ಪ್ರಶ್ನೆಗಳಿಗೆ ಅವರಲ್ಲಿ ಉತ್ತರವಿದೆ. ನಳಿನಿಯ ಜಾತಿ ಯಾವುದು ಎಂಬುದೊಂದೇ ಶಂಕ್ರಯ್ಯನ ಪ್ರಶ್ನೆ.

ಮಗನ ಹಿತದ ದೃಷ್ಟಿಯಿಂದ ತಂದೆ ಏನಾದರೂ ಆಗಬೇಕು; ಏನೆಲ್ಲ ಮಾಡಬೇಕು. ಶಂಕ್ರಯ್ಯ ಸಿ. ಐ. ಡಿ. ಆದರು. ಗುಟ್ಟಾಗಿ ವಿಚಾರಣೆ ನಡೆಸಿ ದರು.

ನಳಿನಿಗೆ ತಂದೆ ಇಲ್ಲ. ಇಲ್ಲವೆಂದರೆ ಸತ್ತಿದ್ದಾನೆಂದಲ್ಲ ಅರ್ಥ, ಇರಲೇ ಇಲ್ಲ. ತಾಯಿ ಸತ್ತಿಲ್ಲ, ಇನ್ನೂ ಇದ್ದಾಳೆ. ಮಗಳನ್ನು ಕಾಲೇಜಿನಲ್ಲಿ ಓದಿಸಿಕೊಂಡಿದ್ದಾಳೆ. ನಳಿನಿ ಒಳ್ಳೆಯ ಹುಡುಗಿ ನಿಜ. ಆದರೇ......

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಂಕ್ರಯ್ಯನ ತಲೆನೋವು ದುರ್ಭರವಾಯಿತು.

ಇದ್ದೊಬ್ಬ ಮಗ ಹೀಗಾದರೆ ಮತ್ತೇನಿದೆ ?

ಸ್ಪಷ್ಟವಾಗಿ ಬಾಯಿ ಬಿಟ್ಟು ಹೇಳಿಬಿಟ್ಟರು ಶಂಕ್ರಯ್ಯ ಮಗನಿಗೊಂದು ದಿನ.

"ಬಾಳಂಣಾ ! ಪರೀಕ್ಷೆ ಮುಗಿದರೂ ಇನ್ನೂ ನೀನು ಆ ಗೈಡ್ ಬಿಡಲಿಲ್ಲಪ್ಪಾ ?"

"ಛೆ ಛೆ ! ನಾನು ಅಲ್ಲಿಗೆ ಹೋಗೇ ಇಲ್ಲಪ್ಪಾ"

ಥಟ್ಟನೆ ಹೊರಬಂತು ಬಾಳನ ಬಾಯಿಂದ ಒಂದು ಸುಳ್ಳು. ಯಾರೂ ಸುಳ್ಳಾಡುವುದಿಲ್ಲ. ಸುಳ್ಳು ತಾನೇ ಹುಟ್ಟುತ್ತದೆ.

ಆ ದಿನ ಬಾಳ ಮನೆ ಬಿಟ್ಟು ಕದಲಲಿಲ್ಲ. ಮಗ ದಾರಿಗೆ ಬಂದನೆಂದು ತಂದೆಗೆ ತೃಪ್ತಿ ಆಯಿತು. ಮರುದಿನ ? ಮತ್ತೆ ಅದೇ ಹಾಡು. ಕೇಳಿದರೆ ಅದೇ ಉತ್ತರ— ನಾನು ಅಲ್ಲಿಗೆ ಹೋಗಿರಲಿಲ್ಲ.

ಬಾಳ ನಿತ್ಯವೂ ಎಲ್ಲಿಗೆ ಹೋಗುತ್ತಾನೆ ? ಇದನ್ನು ಶಂಕ್ರಯ್ಯನವರು ಪತ್ತೆ ಮಾಡಲೇಬೇಕು. ಆದರೆ ಹೇಗೆ ?

ಇದರ ಏರ್ಪಾಟು ಮಾಡಲು ಶಂಕ್ರಯ್ಯನಿಗೆ ಹೆಚ್ಚು ಕಷ್ಟವಾಗಲಿಲ್ಲ. ಹಣವೇ ನಿನ್ನಯ ಗುಣ ಎಂದು ಹಾಡುವವರಿಗೆ ಕೊರತೆಯೆ ?

ನಳಿನಿಯ ಮನೆ ಕೆಲಸದ ನಂಜಿಯ ಕೈಗೆ ಐದು ರೂಪಾಯಿ ನೋಟು ಬಿತ್ತು. ಶಂಕ್ರಯ್ಯ ಇದ್ದಲ್ಲಿಯೆ ಬರುತ್ತಿತ್ತು ವಿವರಗಳನ್ನೊಳಗೊಂಡ ಆದ್ಯಂತವಾದ ದೀರ್ಘ ವರದಿ.

ಬಾಳನ ಸುಳ್ಳು ಕಥೆಗಳು ತಂದೆಯ ಮುಂದು ಬೆತ್ತಲೆ ಆದುವು.

ನಳಿನಿ, ಬಾಳ ಈ ಬಗ್ಗೆ ಬಹು ಹೊತ್ತು ಚರ್ಚಿಸಿದರು, ತಲೆ ಕೆರೆದು ಕೊಂಡರು. ಕಡೆಗೆ ನಳಿನಿಯೇ ಊಹಿಸಿದಳು.

"ಬೇರಿನ್ನಾರೂ ಅಲ್ಲ. ನಮ್ಮ ನಂಜಿಯದೇ ಈ ಕೆಲಸ."

ನಂಜಿಗೆ ತಿಳಿಯದಂತೆ ಬಾಳ ಬಂದು ಹೋಗುವುದು ಹೇಗೆ ? ಅವಳನ್ನು ಇನ್ನು ಮೇಲೆ ಕೆಲಸಕ್ಕೆ ಬರಬೇಡ ಅನ್ನುವುದೇ ? ಮೀನ, ಮೇಷದಲ್ಲಿಯೇ ದಿನಗಳು ಉರುಳಿದುವು.

ಬಾಳ ನಳಿನಿಯ ಮನೆಗೆ ಬಂದೊಡನೆ ಬಾಗಿಲಲ್ಲಿಯೇ ದರ್ಶನವೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯುತ್ತಿದ್ದ ನಂಜಿ ಒಂದು ದಿನ ಇಲ್ಲ. ಪೀಡೆ ಎಲ್ಲಿಯೋ ಹೋಗಿವೆ ಸದ್ಯ ಎಂದು ಬಾಯಲ್ಲಿಯೇ ಅಂದುಕೊಂಡ ಬಾಳ. ಅದೊಂದು ಬಗೆಯ ತೃಪ್ತಿ ಅವನ ಮನಕ್ಕೆ.

ಮರುದಿನವೂ ನಂಜಿ ಕಾಣಲಿಲ್ಲ. ನಳಿನಿಯನ್ನು ಕೇಳಿದ.

"ಎಲ್ಲಿ ನಂಜಿ ? ಬಿಡಿಸಿಬಿಟ್ಟಿರೇನು ಅವಳನ್ನು ?"

"ಇಲ್ಲ ಅವಳೇ ಬಿಟ್ಟಳು."

ಎಂದು ಹೇಳಿ ನಳಿನಿ ನಸುನಗೆಯಲ್ಲಿ ಮುಂದುವರಿದಳು.

"ಪ್ರೇಮ ಎಂಬುದು ಎಷ್ಟು ವಿಚಿತ್ರವಾಗಿದೆ ನೋಡು ರಾಜಾ ! ಈ ಅರೆ ಮುಪ್ಪಿನಲ್ಲಿ ಅವಳಿಗೊಬ್ಬ ಗಂಡ ದೊರೆತಿದ್ದಾನಂತೆ. ಅವರ ಮದುವೆ ಅಂತೆ."

"ಹೌದೇ ! ಆ ಮುದುಕಿಯೂ ಗೈಡ್ ಆದಳೇ ? ಯಾರಂತೆ ಗಂಡ ?"

ನಳಿನಿ ಉತ್ತರಿಸಲಿಲ್ಲ, ತುಟಿಯ ಮೇಲೊಂದು ತುಂಟ ನಗೆ ಸುಳಿಯಿತು.

ಬಾಳ ಮನೆಗೆ ಬಂದಾಗ ಶಂಕ್ರಯ್ಯ ಆರಾಮ ಕುರ್ಚಿಯಲ್ಲಿ ಕಾಲು ಚಾಚಿ ಕುಳಿತಿದ್ದರು. ಅಡಿಕೆ, ಎಲೆ ಕುಟ್ಟಿ ತಂದು ನಂಜಿ ಕೈಗಿತ್ತಳು.

'ಗಂಡಿಗೊಂದು ಗೈಡ್ ಬೇಕೇಬೇಕು. ಪಾಪ !'

ಬಾಯಲ್ಲಿಯೇ ಅಂದುಕೊಂಡ ಬಾಳ ಮೆತ್ತಗೆ ಈಚೆ ಬಂದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಳವಳಿ ಖೋರ

ಭರ್ ಎಂದೊಂದು ಕಲ್ಲು ಬೀಸಿ ಬಂತು. ತಪ್ ಎಂದು ನೆಲಕ್ಕೆಬಿದ್ದು ಚೂರು ಚೂರಾಯಿತು. ಏನು ? ಕಲ್ಲಲ್ಲ, ಸರ್ಕಲ್‌ನಲ್ಲಿಯ ದೊಡ್ಡ ದೀಪದ ಹಾಲು ಬಿಳೀ ಡೋಮ್. ಡ್ಯೂಟಿ ಮೇಲೆ ನಿಂತಿದ್ದ ಮೀಸೆ ದಫೇದಾರ ಬಸವರಾಜು ಹುಲಿಯಾದ.

"ಬದ್ಮಾ—"

ಕಡೇ ಅಕ್ಷರ್ ಇನ್ನೂ ಬಾಯಲಿತ್ತು. ಬೆಚ್ಚಿ ಬಿದ್ದ.

ಏನಾಯಿತು ? ಅದೇ ತಿಳಿಯಲಿಲ್ಲ ದಫೇದಾರನಿಗೆ, ತೊಟ್ಟಿದ್ದ ಸಮ ವಸ್ತ್ರದ ಮೇಲೆ ರಕ್ತ. ಹಣೆಗೆ ಕಲ್ಲು ತಾಗಿತ್ತು.

ರಪ್ ರಪ್ ಸಪ್ಪಳ; ಪೋಲೀಸರ ಬೂಟಿನ ಸಪ್ಪಳ. ಓಡುತ್ತ ಬರುತ್ತಿದ್ದಾರೆ. ಹುಯ್ ಎಂದೋಡಿತು ಗುಂಪು. ಇದ್ದಕ್ಕಿದ್ದಂತೆ ಚದುರಿ ನಾಲ್ಕೂ ದಿಕ್ಕಿಗೆ ಓಡಿತು.

"ಓಡು ಓಡು"

"ಹಿಡಿ ಹಿಡಿ"

"ಅವನೇ ಕಲ್ಲು ಎಸೆದದ್ದು"

"ಈಚೆ ಓಡಿದ ಅವನು"

ಲಾಠಿಗಳು ಡ್ಯೂಟಿ ಮಾಡಲು ಆರಂಭಿಸಿದುವು.

"ಅಯ್ಯಯ್ಯೋ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ನಾನು ಸ್ವಾಮೀ !"

"ನಾನಲ್ಲ ಸ್ವಾಮೀ !"

ನಾನು ಸ್ವಾಮೀ ಯಾರೋ, ನಾನಲ್ಲ ಸ್ವಾಮೀ ಯಾರೋ ?

ಲಾಠಿಗೆ ಅದೆಲ್ಲ ಏನು ಗೊತ್ತು ? ಅದಕ್ಕೆ ತಲೆ ಇದೆಯೇ ?

ಕಲ್ಲಿಗೆ ತಲೆ ಇದೆಯೇ ? ಹೋಗಲಿ, ಕಲ್ಲೆಸೆದವನಿಗೆ ಇದೆಯೇ ?

ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ—ತಲೆ ಒಡೆಯುವಲ್ಲಿ ತಲೆಗೆ ಉಪವಾಸ.

ಹತ್ತು ನಿಮಿಷ ಈ ಕಾಳಗ.

ಇವರ ಫಲ ? ಕಲ್ಲೆಸೆದವರು ಪರಾರಿ, ಬಸ್ಸಿಗಾಗಿ ಕಾದು ನಿಂತವರ ಮೈ ಮೆತ್ತಗಾಯಿತು. ಮೊಳಕಾಲ ಎಮಿಕೆ ತುಂಡಾಯಿತು. ಗುಂಪಿನೊಂದಿಗೆ ಗೋವಿಂದ. ಹೆಂಗಸರು ಮಕ್ಕಳು ಗಾಬರಿಯಿಂದ ಕಿರಿಚಿದರು.

ಐದೇ ನಿಮಿಷ ವಿರಾಮ.

ಕಳೆದ ಸಮಯ ಮತ್ತೆ ಬರುವುದಿಲ್ಲ. ಆ ಐದು ನಿಮಿಷ ಕಿಡಿಗೇಡಿಯ ಜೀವಮಾನದಲ್ಲಿ ವ್ಯರ್ಥ ಅಲ್ಲವೇ, ಪಾಪ !

ಸಿಟಿಬಸ್ ಬಂತು, ನಿಲ್ಲುವುದರಲ್ಲಿತ್ತು. ಕಲ್ಲಿನಮಳೆ— ಗಾಜು ಪಳಪಳ ಒಡೆದು ಆಚೆ ಈಚೆ ಬಿತ್ತು. ಮಗುವಿಗೆ ಏನಾಯಿತೋ ಏನೋ, ತಾಯಿ ಚೀರಿಕೊಂಡಳು. ಮುದುಕನೊಬ್ಬ ರಕ್ತದ ಮಡಿಲಲ್ಲಿ. ಮತ್ತೆ ಏಳಲಿಲ್ಲ. ಅವನ ಹೆಣವನ್ನೆತ್ತಿದರು.

ರಿಜರ್ವ್ ಪೊಲೀಸಿಗೆ ಕರೆ. ಕಪ್ಪು-ನೀಲಿ ವ್ಯಾನ್ ಬಂತು. ರಪ್‌ರಪ್ ಕೆಳಗೆ ಇಳಿದರು. ಒಂದರ ಮೇಲೊಂದು ಟೀರ್‌ಗ್ಯಾಸ್. ನಿಂತವರು ಓಡಿದರು. ಓಡುತ್ತಿದ್ದವರು ನೆಲಕ್ಕೆ ಬಿದ್ದರು. ಬಿದ್ದವರ ಮೇಲೆ ಮತ್ತಿಬ್ಬರು ಬಿದ್ದರು. ಬಿದ್ದವರನ್ನು ತುಳಿಯುತ್ತ ಇನ್ನುಳಿದವರು ಓಡಿದರು. ಪೊಲೀಸರು ಬೆನ್ನಟ್ಟಿ ಬಂದರು.

ಈ ಮರಿಯುದ್ಧ ಸಾಗುತ್ತಿರುವುದು ಯಾವಾಗ ? ಎಲ್ಲಿ ? ಏಕೆ ಎಂಬದು ಅನಂತರದ ಪ್ರಶ್ನೆ.

ಕಡೆಯ ಪ್ರಶ್ನೆಗೆ ಉತ್ತರ ಸಿಕ್ಕಬಹುದು, ಸಿಗದಿರಲಿಕ್ಕೂ ಸಾಕು.

ಸಂಜೆ ಸಮಯ. ಸ್ಕೂಲು, ಕಾಲೇಜುಗಳಿಂದ ಮಕ್ಕಳು ಹೊರಬಂದಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನೆ ಮುಟ್ಟಲು ಒಂದೇ ಆತುರ ಅವಕ್ಕೆ. ದಿನವೆಲ್ಲವೂ ದುಡಿದು ಉಸ್ಸೆಂದು ಇತ್ತ ಬಂದಿದ್ದಾರೆ. ಮನೆಗೆ ಹೋಗಲು ಬಸ್‌ಗಾಗಿ ಕಾದಿದ್ದಾರೆ ಬುಶ್ ಕೋಟ್ ಕಾರ್ಮಿಕರು. ಹಣ್ಣು ಹಂಪಲು ಕೊಳ್ಳಲು ಹಣವಿಲ್ಲ. ಕೆಳಮಟ್ಟದ ಮಧ್ಯಮವರ್ಗದ ಮನೆತನಸ್ಥ ಹೆಂಗಳೆಯರು ಸಂಜೆಗಿಷ್ಟು ಸೊಪ್ಪುತರಲು ಕೈಚೀಲ ಹಿಡಿದು ಇತ್ತ ಧಾವಿಸಿದ್ದಾರೆ. ಕೆಮ್ಮುವ ಮಗುವಿಗೋ, ದಮ್ಮು ರೋಗದ ಹೆಂಡತಿಗೋ ಔಷಧಿ ತರುವುದು ಕೆಲವರ ನಿತ್ಯ ಕರ್ಮ, ಬಾಟ್ಲಿ ಹಿಡಿದು ಬರುತ್ತಿದ್ದಾರೆ.

ಅನ್ನವಿರಲಿ, ಇಲ್ಲದಿರಲಿ, ಸಿನಿಮಾ ಟಿಕೆಟ್‌ಗಾಗಿ ಹನುಮನ ಬಾಲದುದ್ದ "ಕ್ಯೂ" ನಿಂತಿದೆ. ಇದು ಕಲ್ಲು ತೂರಾಟದ ಸಮಯ. ಧರ್ಮಕ್ಷೇತ್ರವಾದ ಈ ಕುರುಕ್ಷೇತ್ರ ಎಲ್ಲಿದೆ ? ಎರಡು ರಸ್ತೆಗಳು ಕವಲಾಗಿ ನಾಲ್ಕಾಗುವಲ್ಲಿ, ಅರ್ಥಾತ್ ನಾಲ್ಕು ರಸ್ತೆ ಸೇರುವಲ್ಲಿ. ಹೆಂಗಸರು, ಮಕ್ಕಳು, ಓಡಾಡುವ ಸ್ಥಳ, ಸನಿಯದಲ್ಲಿಯೆ ಬೋರ್ಡ್ ಇದೆ—ಸ್ಕೂಲ್ ಜೋನ್ ಎಂದು. ಕಲ್ಲೆಸೆದು ಓಡುವವನಿಗೆ ಮಕ್ಕಳೇನು, ಮುದುಕರೇನು ? ಕುಟುಕಿ ಓಡುವ ಚೇಳಿಗೆ ಬೋರ್ಡ್ ಓದಲು ಸಮಯವಿದೆಯೇ ?

ಯುದ್ಧ ಎಂದಂದಮೇಲೆ ಆಯಿತು— ಯಾವಾಗ ಮತ್ತು ಎಲ್ಲಿ ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ದಡ್ಡರು ಕೇಳುವ ಪ್ರಶ್ನೆಗೆ ಉತ್ತರ ಕೊಡುವ ಜಾಣನಾವನು ? ಅದಾಯಿತು, ಏಕೆ ಎಂದಾದರೂ ಕೇಳಬಹುದಲ್ಲ ?

ಕೇಳಬಹುದು, ಹೆಚ್ಚು ಯೋಚಿಸದೆ ಉತ್ತರವನ್ನೂ ಹೇಳಬಹುದು. ಹೌದು, ಕಲ್ಲೆಸತಕ್ಕೆ ಕಾರಣ ಇರುತ್ತದೆ. ಕಾರಣವಿಲ್ಲದೆ ಏನೂ ಆಗದು ಎಂಬುದು ತಜ್ಞರ ಅಭಿಪ್ರಾಯ.

ಕಲ್ಲೆಸೆತಕ್ಕೆ ಮೊಟ್ಟ ಮೊದಲ ಕಾರಣ ; ಕಲ್ಲಿದೆ. ಹಾಗಾದರೆ ಎರಡನೆಯದು ? ಅದೂ ಇದೆ. ಕಲ್ಲೆಸೆಯಲು ಕೈ ಇದೆ. ಕಲ್ಲಿತ್ತ ದೇವನು ಕೈಕೊಡಲು ಮರೆತಾನೆಯೆ ? ಮೂರನೇ ಕಾರಣ, ಮತ್ತು ಮುಖ್ಯ ಕಾರಣ— ಇದೇ ಕಡೆಯ ಕಾರಣವೂ ಹೌದು. ಕಲ್ಲು, ಕೈ ಇತ್ತ ಪಾಪಿ ದೇವ ತಲೆ ಕಸಿದುಕೊಂಡ. ಕಲ್ಲೆಸೆಯುವ ಕೈಗೂ ತಲೆ ಬೇಕೆ ? ತಲೆ ಅಷ್ಟು ಅಗ್ಗದ ವಸ್ತು ಅಲ್ಲವಲ್ಲಾ ? ಬ್ರಹ್ಮನ ಡಿಪ್ಪೋದಲ್ಲಿ ತಲೆಗೆ ರೇಷನ್ ಕಾರ್ಡ್ ಇದೆ. ಅನ್ನದ ಅಭಾವಕ್ಕೆ ಅಮೇರಿಕೆ ನೆರವಾಗುತ್ತಾಳೆ. ತಲೆಗೆ ಅಭಾವವಾದಾಗ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದೆಲ್ಲವೂ ಟೀಕೆ ಆಯಿತು. ಕೇವಲ ದೊಡ್ಡಿಸ್ತಿಕೆಯ ಟೀಕೆ—ವಿಶೇಷ ಸಂಚಿಕೆಗಳಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಓದಲು ಮಾತ್ರ ಈ ಟೀಕೆ ಚೆನ್ನ. ಈ ನಿತ್ಯದ ಯಾದವೀ ಯುದ್ಧಗಳಿಗೆ ಕಾರಣ ಇರುವುದಿಲ್ಲವೆ ?

ಛೆ ಛೆ ! ಕಾರಣವಿಲ್ಲದೇನು ? ಇದ್ದೇ ಇದೆ. ಯುದ್ಧ ಬೇಡ ಅನ್ನಲು ಎಷ್ಟು ಕಾರಣಗಳಿವೆಯೋ, ಯುದ್ಧ ಬೇಕು ಅನ್ನಲೂ ಅಷ್ಟೇ ಕಾರಣಗಳು ಇವೆ—ಅಷ್ಟೇ ಅಲ್ಲ, ಅನೇಕ ಬಾರಿ ಅದರ ಕಾರಣವೇ ಇದರ ಕಾರಣವೂ ಆಗುವುದುಂಟು. ಯುದ್ಧ ಬೇಡ, ಏಕೆ ? ಶಾಂತಿ ಬೇಕು. ಆದರೆ ಶಾಂತಿಗಾಗಿ ಯುದ್ಧ ಬೇಕೇ ಬೇಕು.

ಇದೆಲ್ಲ ಚೆಕ್ಕುಬಂದಿ ಆಯಿತು. ಕಾರಣ ಏನು ?

ಕಾರಣಗಳಲ್ಲಿ ಎರಡು ಜಾತಿ—ಮೂಲ ಕಾರಣ ಮತ್ತು ತಾತ್ಕಾಲಿಕ ಕಾರಣ. ಮೂಲಕಾರಣ ಸದಾ ಇದ್ದೇ ಇದೆ. ಮತ್ತು ಒಂದೇ ಒಂದದು—ದೇವರಂತೆ. ಚಳುವಳಿಖೋರರ ಮನೋಭಾವವೇ ಮೂಲ ಕಾರಣ. ಗಿಡವಾಗಿ, ಮರವಾಗಿ ಬೆಳೆದು ಬೇರಿಳಿದು ಹೆಮ್ಮರವಾಗಿ ನಿಂತಿದೆ. ಇದಕ್ಕಿನ್ನು ಪರಿಹಾರವಿಲ್ಲ—ಆದರೆ ಹಾರ, ತುರಾಯಿ ಇವೆ ಇದಕ್ಕೆ. ದಡ್ಡರ ಕಾರ್ಯಭಾರದಲ್ಲಿ ಹಾರ, ತುರಾಯಿಗಳಿಗೆ ಬೆಲೆಯೇ ಇಲ್ಲ—ಕಸ ಅದು : ಕಾಲ್ಗಸ ಅಲ್ಲ. ಕತ್ಕಸ, ಹೂ ಮಾಲೆ.

ಇನ್ನು ತಾತ್ಕಾಲಿಕ ಕಾರಣ ?

ಓಹೋ ! ಒಂದೇ ? ಎರಡೇ ? ಹತ್ತೆ ? ನೂರೇ ? ಬೇಕಾದಷ್ಟಿವೆ. ಬೇಡಾದಷ್ಟೂ ಇವೆ.

ಶಾಲೆ ಮಕ್ಕಳದು ತಕರಾರು, ಏನಂತೆ ? ಹಿಂದಿನ ವಾರ ಹಿಂದಿ ಬೇಡ ಅಂದರು. ಆ ಹಿಂದಿನ ವಾರ ಇಂಗ್ಲಿಷ್ ಬೇಡ. ಈ ವಾರ ಲೆಕ್ಕ ಬೇಡ. ಮುಂದಿನ ವಾರ ಪರೀಕ್ಷೆ ಬೇಡ. ಆಯಿತು, ಬೇಕು ಏನು ? ಪಾಸು ಪಾಪ ! ಪಾಪ ! ನ್ಯಾಯವಾದ ಬೇಡಿಕೆ. ರಸ್ತೆ ದೀಪ ಒಡೆದರೆ ಬೇಡಿಕೆ ಈಡೇರುತ್ತೆಯೆ ? ಆ ಪ್ರಶ್ನೆ ಅವರದಲ್ಲ.

ಮಕ್ಕಳಿಗೆ ಬುದ್ಧಿ ಇಲ್ಲ. ಹೋಗಲಿ ಬಿಡಿ, ಮಕ್ಕಳ ತಂದೆಗೆ ? ಪಾಪ. ಅವರು ಮಾತ್ರ ಏನು ? ಮಗನಂತೆ ತಂದೆ ಅಲ್ಲವೇ ?

ನಲ್ಲಿಯಲ್ಲಿ ನೀರು ಬರುತ್ತಿಲ್ಲ. ಇದಕ್ಕೇನು ಉಪಾಯ ? ಬಲ್ಬ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಡೆಯುವುದು. ಬಲ್ಬ್ ಒಡೆದರೆ ನೀರು ಬರುತ್ತಯೆ ? ಇಲ್ಲ. ಕತ್ತಲಾಗುತ್ತದೆ. ಸಾಕು ನಮಗೆ–ನೀರಿಲ್ಲ, ಬೆಳಕೂ ಹೋಗಲಿ.

ಇನ್ನೊಂದು ವಾರ ಭಾಷಾ ಗೊಂದಲ, ಮತ್ತೊಂದು ವಾರ ರೇಷನ್ ಗೊಂದಲ. ಅಕ್ಕಿ, ಇತ್ಯಾದಿಗಳು ಎಷ್ಟೂ ಚೆನ್ನಾಗಿಲ್ಲ. ಏನಾಗಿದೆ ಅಕ್ಕಿ ? ಆಗುವುದೇನು ಬಂತು ? ಅಕ್ಕಿಯಲ್ಲಿ ಅಕ್ಕಿಯೇ ಇಲ್ಲ, ಬರೀ ಇತ್ಯಾದಿಗಳೇ ಇವೆ. ಇದಕ್ಕಾಗಿ ನಿರಶನ ವ್ರತ. ನಿರಶನ ವ್ರತ ಮಾಡಿ ಸತ್ತರೆ ಅಕ್ಕಿ ದೊರೆಯುತ್ತೆಯೆ ? ಸತ್ತರೆ ಎಲ್ಲವೂ ದೊರೆಯುತ್ತದೆ. ಆಂಧ್ರಪ್ರಾಂತ ದೊರೆತುದು ಹೇಗೆ ?

"ತುಟ್ಟಿ ಭತ್ತೆ ಹೆಚ್ಚು ಮಾಡಿ ದುಡಿಮೆ ಕಡಮೆ ಮಾಡಿಸಿ"

"ಕರ್ನಾಟಕವನ್ನು ಮಹಾರಾಷ್ಟ್ರಕ್ಕೆ ಸೇರಿಸಿ, ಉಳಿದ ಕೊಂಚ ಕೇರಳಕ್ಕೆ ಕೊಡಿ"

"ಪಾರ್ಟಿ ಅದೇ ಇರಲಿ, ಪಾರ್ಟಿ ಬದಲಿಸಿ."

"ಎಲೆಕ್‌ಟ್ರಿಕ್ ಬಿಲ್ ಕೊಡಿ. ಹಣ ಕೇಳಬೇಡಿ"

"ನೀರಿಗೆ ಹಾಲು ಬೆರೆಸುವುದು ನಮ್ಮ ಹಕ್ಕು."

"ಪುರುಷರಿಗೂ ಸಮಾನ ಹಕ್ಕು ಬೇಕು."

"ಬಂದೂಕು ತೋರಿಸಿ ಹಿಂದಿ ಕಲಿಸುತ್ತೇವೆ."

"ಚಾಕು ತೋರಿಸಿ ಸಂಗೀತ ಹಾಡಿಸುತ್ತೇವೆ"

"ಚೇಳು ಕುಟುಕಿಸಿ ಡ್ಯಾನ್ಸ್ ಮಾಡಿಸುತ್ತೇವೆ."

ನಮ್ಮ ಸಂಪದ್ಭರಿತ ಸಂಪನ್ಮೂಲ ಸುಸಂಪನ್ನ ರಾಜ್ಯದಲ್ಲಿ ಕರಾರಿಗೆ ಕೊರತೆಯೆ ? ಎಲ್ಲದಕ್ಕೂ ಕೊರತೆ ಇದೆ. ಚಳುವಳಿಗೆ ಕಾರಣದ ಕೊರತೆ ಎಂದೂ ಇಲ್ಲ.

[illegible library stamp]

ಈ ಎಲ್ಲ ಚಳುವಳಿಯ ಫಲ–ಬೀದಿಯ ಬಲ್ಬ್ ಒಡೆಯಿತು, ಬಸ್ ಗ್ಲಾಸು ಚೂರಾಯಿತು. ಯಾ[illegible]ಯಿತು. ಸರ್ವನಾಶ !

ಹಿಡಿ ಹಿಡಿ, ಹೊಡೆ–ಹೊಡೆ, [illegible] ಚಳುವಳಿಖೋರ. ತಿಂಮ ಅತ್ತ ಇತ್ತ ನೋಡುತ್ತ ಮಂಗನಂತೆ ನಿಂತಿದ್ದ. [illegible]ಬಿಟ್ಟರು.

"ಇವನೂ ಚಳುವಳಿಖೋರರ ಪೈಕಿ ಕಾಣುತ್ತಾನೆ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗೆಂದವರ ಮೇಲೆ ಕಣ್ಣು ಕಿಸಿದ ತಿಂಮಭೂಪ. ಸುಟ್ಟು ಹೋಗು ವಂತೆ ದುರುಗುಟ್ಟಿ ನೋಡಿದ.

"ಯಾರನ್ನಯ್ಯಾ ಚಳುವಳಿಖೋರ ಅಂದದ್ದು ? ಹಲ್ಲು ಉದುರಿಸಿ ಬಿಟ್ಟೇನು, ಹಲ್ಲು"

ಸಾವಕಾಶವಾಗಿ ಹೇಳಿದ ತನ್ನ ಆತ್ಮಚರಿತ್ರೆಯನ್ನು.

"ನಾನೂ ಕೆಲವು ಅದೂ ಇದೂ ಮಾಡಿದ್ದೇನೆ ನಿಜ. ಹಸಿವು ತಡೆಯ ಲಾರದೆ ಬ್ರೆಡ್ಡು, ಹಣ್ಣು ಕದ್ದಿದ್ದೇನೆ. ಕಾಸಿಗೆ ಅಡಚಣೆ ; ಜೇಬಿಗೆ ಬ್ಲೇಡ್ ಮದುವೆ ಮಾಡಿದ್ದೇನೆ. ಅಷ್ಟೇಕೆ, ಕುರುಡಿ ಬಿಕ್ಷುಕಳ ಕಾಸು ಹೊಡೆದಿದ್ದೇನೆ. ಐದು ರೂಪಾಯಿ ಕೊಟ್ಟರು, ಅವರು ತೋರಿಸಿದ ಮನೆಗೆ ಬೆಂಕಿ ಇಟ್ಟದ್ದುಂಟು. ಪ್ರಾಯದಲ್ಲಿದ್ದಾಗ ಸೆರೆ ಕುಡಿದು ಒಂದೆರಡು ಹೆಣ್ಣನ್ನು ಜುಲುಮೆಯಿಂದ ಭ್ರಷ್ಟ ಮಾಡಿದ್ದೇನೆ...ಇನ್ನೂ ಏನೇನೋ ಮಾಡಿದ್ದೇನೆ ಬಿಡಿ—ಆದರೆ... ಆದರೆ, ಆ ಚಳುವಳಿಖೋರ ಅಂದಿರಲ್ಲ...ಇನ್ನೊಮ್ಮೆ ಅನ್ನಿ, ಹಲ್ಲು ಉದುರಿಸಿ ಕೈಲಿ..."

ದೊಡ್ಡ ಮನುಷ್ಯನನ್ನು ಹಾಗನ್ನುವುದೇ ? ತಪ್ಪಾಯಿತೆಂದು ಹೇಳಿ ತಿಂಮನನ್ನು ಕೈ ಬಿಟ್ಟರು.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8323

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಪ್ರಕಟಣೆಗಳು

ಕೈ ಹಿಡಿದವಳ ಪುಣ್ಯ	.... ನಾಡಿಗೇರ ಕೃಷ್ಣರಾಯ	... ೨_೫೦
ದೇವರಹಸ್ಯ	.... ಮ. ನ. ಮೂರ್ತಿ	... ೨_೫೦
ಪ್ರೇಮದ ಪುನರ್ಜನ್ಮ	.... ಮಾ. ಭೀ. ಶೇ.	... ೨_೫೦
ಮುಟ್ಟಬೇಡ ಜೋಕೆ !	.... ವೆಲ್ಲಾಲ ಸತ್ಯಂ	... ೨_೫೦
ಗಾನನಂದಿನಿ	.... ನಾಡಿಗೇರ ಕೃಷ್ಣರಾಯ	... ೨_೫೦
ಕಾಲಸರ್ಪಿಣಿ	.... ಮ. ನ. ಮೂರ್ತಿ	... ೩_೦೦
ಕಾಂತಿಮತಿ	.... ನಾಡಿಗೇರ ಕೃಷ್ಣರಾಯ	... ೨_೫೦
ಅವ್ವಾವ್ರ ಕಾಲ್ಗುಣ	.... ಬೀಚಿ	... ೨_೦೦
ಮನೆಯಲ್ಲಿ ಮಹಾಯುದ್ಧ	.... ಅ. ನ. ಕೃ.	... ೨_೫೦
ಕನಸಿನ ರಾಣಿ	.... ನಾಡಿಗೇರ ಕೃಷ್ಣರಾಯ	... ೨_೫೦
ಚಿಗುರೆಲೆ ಬಾಡಿದಾಗ	.... ಕೆ. ಸರೋಜರಾವ್, ಬಿ.ಎ.	... ೩_೫೦

ಬರಲಿರುವ ಕಾದಂಬರಿಗಳು

ಮಾಗಿಯ ಕನಸು	.... ಕೆ. ಸರೋಜರಾವ್, ಬಿ.ಎ.
ಮಹೋಪಕಾರ ?	.... ಬೀಚಿ
ನರ-ನಾರಾಯಣ	.... ಅ. ನ. ಕೃ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಗನನ್ನು ದಾರಿಗೆ ತರಬೇಕೆಂದು ಶಂಕ್ರಯ್ಯ ಬಹು ಪ್ರಯತ್ನ ಮಾಡಿದರು. ಫಲಿತಾಂಶ? ತಂದೆಯೇ ದಾರಿ ಬಿಟ್ಟರು. ಅವರೇನು? ಮಗ ಕ್ಷಮಿಸಿದ.

* * *

ನೂರಾರು ಹಾವು ಹಿಡಿದ ಕಾಳಾಚಾರಿ, ಆಸ್ತಿಕ ಮಹಾರಾಜನೆಂಬ ಬಿರುದನ್ನೂ ಪಡೆದ: ಕಡೆಗೊಂದು ದಿನ ಸತ್ತ, ಪಾಪ! ಹೇಗೆ ಸತ್ತ ಆಸ್ತಿಕ ಮಹಾರಾಜ? ಹಾವು....ಹಾವು ಕಚ್ಚಿತೇ? ಕಚ್ಚಲಿಲ್ಲ—

* * *

ತಿಂಮ ಏನೇನೋ ಮಾಡಿದ್ದಾನೆ–ಬ್ರೆಡ್ಡು, ಹಣ್ಣು ಕದ್ದದ್ದುಂಟು. ಜೇಬಿಗೆ ಬ್ಲೇಡ್ ತಾಗಿಸಿದ್ದಾನೆ. ಅಷ್ಟೇಕೆ, ಕುರುಡಿ ಭಿಕ್ಷುಕಳ ಕಾಸು ಹೊಡೆದಿದ್ದಾನೆ. ಅದಾರದೂ ಮನೆಗೆ ಬೆಂಕಿ ಇಟ್ಟ ಭೂಪ. ಇನ್ನೂ ಏನೇನೋ ಅನ್ನಿ. ಆದರೆ ಈ ಒಂದನ್ನು ಮಾತ್ರ ಮಾಡಿಲ್ಲ ಎಂದು ಎದೆ ತಟ್ಟಿ ಹೇಳಿಕೊಳ್ಳುತ್ತಾನೆ. ಯಾವದದು? ಓದಿನೋಡಿ.

* * *

ಕಲಿಯುಗದಲ್ಲಿ ದೇವರ ಕೆಲಸವೂ ಸುಲಭ. ಅಂದಿನ ದ್ರೌಪದಿ, ಗಜರಾಜರಂತೆ ಆರ್ತನಿಗಾಗಿ ಯಾರು ಕಾಯುತ್ತ ಕೂಡುತ್ತಾರೆ? ಪೋಲೀಸರ ದವಡೆಯಲ್ಲಿ ಸಿಕ್ಕಿದ್ದ ದರೋಡೆಕಾರ ದೇವನ ಸಹಾಯವೂ ಇಲ್ಲದೆ ಪಾರಾದ. ಹೇಗೆ?

* * *

ಎಲ್ಲಕ್ಕೂ ಉತ್ತರ ಒಳಗಡೆಯೇ ಇದೆ

ಬೀchi

ಉತ್ತರಗಳು ಗೊತ್ತಿಲ್ಲ!

CC0. In Public Domain. Jangamwadi Math Collection, Varanasi